
ಸಂಪುಟ 20 ಸಂಚಿಕೆ 33
ಆಗಸ್ಟ್ 15, 1999 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ
ಐಕ್ಯರಂಗ

ಶತಮಾನದ ಮಹಾ ಹಗರಣ



ನಾಲ್ಕು ಪ್ರಶ್ನೆಗಳು



ಉಸ್ತುವಾರಿಗೆ ಪುರುಸೊತ್ತೇ ಇಲ್ಲದ ಆಡಳಿತದಲ್ಲಿ

ಅನೈತಿಕ ಪಟೇಲ್ ಸರ್ಕಾರ

ಇದು ಜನಗಳನ್ನು ಸಾಯಿಸುವ ಸರ್ಕಾರ

ಕರ್ನಾಟಕದಲ್ಲಿ ಸರ್ಕಾರ ಎಂಬುದು ಇದೆಯೆ? ಸರ್ಕಾರ ಇದೆ, ಅದಕ್ಕೆ ಮುಖ್ಯಮಂತ್ರಿಗಳು ಜೆ.ಎಚ್. ಪಟೇಲರೇ, ಅವರಿಗೆ ಮಂತ್ರಿಮಂಡಲವೆಂಬುದು ಇದೆ. ಆದರೆ ಮಂತ್ರಿಗಳು ಮಾತ್ರ ನಾಪತ್ತೆ. ವಿಧಾನಸೌಧದ ಕಛೇರಿಗಳ ಬಾಗಿಲುಗಳ ಬೀಗ ನಿದ್ರಿಸುತ್ತಿವೆ. ಸರ್ಕಾರ ತನ್ನ ಕೆಲಸ ಮಾಡುತ್ತಿದೆಯೆ? ಇದು ಪರಿಶೀಲಿಸುವಂತಹ ಪ್ರಶ್ನೆ. ಈಗಾಗಲೇ ಮುಖ್ಯಮಂತ್ರಿಗಳು ಮುಂದಿನ ರಾಜಕೀಯ ಭವಿಷ್ಯಕ್ಕಾಗಿ ಬಿಜೆಪಿಯ ಬಾಗಿಲು ಕಾಯುತ್ತಿದ್ದಾರೆ. ಕೆಲವು ಸಚಿವರನ್ನು ವಜಾಗೊಳಿಸಲಾಗಿದೆ. ದಿನದಿನವೂ ಅನೇಕರು ರಾಜಿನಾಮೆ ನೀಡುತ್ತಿದ್ದಾರೆ. ಇನ್ನು ಕೆಲವರು ತಮ್ಮ ಬಣದವರೆಂದೂ ಅಥವಾ ಬಣಕ್ಕೆ ಬರುಬಹುದೆಂದು ಅವರುಗಳ ರಾಜೀನಾಮೆಯನ್ನು ತಿರಸ್ಕರಿಸಲಾಗುತ್ತಿದೆ. ಉಳಿದವರು ಸರ್ಕಾರಿ ಸೌಲತ್ತುಗಳಲ್ಲಿ ಕ್ಷೇತ್ರಗಳ ದರ್ಶನ ಅಥವಾ ಅನ್ಯ ಪಕ್ಷಗಳ ಕಛೇರಿಯತ್ತ ತೆವಳುವ ಕೆಲಸದಲ್ಲಿ ನಿರತರು. ತಮಗೆ ವಿಧಾನಸಭೆಯಲ್ಲಿ ಬಹುಮತ ಇಲ್ಲವೆಂದು ಅರಿತರೂ, ರಾಜಿನಾಮೆ ಕೊಡದೇ, ಸರ್ಕಾರವನ್ನು ಉಳಿಸಿಕೊಂಡ 'ಚಾಣಾಕ್ಷ' ಮುಖ್ಯಮಂತ್ರಿಗಳ ಅಧಿಕಾರಲಾಲಸೆಯ ಬುದ್ದಿಮತ್ತೆ ಮತ್ತು 'ಸಮಾಜವ್ಯಾದಿ'ಯ ಭಂಡತನ ಮೆಚ್ಚಲೇಬೇಕು! ಈಗಾಗಲೇ ಸುಮಾರು ಎರಡು ಡಜನ್ ಸಚಿವರು ಪಟೇಲರಿಂದ ದೂರವುಳಿದಿದ್ದಾರೆ. ಅವರ ಎಲ್ಲಾ ಖಾತೆಗಳೂ ಪಟೇಲರ ಆಪ್ತರಿಗೆ ಮತ್ತೇ ಹಂಚಲಾಗಿದೆಯಾದರೂ ಏನೊಂದೂ ಪರಿಣಾಮಕಾರಿ ಕೆಲಸಗಳು ನಡೆಯುತ್ತಿಲ್ಲ. ಆಯಾ ಸಚಿವರಿಗೆ ಪರಿಸ್ಥಿತಿಯ ನಿಗಾವಣೆಯೇ ಇಲ್ಲ. ಆದರೆ ವಿವಾದ ನ್ಯಾಯಾಲಯದಲ್ಲಿದ್ದರೂ ಧಿಕ್ಕರಿಸಿ, ಕಛೇರಿ ನುಗ್ಗಲು ಮಾತ್ರ ಸಚಿವರು ಸಿದ್ಧರಾಗಿಬಿಡುತ್ತಾರೆ. ಹೀಗೆ ಸಚಿವ ಸ್ಥಾನದ ದುರುಪಯೋಗಗಳು ಆಗುತ್ತಲೇ ಇವೆ. ಅದಕ್ಕಾಗಿಯೇ ಸಂಪುಟವನ್ನು ಉಳಿಸಿಕೊಳ್ಳಲಾಗಿದೆ. ಇದು ಮರ್ಯಾದೆ ಬಿಟ್ಟ ಸಂಗತಿ.

ರಾಜ್ಯದಲ್ಲಿ ಗುಲ್ಬರ್ಗಾ, ಉತ್ತರಕನ್ನಡ, ಮಲೆನಾಡು ಮುಂತಾದ ಕಡೆ ವಿಪರೀತ ಮಳೆಯಿಂದ ಅತಿವೃಷ್ಟಿಯಾಗಿ ಅಪಾರ ಹಾನಿ ಸಂಭವಿಸಿದೆ. ಜನರು ಹಾಗೂ ದನಕರುಗಳು ಪ್ರಾಣ ಕಳೆದುಕೊಳ್ಳುತ್ತಿವೆ. ಈ ಗಂಭೀರ ಪರಿಸ್ಥಿತಿಯನ್ನು ಎದುರಿಸಲು

ಸಂಪಾದಕೀಯ

ಆಡಳಿತ ಸಿದ್ದವಿಲ್ಲ, ಸಂಬಂಧಿಸಿದ ಸಚಿವರುಗಳು ನಾಪತ್ತೆ. ಹಾಗಾದರೆ ಈ ಸರ್ಕಾರ ಇರುವುದು ಯಾವ ಪುರುಷಾರ್ಥಕ್ಕೆ? ಇದು ಜನರಪಾಲಿಗೆ ಸತ್ತ ಸರ್ಕಾರ-ಸಾಯಿಸುವ ಸರ್ಕಾರ. ಆದರೆ ಈ ಸರ್ಕಾರ ಜನರು ಚಳುವಳಿಗೆ ಇಳಿದಾಗ ಕ್ರಿಯಾಶೀಲವಾಗುತ್ತದೆ. ಪೋಲೀಸರ ಲಾಠೀ-ಬೂಟುಗಳು ಹರಿದಾಡುತ್ತವೆ. ಸರ್ಕಾರವೇ ಒಪ್ಪಿಕೊಂಡ ಬೇಡಿಕೆಗಳನ್ನು ಜಾರಿಗೊಳಿಸಿ ಎಂದು ಕೋಲಾರದಲ್ಲಿ ಶಾಂತ ರೀತಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಪಂಚಾಯತ ನೌಕರರ ಮೇಲೆ ಪೋಲೀಸರು ಅಮಾನುಷವಾಗಿ ಆಕ್ರಮಣ ಮಾಡಿದ್ದಾರೆ. ಬಾಸುಂಡೆ ಮೂಡುವಂತೆ ಹೊಡೆದಿದ್ದಾರೆ. ಮುಖಂಡರೂ ಒಳಗೊಂಡು ಅನೇಕರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಇಷ್ಟಲ್ಲದೇ ರಾಜಕೀಯ ಪಕ್ಷವೆಂಬುದನ್ನೂ ಪರಿಗಣಿಸದೇ ಸಿಪಿಐ(ಎಂ) ಪಕ್ಷದ ಕಛೇರಿಯ ಒಳಗೆ ಪೋಲೀಸರು ನುಗ್ಗಿ ಕಾರ್ಯಕರ್ತರನ್ನು ಬಡಿದಿದ್ದಾರೆ.

ಪಟೇಲರ ಬಣದವರೇ ಆದ ಇಬ್ಬರು ಸಚಿವರು ಈ ಬಗ್ಗೆ ಮೌನವಾಗಿದ್ದಾರೆ. ಈ ಮೌನವು ಅರ್ಥವಾಗುವಂತಹದ್ದು. ರಾಜಕೀಯವಾಗಿ ಸಿಪಿಐ(ಎಂ)ನ್ನು ಎದುರಿಸಲಾಗದೆ ಪೋಲೀಸರ ಮೂಲಕ ಅನಾಗರಿಕವಾಗಿ ವರ್ತಿಸಿದೆ. ಇದಕ್ಕಾಗಿ ಈ ಸರ್ಕಾರ ಇರಬೇಕೆ? ಹಾಗಾದರೆ ಮುಂಬರುವ ಚುನಾವಣೆಗಳಲ್ಲಿ ಈ ಸರ್ಕಾರ ನಿಷ್ಪಕ್ಷಪಾತವಾಗಿರಲು ಸಾಧ್ಯವೆ? ಖಂಡಿತ ಇಲ್ಲ.

ವಿಧಾನಸಭೆಯೇ ವಿಸರ್ಜನೆಗೊಂಡಿರುವಾಗ ಈ ಸರ್ಕಾರದ ಅಸ್ತಿತ್ವಕ್ಕೆ ಯಾವ ಸಂವಿಧಾನಾತ್ಮಕ ಅಥವಾ ನೈತಿಕ ನೆಲೆಇದೆ. ಇದು ಅನೈತಿಕ ಸರ್ಕಾರ. ವಾಜಪೇಯಿ ಅವರ ಕೃಪಾಕಟಾಕ್ಷದಲ್ಲಿ ಜೀವ ಉಳಿಸಿಕೊಂಡಿರುವ ಪಟೇಲರು ಇನ್ನಾದರೂ ರಾಜೀನಾಮೆ ಕೊಡಬೇಕು. ಚುನಾವಣೆಗಳು ಘೋಷಿತವಾಗಿರುವಾಗ ಹೊಸದಾಗಿ ಜನಾದೇಶ ಪಡೆದು ಹೊಸ ಮುಖ್ಯಮಂತ್ರಿಯಾಗಿ ವಾಪಾಸ್ಸಾಗಲಿ. ಆದರೆ ಪ್ರಶ್ನೆಯೆಂದರೆ ಪಟೇಲರಿಗೆ ಈ ಧೈರ್ಯವಿಲ್ಲ. ಕರ್ನಾಟಕದ ಜನತೆ ಕಾಂಗ್ರೆಸ್-ಬಿಜೆಪಿಗಳನ್ನು ತಿರಸ್ಕರಿಸಿ ದಳದ ಸರ್ಕಾರವನ್ನು ಅಧಿಕಾರಕ್ಕೆ ತಂದರು. ಶಕ್ತಿ ರಾಜಕಾರಣದ ಸಂಘರ್ಷದಲ್ಲಿ ಎಳ್ಳಷ್ಟೂ ಕಷ್ಟಪಡದೆ ಅಧಿಕಾರದ ಗದ್ದುಗೆ ಏರಿದ ಪಟೇಲರಿಗೆ ಜನಾದೇಶ, ಪ್ರಜಾಪ್ರಭುತ್ವ ಅರ್ಥವಿಲ್ಲದ ಮಾತುಗಳಾಗಿ ಕಾಣಿಸುತ್ತಿರಬಹುದು, ಆದ್ದರಿಂದ ಹೇಗೊ ಏನೊ ಅನ್ಯರ ಹೆಗಲ ಮೇಲೆ ಸವಾರಿ ಮಾಡುವ ರಾಜಕೀಯ ಗೀಳು. ಕೋಮುವಾದಿಗಳ ಜೊತೆ ಕೈಜೋಡಿಸಿರುವ ಇಂತಹ ಶಕ್ತಿಗಳನ್ನು ರಾಜಕಾರಣದಿಂದ ನಿವೃತ್ತಿ ಮಾಡುವುದು ಜನತೆಯ ಆದ್ಯತೆಯ ಆಯ್ಕೆಯಾಗಬೇಕು.



ಕೃಪೆ: ಜನವಾಹಿನಿ

ನಿಮ್ಮ ಪ್ರಶ್ನೆ ? ನಮ್ಮ ಉತ್ತರ

ಸಾಮಾನ್ಯವಾಗಿ ಕಾಂಗ್ರೆಸ್, ಬಿಜೆಪಿ ಹಾಗೂ ಇದರ ಮಿತ್ರ ಪಕ್ಷಗಳು ಮ... ಇನ್ನಿತರ ಪಕ್ಷಗಳು ಜನರಿಗೆ ವಂಚಿಸುವುದನ್ನು ಬಯಲಿಗೆಳೆಯುತ್ತಾ ಟೀಕಿಸು... ಬಂದಿರುವಿರಿ. ಅದೇ ರೀತಿ ಬಹುಜನ ಸಮಾಜ ಪಕ್ಷ (ಬಿ.ಎಸ್.ಪಿ.) ದಲಿ... ಪಕ್ಷವೆಂದೂ, ಅದು ಅಧಿಕಾರಕ್ಕೆ ಬಂದರೆ ದಲಿತರಿಗಾಗುತ್ತಿರುವ ಶೋಷ... ನಿಲ್ಲುತ್ತದೆ, ದಲಿತರೆಲ್ಲರು ಸ್ವಾವಲಂಬಿಗಳಾಗುತ್ತಾರೆಂಬ ಘೋಷಣೆಯೊಂದಿ... ಕೆಲಸ ಮಾಡುತ್ತಿದ್ದಾರೆ. ಈ ಪಕ್ಷದ ಬಗ್ಗೆ ನಿಮ್ಮ ನಿಲುವೇನು?

- ಬಿ.ರಾಜಶೇಖರ ಮೂ...

ಬಹುಜನ ಸಮಾಜ ಪಕ್ಷ ಉತ್ತರ ಪ್ರದೇಶ, ಪಂಜಾಬ್, ಮಧ್ಯ ಪ್ರದೇಶಗಳಲ್ಲಿ ಗಣನೀಯ ಶಕ್ತಿಯನ್ನುಳ್ಳ ರಾಜಕೀಯ ಪಕ್ಷ. ದಲಿತ ನಾಯಕರಾದ ಕಾನ್ಶಿರಾಂ ಮತ್ತು ಮಾಯಾವತಿ ಇವರು ಉತ್ತರ ಭಾರತದ ಪಾಳೇಗಾರಿ, ಅರೆ ಪಾಳೆಗಾರಿ ವಾತಾವರಣ ದಲ್ಲಿ ಪಾಳೇಗಾರಿ ಭೂಮಾಲಿಕರು, ಜಾತಿ ಪದ್ಧತಿ, ಅಸ್ಪೃಶ್ಯತೆಗಳನ್ನು ಬಳಸಿಕೊಂಡು ಕೃಷಿ ಕೂಲಿಕಾರರಾದ ದಲಿತರನ್ನು ತೀವ್ರ ಶೋಷಣೆಗೆ ಒಳಪಡಿಸಿದ್ದಾರೆ. ಇಡೀ ದೇಶದಲ್ಲಿಯೇ ದಲಿತರ ಮೇಲೆ ಅತ್ಯಂತ ಹೆಚ್ಚು ದೌರ್ಜನ್ಯಗಳು ನಡೆಯುವ ಉತ್ತರ ಪ್ರದೇಶದಲ್ಲಿ ಭೂಮಾಲಿಕರ ಅಟ್ಟಹಾಸ ದಬ್ಬಾಳಿಕೆಗಳಿಂದ ಭಯ ಭೀತರಾಗಿರುತ್ತಾರೆ. ಇಂತಹ ಸಂದರ್ಭದಲ್ಲಿ ದಲಿತ ನಾಯಕರಾದ ಕಾನ್ಶಿರಾಂ ಮತ್ತು ಮಾಯಾವತಿಯವರು ಈ ಪರಿಸ್ಥಿತಿಯಲ್ಲಿ ದಲಿತರನ್ನು ಸೆಳೆದುಕೊಳ್ಳಲು ದಲಿತರೆಲ್ಲಾ ಒಂದಾಗಬೇಕು, ಇತರ ಜಾತಿಗಳ ವಿರುದ್ಧ ಸಿಡಿದೇಳಬೇಕು, ಬಿ.ಎಸ್.ಪಿ. ಅಧಿಕಾರಕ್ಕೆ ಬರುವ ಮೂಲಕ ಮಾತ್ರವೇ ದಲಿತರ ಮೇಲಿನ ಶೋಷಣೆ ನಿರ್ಮೂಲನ ವಾಗುವುದು ಎಂಬ ಘೋಷಣೆಗಳೊಂದಿಗೆ ದಲಿತರನ್ನು ಸೆಳೆಯಲು ಬೇಕಾದ ಆಕರ್ಷಕ ವಾಗ್ಝರಿಯನ್ನು ಹರಿಯಬಿಡುತ್ತಿದ್ದಾರೆ. ಅಲ್ಲಿನ ಈ ದಬ್ಬಾಳಿಕೆ ದಲಿತರನ್ನು ಬಿ.ಎಸ್.ಪಿ.ಯ ಕಡೆ ನೂಕಿದೆ ಕೂಡ. ಆದುದರಿಂದ ಬಿ.ಎಸ್.ಪಿ.ಗೆ ಈ ಮೂರು ರಾಜ್ಯಗಳಲ್ಲಿ ಗಣನೀಯವಾದ ಮತಗಳು ಬರುತ್ತವೆ. ಆದರೆ ಬಿ.ಎಸ್.ಪಿ. ಯ ಈ ನಾಯಕರು ಬಾಯಲ್ಲಿ ಮನುವಾದದ ವಿರುದ್ಧ ಎಂದು ಘೋಷಿಸಿಕೊಂಡರೂ ಕೃತಿಯಲ್ಲಿ ಉತ್ತರ ಪ್ರದೇಶದಲ್ಲಿ ಅತ್ಯಂತ ತೀವ್ರ ಮನುವಾದವನ್ನು ಪ್ರತಿಪಾದಿಸುವ ಬಿಜೆಪಿಯೊಂದಿಗೆ ಕೈ ಜೋಡಿಸಲು ಆ ಮೂಲಕವಾಗಿ ಬಿಜೆಪಿ ಬಹುಜನ ಸಮಾಜ ಪಕ್ಷವು ಸೇರಿದಂತೆ ಉಳಿದ ಸೆಕ್ಯುಲಾರ್ (ಧರ್ಮನಿರಪೇಕ್ಷ) ಪಕ್ಷಗಳನ್ನು ಒಡೆದು ಚೂರು ಚೂರು ಮಾಡಲು ಆ ಮೂಲಕವಾಗಿ ಅತ್ಯಂತ ಭ್ರಷ್ಟ ಹಾಗೂ ಕೋಮುವಾದಿ ಆಡಳಿತ ನಡೆಯಲು ಆಧಾರ ಒದಗಿಸಿಕೊಟ್ಟಿದೆ. ಈ ರೀತಿಯಲ್ಲಿ ಅತ್ಯಂತ ಸಂದರ್ಭಸಾಧಕತನದ ನೀತಿಯನ್ನು ಬಿ.ಎಸ್.ಪಿ. ರಾಜಕೀಯ ಬಿಕ್ಕಟ್ಟಿನ ಪ್ರತಿಯೊಂದು ಸಂದರ್ಭ ದಲ್ಲಿಯೂ ಅನುಸರಿಸುತ್ತಾ ಬಂದಿದೆ. ಒಂದು ರೀತಿಯಲ್ಲಿ ಬೆಂದ ಮನೆಯಲ್ಲಿ ಹಿರಿದಷ್ಟೇ ಲಾಭ ಎನ್ನುವ ನೀತಿ ಅವರದ್ದು.


ಜೊತೆಗೆ ದಲಿತರ ಮೇಲಿನ ದೌರ್ಜನ್ಯ ದಬ್ಬಾಳಿಕೆಗಳನ್ನು ತೊಲಗಿಸಲು ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಅವಶ್ಯ ವಾದ ಬೇರೆ ಯಾವ ಆರ್ಥಿಕ, ರಾಜಕೀಯ, ಸಾಮಾಜಿಕ ಧೋರಣೆಗಳು ಮತ್ತು ಹೋರಾಟಗಳು ಇಲ್ಲ. ದಲಿತರ ಮೇಲಿನ ದೌರ್ಜನ್ಯ ತೊಲಗಿಸಲು ಅವರು ಸ್ವಾವಲಂಬಿಗಳಾಗಲು ಅಗತ್ಯವಾದ ಭೂ ಸುಧಾರಣೆ, ಪಾಳೇಗಾರಿ ಭೂಮಾಲಿಕರ ಬೆನ್ನು ಮೂಳೆ ಮುರಿಯಲು ಅವಶ್ಯವಾದ ದಲಿತ ಮತ್ತು ದಲಿತೇತರ ಐಕ್ಯ ಹೋರಾಟಗಳನ್ನು ರೂಪಿಸುವ ಯೋಚನೆ, ಜಾತಿ ಪದ್ಧತಿಯ ವಿರುದ್ಧ ಹೋರಾಟ, ಹೊಸ ಆರ್ಥಿಕ ನೀತಿಯ ವಿರುದ್ಧ ಹೋರಾಟ ಇಂತಹ ಅನೇಕ ವಿಷಯಗಳಲ್ಲಿ ಬಿ.ಎಸ್.ಪಿ.ಗೆ ಧೋರಣೆ ಎಂಬುದೇ ಇಲ್ಲ,ಆಸಕ್ತಿಯೂ ಇಲ್ಲ. ಈ ಪ್ರಶ್ನೆಗಳಿಗಾಗಿ ಹೋರಾಟ ಮಾಡುವುದು ವ್ಯರ್ಥ ಎಂಬುದು ಅವರ ಭಾವನೆ. ಹೀಗಾಗಿ ಅವರದು ಒಂದೇ ಮಂತ್ರ - ನಮ್ಮನ್ನು ಅಧಿಕಾರಕ್ಕೆ ತಂದು ಬಿಡಿ, ಆಗ ಎಲ್ಲಾ ಸಮಸ್ಯೆಗಳು ತಮ್ಮಿಂದ ತಾನೇ ಬಗೆ ಹರಿಸಿಬಿಡುತ್ತೇವೆ. ಈ ಮೂಲಕವಾಗಿ ದಲಿತರಲ್ಲಿ ಭೂಸುಧಾರಣೆಯ ಅವಶ್ಯಕತೆ, ಕನಿಷ್ಟ ಕೂಲಿ, ಶಿಕ್ಷಣ, ಉದ್ಯೋಗ ಇವುಗಳ ಬಗ್ಗೆ ಎಚ್ಚರ ಮೂಡಿಸದೆ ಕೇವಲ ಜಾತಿ ಪ್ರಜ್ಞೆಯ ಮೇಲೆ ಮಾತ್ರ ಆಧಾರ ಪಟ್ಟು ದಲಿತರನ್ನು ಪ್ರತ್ಯೇಕಗೊಳಿಸುತ್ತಿದ್ದಾರೆ. ಮತ್ತು ದಲಿತ ಮತ್ತು ದಲಿತೇತರರ ನಡುವೆ ದ್ವೇಷವನ್ನು ಬಿತ್ತುತ್ತಾ ದಲಿತರ ವಿಮೋಚನೆಯ ಹೋರಾಟಕ್ಕೆ ದೊಡ್ಡ ಅನ್ಯಾಯವನ್ನೇ ಮಾಡುತ್ತಿದ್ದಾರೆ. ಈ ಮೂಲಕವಾಗಿ ಪಾಳೇಗಾರಿ ಭೂಮಾಲಿ... ಶಕ್ತಿಗಳಿಗೆ ಸಹಾಯ ಹಸ್ತ ಚಾಚುತ್ತಿದ್ದಾ... ಹೀಗಾಗಿ ಬಂಡವಾಳಶಾಹಿ ಭೂಮಾಲಿ... ವ್ಯವಸ್ಥೆಯ ವಿರುದ್ಧ ಸಿಡಿದೇಳ... ಶಕ್ತಿಯಾಗದೆ ಈ ವ್ಯವಸ್ಥೆಯನ್ನ... ಮುಂದುವರೆಸಲು ಸಹಕರಿಸು... ಬಂಡವಾಳಶಾಹಿ ಪಕ್ಷವಾಗಿದ್ದಾರೆ.

ಹೊಸ ಆರ್ಥಿಕ ನೀತಿಯ ಗದ... ಪ್ರಹಾರ, ಕೋಮುವಾದದ ಬೆಳವಣ... ಇವುಗಳಿಂದ ದಲಿತರಿಗೇ ಹೆಚ್... ಅಘಾತವಾಗುತ್ತಿರುವ ಸಂದರ್ಭದ... ದಲಿತರಲ್ಲಿ ಪ್ರತಿಭಟಿಸುವ ಕಿಚ್... ಮೂಡುತ್ತಿರುವುದನ್ನು ಸಿಪಿಐ(ಎಂ... ಸ್ವಾಗತಿಸುತ್ತದೆ. ದಲಿತರ ಮೇಲಿನ ಎ... ರೀತಿಯ ದಬ್ಬಾಳಿಕೆ, ದೌರ್ಜನ್ಯ ಮು... ಶೋಷಣೆಗಳ ಸಂದರ್ಭಗಳಲ್ಲಿ ಅವ... ಜೊತೆ ನಿಲ್ಲುತ್ತದೆ. ವರ್ಗ ಹೋರಾ... ದೊಂದಿಗೆ ಜಾತಿ ಪದ್ಧತಿಯ ವಿರು... ಹೋರಾಟವನ್ನು ಬೆಸೆದು ಅಸ್ಪೃಶ್ಯತೆಯ... ನಾಶಪಡಿಸುವ ಪ್ರಬಲ ಹೋರಾಟಗಳ... ಸಾಗಿಸಬೇಕು ಎನ್ನುವ ಧೋರ... ಹೊಂದಿದೆ. ಇಂತಹಗುರಿ ಕೈಗೂಡ... ದಲಿತ ಮತ್ತು ದಲಿತೇತರ ಶೋಷಿ... ಒಗ್ಗಟ್ಟು ಮೂಡಿಸುವುದಕ್ಕಾಗಿ ಶ್ರಮಿಸುತ್ತ... ಈ ಹಿನ್ನೆಲೆಯಲ್ಲಿ ದಲಿತ ಸಂಘಟನೆ... ಶಕ್ತಿಗಳ ಜೊತೆಯಲ್ಲಿ ಕೈ ಜೋಡಿಸ... ಸಿದ್ಧವಿದೆ. ಆದರೆ ಮೇಲೆ ಹೇಳ... ಬಿ.ಎಸ್.ಪಿ. ನೀತಿಗಳ ಕಾರಣವಾ... ಅದರೊಂದಿಗೆ ಕೂಡಿ ಹೋರಾ... ಮಾಡುವುದು ಅಸಾಧ್ಯವಾಗುವ ಪರಿ... ನಿರ್ಮಾಣವಾಗಿದೆ. ಹೀಗಾಗಿ ಬಿಎಸ್... ಹಾಗೂ ಅನೇಕ ದಲಿತ ಸಂಘಟನೆಗ... ದಲಿತರ ಇಂದಿನ ಸ್ಥಿತಿಯ ಲಾಭ ಪಡೆ... ಕೆಲವು ವ್ಯಕ್ತಿಗಳು ಅಧಿಕಾರ... ಏಣಿಯನ್ನೇರುವುದಕ್ಕೆ ಮಾತ್ರ ದಲಿತರ... ಉಪಯೋಗಿಸಲಾಗುತ್ತಿದೆ ಎಂಬುದ... ದಲಿತರು ಅರಿತುಕೊಳ್ಳಬೇಕು ಎಂ... ಐಕ್ಯರಂಗ ಬಯಸುತ್ತದೆ.

ಇ.ಎಂ.ಎಸ್. ಭವನ ನಿಧಿ



ಹಿಂದಿನ ಮೊತ್ತ	14,27,357.50
ಹಿತೈಷಿ,ವಿರಾಜಪೇಟೆ, ಕೊಡಗು	2500
ಡಿವೈಎಫ್ಐ ರಾಜ್ಯ ಸಮಿತಿ	175
ಎಸ್.ಎಫ್.ಐ. ರಾಯಚೂರು ತಾ. ಸಮಿತಿ	125
ಎಸ್ಎಫ್ಐ ಧಾರವಾಡ ತಾ. ಸಮಿತಿ	55
ಎಸ್ಎಫ್ಐ ಗಜೇಂದ್ರನಗರ ಸಮಿತಿ	25
ಎಸ್ಎಫ್ಐ ಕೋಲಾರ ಜಿಲ್ಲಾ ಸಮಿತಿ	21
ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿ ಮೂಲಕ ಎಸ್.ಮುನ್ನೂರು	200
ಕೃಷ್ಣಪ್ಪ	100
ಟಿ.ಮಂಜುನಾಥ	100
ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿ ಮೂಲಕ ಡಾ।। ಬಿ.ಕೃಷ್ಣಮೂರ್ತಿ, ನಿವೃತ್ತ ಪ್ರಾಧ್ಯಾಪಕರು ಮೊದಲ ಕಂತು	500
ಡಾ।। ಕದಂ, ಪ್ರಾಧ್ಯಾಪಕರು, ಕೆ.ಎಂ.ಸಿ., ಹುಬ್ಬಳ್ಳಿ	300
ಸಿಪಿಐ(ಎಂ) ಉತ್ತರ ಕನ್ನಡ ಜಿಲ್ಲಾ ಸಮಿತಿ	600
ಸಿಪಿಐ(ಎಂ) ಮಲೆನಾಡು ಪ್ರಾದೇಶಿಕ ಸಮಿತಿಮೂಲಕ ಆರ್.ಡಿ.ಡೋಮಿನಿಕ್ ಫೋರ್ಮುಲಾ ಮೋಟಾರ್ಸ್, ಚಿಕ್ಕಮಗಳೂರು	1000
ಎಂ.ರಾಘಶೆಟ್ಟಿ ಮಲೆನಾಟು ಪ್ರಾದೇಶಿಕಸಮಿತಿ ಸದಸ್ಯರು	500
ಕಾಂ. ಎನ್.ಕೆ.ಉಪಾಧ್ಯಾಯರ ಮೂಲಕ ಸಂಗ್ರಹ	1000
ಕೆ.ಆರ್.ಹೆಗ್ಡೆ, ಬೆಂಗಳೂರು	1000
ಕಾಂ. ಕಪನಿಪತಿ, ಬೆಂಗಳೂರು	1000
ಸಿಪಿಐ(ಎಂ) ವಿರಾಜಪೇಟೆ, ಕೊಡಗು ಶಾಖೆ ಮೂಲಕ	
ಇಬ್ರಾಹಿಂ ಎಂ.ಎ.	50[...]
ವೇಲಾಯುಧನ್ ಎನ್.ಕೆ.	10[...]
ಶಂಶುದ್ದೀನ್	10[...]
ಮೋಹನ	5[...]
ರಾಜನ್ ಕೆ.ಡಿ.	[illegible]
ಕಾಲಿದ್	[illegible]
ಪದ್ಮಿನಿ.ಪಿ.ಕೆ	[illegible]
ಕಾವೇರಿ	[illegible]
ಮುರುಳಿ	[illegible]
ಸುನೀಲ್	[illegible]
ಪಿ.ಶ್ರೀಧರನ್	[illegible]
ಒಟ್ಟು ಮೊತ್ತ	14,37,709.[...]



ಬಿ.ಇ.ಎಂ.ಎಲ್.ನ ಬೆಂಗಳೂರು ಸಂಕೀರ್ಣದ ಸಿಐಟಿಯು... ಫೋರಂ ಇ.ಎಂ.ಎಸ್. ಭವನ ನಿಧಿಗೆ 20,000 ರೂಪಾಯಿ... ನೀಡಿದೆ. ಈ ದೇಣಿಗೆ ಚೆಕ್ಕನ್ನು ಟ್ರಸ್ಟಿನ ಕಾರ್ಯದರ್ಶಿಗಳಾದ ವಿ.ಜೆ.ಕೆ.ನಾಯರ್‌ರವರು ಕಾಂ.ಶರಣಪ್ಪನವರಿಂದ ಸ್ವೀಕರಿಸಿದರು.

ಅನ್ನ ಕೇಳಿದರೆ ಲಾಠಿ ಏಟು ತೆಗೆದುಕೊಳ್ಳಿ ಎನ್ನುತ್ತಿದೆ ಪಟೇಲರ ಪೋಲೀಸ್ ಇಲಾಖೆ

ಗ್ರಾಮಪಂಚಾಯತಿ ನೌಕರರ ಮೇಲೆ ಲಾಠಿ ಪ್ರಹಾರ

ಇತ್ತೀಚಿನ ದಿನಗಳಲ್ಲಿ ಪೋಲೀಸರನ್ನು ಉಪಯೋಗಿಸಿ ಾರ್ಮಿಕರ ಹೋರಾಟಗಳನ್ನು ಸದೆಬಡಿಯಲಾಗುತ್ತಿದೆ. ದಕ್ಕೆ ಇತ್ತೀಚಿನ ನಿದರ್ಶನ ಕೋಲಾರದಲ್ಲಿ ಗ್ರಾಮ ಂಚಾಯತ್ ನೌಕರರ ಮೇಲೆ ನಡೆದ ಲಾಠೀ ಪ್ರಹಾರದ ಟನೆ.

ಜೂನ್ 24 ರಂದು ಸರಕಾರ ರಾಜ್ಯದ 30,000 ಸಾವಿರ ೌಕರರಿಗೆ ಕನಿಷ್ಟ ವೇತನ ನಿಗದಿ ಪಡಿಸಿ ಆದೇಶ ೊರಡಿಸಿದೆ. ಗ್ರಾಮ ಪಂಚಾಯತುಗಳಿಗೆ ತನ್ನ ನೌಕರರ ಬಗ್ಗೆ ನಿಷ್ಟ ಕಾಳಜಿಯೂ ಇಲ್ಲದೆ ಈ ವೇತನ ಹೆಚ್ಚಳದ ಆದೇಶ ೂಲೆಗುಂಪಾಗುವ ಸಾಧ್ಯತೆಯೇ ಹೆಚ್ಚು. ಹೀಗಾಗದಂತೆ ಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್‌ನವರು ಸರಕಾರದ ದೇಶ ಜಾರಿಗೆ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿ ರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ಜ್ಯ ಸಮಿತಿಯು ಜಿಲ್ಲಾ ಮಟ್ಟದಲ್ಲಿ ಮತ ಪ್ರದರ್ಶನ ಡೆಸುವಂತೆ ನೌಕರರಿಗೆ ಕರೆ ನೀಡಿತು.

ದಿನಾಂಕ 2.8.99 ಮತ್ತು 9.9.99 ರಂದು ಮತ ್ರದರ್ಶನ ನಡೆಸಲು ತಿಳಿಸಲಾಗಿತ್ತು. 2.8.99 ರಂದು ವೇತನ ದೇಶ ಜಾರಿಗೆ ಒತ್ತಾಯಿಸಿ ಸುಮಾರು 600 ನೌಕರರು ೆರವಣಿಗೆ ಮೂಲಕ ಕೋಲಾರ ಜಿಲ್ಲಾ ಪಂಚಾಯತ್‌ಗೆ ಗಮಿಸಿ ಧರಣಾ ಕಾರ್ಯಕ್ರಮ ನಡೆಸಿದ್ದರು.

ೇಜವಾಬ್ದಾರಿ ಅಧಿಕಾರಿಗಳು

ಈ ಕಾರ್ಯಕ್ರಮದ ಕುರಿತು ಒಂದು ವಾರ ುಂಚಿತವಾಗೇ ಕೋಲಾರ ಜಿಲ್ಲಾ ಪಂಚಾಯತ್ ಮುಖ್ಯ ಾರ್ಯನಿರ್ವಾಹಕ ಅಧಿಕಾರಿಗೆ ತಿಳಿಸಿದ್ದರೂ ಚುನಾವಣೆ ಪವೊಡ್ಡಿ ಅವರು ಜಿಲ್ಲಾ ಪಂಚಾಯತ್‌ದಲ್ಲಿ ಲಭ್ಯ ರಲಿಲ್ಲ. ಉಪಕಾರ್ಯದರ್ಶಿಗಳೊಟ್ಟಿಗೆ ಒಂದು ವಾರ ೊದಲೇ ಚರ್ಚೆ ನಡೆಸಲಾಗಿತ್ತು. ರಾಜ್ಯದ ವಿವಿಧ ಲ್ಲೆಗಳಲ್ಲಿ ಸೇವಾ ನಿಯಮಾವಳಿ ಒಳಗೊಂಡ ಸುತ್ತೋಲೆ ೊರಡಿಸಲಾಗಿದೆ. ಪಂಚಾಯತ ಕಾನೂನಿನಲ್ಲೇ ಗ್ರಾಚ್ಯೂಟಿ ೊಡಬೇಕೆಂದಿದ್ದರೂ ಬೆಳಗಾವಿ ಜಿಲ್ಲೆ ಬಿಟ್ಟು ಇತರ ಕಡೆ ಾರ್ಯಗತವಾಗಿಲ್ಲ. ವೇತನ ಹೆಚ್ಚಳದ ಆದೇಶ ಜಾರಿಗೆ ಮ, ಧಾರವಾಡ ಜಿಲ್ಲಾ ಪಂಚಾಯತ್ ಮಾದರಿಯ ಸೇವಾ ಯಮಾವಳಿ ಕುರಿತಾದ ಸುತ್ತೋಲೆ, ಬೆಳಗಾಂವಿ ಮಾದರಿಯ ಗ್ರಾಚ್ಯೂಟಿ ಕುರಿತು ಸುತ್ತೋಲೆ ಈ ಮೂರು ಅಂಶಗಳನ್ನೊಳಗೊಂಡ ಸುತ್ತೋಲೆ ಹೊರಡಿಸುವಂತೆ ಸಂಬಂಧಿತ ಅಧಿಕಾರಿಗಳನ್ನು ವಿನಂತಿಸಿಕೊಳ್ಳಲಾಗಿತ್ತು. ಸಿ.ಇ.ಓ. ಒಪ್ಪಿಕೊಂಡು ಕರಡು ರೂಪಿಸಲು ಕಾರ್ಯದರ್ಶಿಗೆ ಸೂಚಿಸಿದರು.

2.8.99 ರಂದು ಸಿಇಓ ಲಭ್ಯ ಇಲ್ಲದ್ದರಿಂದ ಮನವಿ ಸ್ವೀಕರಿಸಿದ ಉಪಕಾರ್ಯದರ್ಶಿಯು ಬೇಡಿಕೆಗಳ ಬಗ್ಗೆ ಸರಕಾರಕ್ಕೆ ತಿಳಿಸಲಾಯಿತು ಎಂದು ಉಡಾಫೆಯ ಉತ್ತರ ನೀಡಿದರು. ನೌಕರರು ಈ ಬೇಜವಾಬ್ದಾರಿ ಉತ್ತರವನ್ನು ಪ್ರತಿಭಟಿಸಿ ಸ್ಥಳೀಯ ಮಟ್ಟದಲ್ಲಿ ಕ್ರಮಕೈಗೊಳ್ಳಬೇಕಾಗಿರುವುದರಿಂದ ಈ ಬಗ್ಗೆ ಒತ್ತಾಯಿಸಿದರು. ಉಪಕಾರ್ಯದರ್ಶಿ ಸೂಕ್ತ ಪ್ರತಿಕ್ರಿಯೆ ನೀಡದ್ದರಿಂದ ಸಿ.ಇ.ಓ.ಬರುವವರೆಗೆ ನಾವು ಧರಣಾ ಮುಂದುವರೆಸುತ್ತೇವೆ ಎಂದು ನೌಕರರು ಜಿಲ್ಲಾ ಪಂಚಾಯತ ಎದುರು ಕುಳಿತಿದ್ದರು.

ಲಾಠೀ ಪ್ರಹಾರ

ಆಗ ದಿಢೀರ್ ಆಗಿ ಯುದ್ಧಕ್ಕೆ ಹೊರಟವರಂತೆ ಗ್ರಾಮಾಂತರ ಎಸ್.ಪಿ. ಹುಸೇನ, ಸರ್ಕಲ್ ಇನ್ಸ್‌ಪೆಕ್ಟರ್ ನಾರಾಯಣಪ್ಪ, ಗ್ರಾಮಾಂತರ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಸಂಪತ್ ಕುಮಾರ್ ಇವರನ್ನೊಳಗೊಂಡ ಪೋಲೀಸ್ ಪಡೆ ಮಾತನಾಡಲೂ ಅವಕಾಶ ನೀಡದೆ ನೆರೆದ ನೌಕರರನ್ನು ತೀವ್ರವಾಗಿ ಥಳಿಸಿದ್ದಾರೆ. ಗಾಬರಿಗೊಂಡು ಓಡಿದ ನೌಕರರನ್ನು ಅಟ್ಟಿಸಿಕೊಂಡು ಹೋಗಿ ಮನಸೋಇಚ್ಛೆ ಹೊಡೆದಿದ್ದಾರೆ. ಸುಮಾರು 50 ಜನರಿಗೆ ಗಾಯಗಳಾಗಿವೆ.

ಪಂಚಾಯತ್ ನೌಕರರ ಸಂಘದ ಕೋಲಾರ ಜಿಲ್ಲಾ ಅಧ್ಯಕ್ಷ ನಾರಾಯಣ ಸ್ವಾಮಿ ಹಾಗೂ ಮತಪ್ರದರ್ಶನಕ್ಕೆ ಸೌಹಾರ್ದ ಬೆಂಬಲ ಸೂಚಿಸಲು ಬಂದಿದ್ದ ಹೋಳೂರು ಶಂಕರ ಇವರನ್ನು ಕೈ ಮುರಿಯುವಂತೆ ಹೊಡೆದಿದ್ದಾರೆ. ಈ ಇಬ್ಬರೂ ಮುಖಂಡರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ.

ಸಂಘದ ಕಾರ್ಯದರ್ಶಿ ಪಿ.ಆರ್.ಸೂರ್ಯನಾರಾಯಣ ಸಹಿತ 50 ಮಂದಿಯನ್ನು ಬಂಧಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಸಂಜೆ ಬಿಡುಗಡೆಗೊಳಿಸಿದ್ದಾರೆ.

ಕಛೇರಿ ಮೇಲೆ ಧಾಳಿ

ಕೋಲಾರ ಜಿಲ್ಲೆಯಲ್ಲಿ ರೈತ ಕಾರ್ಮಿಕರ ಚಳುವಳಿ ಕೆಲವು ದಶಕಗಳಿಂದ ನಿರಂತರವಾಗಿ ನಡೆದಿವೆ. ಹಿಂದೆಂದೂ ನಡೆಯದ ಘಟನೆ - ಸಿಐಟಿಯು ಕಛೇರಿ ಮೇಲೆ ಪೋಲೀಸರು ಧಾಳಿ ನಡೆಸಿದ್ದಾರೆ. ಸ್ಥಳದಲ್ಲಿದ್ದ ಎಸ್.ಎಫ್.ಐ. ಕಾರ್ಯಕರ್ತರನ್ನು ಥಳಿಸಿ ಬಂಧಿಸಿದ್ದಾರೆ. ಸುದ್ದಿ ತಿಳಿದ ತಕ್ಷಣ ಗ್ರಾಮ ಪಂಚಾಯತ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ವಿ.ಪಿ.ಕುಲಕರ್ಣಿ ಕೋಲಾರಕ್ಕೆ ತೆರಳಿ ಮುಖಂಡರನ್ನು ಆಸ್ಪತ್ರೆಯಲ್ಲಿ ಭೇಟಿ ಮಾಡಿದ್ದಾರೆ.

ಗಾಯಗೊಂಡ ನೌಕರರು ಆಸ್ಪತ್ರೆಗೆ ಹೋಗಲೂ ಅವಕಾಶ ನೀಡದೆ ಪೋಲೀಸರು ಹದ್ದು ಮೀರಿದ ವರ್ತನೆಯನ್ನು ಕೋಲಾರ ಜಿಲ್ಲಾ ಸಿಪಿಐ(ಎಂ) ಮುಖಂಡ ಜಿ.ಸಿ.ಬೈಯಾರೆಡ್ಡಿ ತೀವ್ರವಾಗಿ ಖಂಡಿಸಿದ್ದಾರೆ.

ಮಾಜಿ ಶಾಸಕ ಕಾಂ. ಶ್ರೀರಾಮರೆಡ್ಡಿ ಕೋಲಾರಕ್ಕೆ ಧಾವಿಸಿ ಆಸ್ಪತ್ರೆಯಲ್ಲಿದ್ದವರನ್ನು ಭೇಟಿ ಮಾಡಿ ಜಿಲ್ಲಾಧಿಕಾರಿಗಳನ್ನು ಕಂಡು ಈ ಘಟನೆಗೆ ಕಾರಣರಾದ ಪೋಲೀಸ್ ಅಧಿಕಾರಿಗಳ ಮೇಲೆ ಸೂಕ್ತ ಕ್ರಮಕ್ಕೆ ಒತ್ತಾಯಿಸಿದ್ದಾರೆ. ಕೂಡಲೇ ಕ್ರಮ ಕೈಗೊಳ್ಳದಿದ್ದರೆ ಆಗಸ್ಟ್ 10 ರಂದು ಕೋಲಾರದಲ್ಲೂ ದೊಡ್ಡ ಮತಪ್ರದರ್ಶನ ನಡೆಸುವುದಾಗಿ ಎಚ್ಚರಿಸಿದ್ದಾರೆ.

ಆಗಸ್ಟ್ 5 ರಂದು ಕೋಲಾರದ ಎಲ್ಲಾ ತಾಲೂಕೂ ಕೇಂದ್ರಗಳಲ್ಲಿ ಪಂಚಾಯತ್ ನೌಕರರ ಮೆರವಣಿಗೆ ನಡೆಸಿ ಘಟನೆಯನ್ನು ಖಂಡಿಸಿದ್ದಾರೆ. ಪೋಲೀಸ್ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಲು ಒತ್ತಾಯಿಸಿದ್ದಾರೆ.

ಬೆಂಗಳೂರಿನಲ್ಲಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ಕಾಂ. ವಿಜೆಕೆ.ನಾಯರ್, ಪತ್ರಿಕಾಗೋಷ್ಠಿ ನಡೆಸಿ ಪೋಲೀಸರ ವರ್ತನೆಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಕಾಂ. ವಿಜೆಕೆ.ನಾಯರ್, ಸಿಪಿಐ(ಎಂ) ಸೆಕ್ರೆಟರಿಯಾಟ್ ಸದಸ್ಯ ಕಾಂ. ಗುರುಶಾಂತ್ ಹಾಗೂ ಪಂಚಾಯತ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕಾ. ವಿ.ಪಿ.ಕುಲಕರ್ಣಿ ಇವರನ್ನೊಳಗೊಂಡ ನಿಯೋಗ ಪೋಲೀಸ ಮಹಾನಿರ್ದೇಶಕರನ್ನು ಕಂಡು ಕ್ರಮಕೈಗೊಳ್ಳಲು ಒತ್ತಾಯಿಸಿತು. ಡಿ.ಜಿ.ಪಿ. ಅವರು ತಕ್ಷಣ ತನಿಖೆ ನಡೆಸುವಂತೆ ಐಜಿಪಿಯವರಿಗೆ ಆದೇಶಿಸಿದ್ದಾರೆ.

ಈ ಘಟನೆಯನ್ನು ತೀವ್ರವಾಗಿ ಖಂಡಿಸಿರುವ ಕಾಂ. ವಿ.ಪಿ.ಕುಲಕರ್ಣಿ ಅವರು ರಾಜ್ಯಾದ್ಯಂತ ಪಂಚಾಯತ್ ನೌಕರರು ಈ ಹೇಯ ಕೃತ್ಯವನ್ನು ಪ್ರತಿಭಟಿಸಿ ಚಳುವಳಿ ನಡೆಸಲಿದ್ದಾರೆ.

ಮುನ್ನೂರು ಜೀವಗಳನ್ನು ಬಲಿತೆಗೆದುಕೊಂಡ


ಭೀಕರ ರೈಲು ಅಪಘಾತ



ಉತ್ತರ ಬಂಗಾಳದ ಗೈಸಾಲ್ ರೈಲು ನಿಲ್ದಾಣದ ಳಿ ಬ್ರಹ್ಮಪುತ್ರ ಮೇಲ್ ಮತ್ತು ಅಸ್ಸಾಂ-ಅವದ್ ಕ್ಸ್‌ಪ್ರೆಸ್ ಮುಖಾಮುಖಿ ಢಿಕ್ಕಿಯಲ್ಲಿ ಸುಮಾರು 00 ಪ್ರಯಾಣಿಕರ ಸಾವು ಇಡೀ ದೇಶವನ್ನು ಲ್ಲಣಗೊಳಿಸಿದೆ. ಇದು ದೇಶದ ಅತಿ ದೊಡ್ಡ ೈಲು ಅಪಘಾತಗಳಲ್ಲಿ ಒಂದು ಹೇಳಲಾಗುತ್ತಿದೆ. ುಥುರಾದಲ್ಲಿ ಜಿ.ಟಿ. ಎಕ್ಸ್‌ಪ್ರೆಸ್ ಗೂಡ್ಸ್ ರೈಲಿನ ಿಕ್ಕಿಯ ನಂತರ ಕೇವಲ 15 ದಿನಗಳೊಳಗೇ ಂತಹ ಭೀಕರ ರೈಲು ಅಪಘಾತ ನಡೆದಿರುವು ದರಿಂದ ಸಹಜವಾಗಿಯೇ ರೈಲ್ವೆ ಮಂತ್ರಿಗಳ ಾಜಿನಾಮೆಯ ಬೇಡಿಕೆ ಎದ್ದಿತು. ಸುರಕ್ಷತೆಯ ಜವಾಬ್ದಾರಿಯಿರುವ ರೈಲು ಮಂಡಳಿಯ ದಸ್ಯರನ್ನು ಬದಲಿಸಬೇಕೆಂದೂ ಒತ್ತಾಯ ಬಂತು. ಇದನ್ನು ಮಾಡಿಲ್ಲ ಆದರೆ ಘಟನೆ ನಡೆದ ಪ್ರದೇಶದಲ್ಲಿನ ಐದು ರೈಲು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲಾಗಿದೆ. ಈಶಾನ್ಯ ಗಡಿ ರೈಲ್ವೆಯ ಜನರಲ್ ಮ್ಯಾನೇಜರನ್ನು ರಜೆಯ ಮೇಲೆ ಹೋಗುವಂತೆ ಹೇಳಲಾಗಿದೆ.

ರೈಲ್ವೆ ಮಂತ್ರಿ ನಿತಿಶ್ ಕುಮಾರ್ ರಾಜಿನಾಮೆ ನೀಡಿದರೂ ಪ್ರಧಾನ ಮಂತ್ರಿಗಳು ಅದನ್ನು ಸ್ವೀಕರಿಸಲಿಲ್ಲ. ಅದರೆ ಕೊನೆಗೂ ರೈಲ್ವೆ ಮಂತ್ರಿಗಳ ರಾಜಿನಾಮೆ ಅಂಗೀಕಾರವಾಗಿದೆ.

ಚುನಾಯಿತ ಸರಕಾರವೊಂದು ಇರದಿದ್ದಾಗ ದೈನಂದಿನ ಕೆಲಸಗಳನ್ನು ನೋಡಿ ಕೊಳ್ಳಲೆಂದು ಉಸ್ತುವಾರಿ ಸರ್ಕಾರ ವಿರುತ್ತದೆ. ಆದರೆ ನಾವು ಈಗ ಪಡೆದಿರುವ ಉಸ್ತುವಾರಿ ಸರ್ಕಾರ ಕೆಲಸ ಮಾಡುವ ಬದಲು ಸಂಸತ್ತನ್ನು ಬದಿಗೊತ್ತಿ ವಿವಿಧ ಸ್ವರೂಪದ ಹಣದ ಥೈಲಿಗಳನ್ನು ಮೆಚ್ಚಿಸುವ ಪ್ರಯತ್ನ ದಲ್ಲಿರುವಾಗ ಸುರಕ್ಷಿತ ರೈಲು ಪ್ರಯಾಣದಂತಹ ದೈನಂದಿನ ಕೆಲಸಗಳ ಉಸ್ತುವಾರಿಕೆಗೆ ಸಮಯವೆಲ್ಲಿ? ನಿತಿಶ್ ಕುಮಾರರಿಗಂತೂ ಬಿಹಾರದ ಚುನಾಯಿತ ಸರ್ಕಾರವನ್ನು ಉರುಳಿಸುವ ದೊಡ್ಡ ಕೆಲಸವೇ ಇದೆ! ಸುರಕ್ಷತೆಯನ್ನು ನಿರ್ಲಕ್ಷಿಸಿ ಕೇವಲ ಖಾಸಗೀಕರಣವೇ ಮುಖ್ಯ ಕೆಲಸವೆಂಬಂತೆ ರೈಲು ಇಲಾಖೆ ವರ್ತಿಸುತ್ತಿರುವುದು ವಿಚಿತ್ರವೇ ಸರಿ.



ಮಿತವ್ಯಯದ ಹೆಸರಿನಲ್ಲಿ ಅಗತ್ಯ ಖರ್ಚುಗಳಲ್ಲಿ ರೈಲು ವ್ಯವಸ್ಥೆಯನ್ನು ಸುಧಾರಿಸುವ ಖರ್ಚುಗಳಲ್ಲಿ ಕಡಿತ ಮಾಡಿರುವುದರ ದುಷ್ಫಲವನ್ನು ಸಾಮಾನ್ಯ ಪ್ರಯಾಣಿಕರು ಉಣ್ಣಬೇಕಾಗಿದೆ. ಆದ್ದರಿಂದ ಈ ಚುನಾವಣೆಯಲ್ಲಿ ಇಂತಹ ಪ್ರಶ್ನೆಗಳು ಮುಖ್ಯ ಪ್ರಶ್ನೆಗಳಾಗಬೇಕು, ಆಳುವ ಪಕ್ಷಗಳು ರೈಲು ಸುರಕ್ಷಿತತೆಯಂತಹ ವಿಷಯದಿಂದ ನುಣುಚಿ ಕೊಳ್ಳಲು ಬಿಡಬಾರದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ಹೇಳಿದೆ.

ಮೊನ್ನೆ ಜಲಪೈಗುರಿಯಲ್ಲಿ
ಎರಡು ರೈಲುಗಳು ನಡುರಾತ್ರಿಯಲ್ಲಿ
ಒಂದನ್ನೊಂದು ಗುದ್ದುಕೊಂಡು
ಸತ್ತವರು ಹಲವು ನೂರು
ಸತ್ತವರಲ್ಲಿ ಗುರುತೇ ಸಿಗದವರು
ಕೆಲವು ನೂರು
ಅವರಲ್ಲಿ ಹಿಂದುವು ಯಾರೋ
ಯಾರು ಕ್ರೈಸ್ತ, ಮುಸಲ್ಮಾನರೋ
ಎಂದು ಕೇಳಿದವರಾರು?
ಸಾಮೂಹಿಕ ಅಂತ್ಯ ಸಂಸ್ಕಾರದಲ್ಲಿ
ಎಲ್ಲರೂ ಸಮಾನರು
ಮಾನವರು.

– ಅನಂತ್

1946 ಆಗಸ್ಟ್ 6, ಭಾರತದ ಇತಿಹಾಸದಲ್ಲಿ ಒಂದು ಕರಾಳ ದಿನ. ಭ್ರಾತೃಹತ್ಯೆಯ ದೊಂಬಿಗಳು ಆ ದಿನ ಆರಂಭವಾದವು. 'ಮಹಾನ್ ಕಲ್ಕತ್ತ ಹತ್ಯೆ'(The Great Culcatta Killing) ಎಂದು 'ಸ್ಟೇಟ್ಸ್‌ಮನ್' ಪತ್ರಿಕೆ ಅದನ್ನು ವರ್ಣಿಸಿತು.

ಹಿಂದೂ ಮತ್ತು ಮುಸ್ಲಿಂ ಈ ಎರಡೂ ಕಡೆಗಳ ಕೋಮುವಾದಿ ಶಕ್ತಿಗಳು ಈ ಗಲಭೆಗಳು ಆರಂಭಿಸಿದ್ದೇನೋ ನಿಜ. ಆದರೆ ಬ್ರಿಟಿಷ್ ಸಾಮ್ರಾಜ್ಯಶಾಹಿ ಆಡಳಿತಗಾರರ ಕುಮ್ಮಕ್ಕು ಇಲ್ಲದಿದ್ದರೆ ಅದು ಆರಂಭವಾಗುತ್ತಲೇ ಇರಲಿಲ್ಲ ಎನ್ನುವುದೂ ಅಷ್ಟೇ ಸತ್ಯ. ಭಾರತವನ್ನು ಹೋಳು ಮಾಡಿಯೇ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳ ಕೈಗೆ ಕೊಡುವುದೆಂದು ಬ್ರಿಟಿಷರು ಆಗಲೇ ತೀರ್ಮಾನ ಮಾಡಿದ್ದರು. ಕೋಮುಗಲಭೆಗಳು ಅದಕ್ಕೆ ಉತ್ತಮ ಸಾಧನ ಎಂದು ಅವರು ಭಾವಿಸಿದ್ದರು!


ಗಲಭೆಗಳು ಶುರುವಾಗುತ್ತಲೇ ಕಲ್ಕತ್ತದ ಪೋಲೀಸ್ ವ್ಯವಸ್ಥೆ ಪೂರ್ಣವಾಗಿ ಕುಸಿದು ಬಿತ್ತು. ಪೋಲೀಸ್ ಪಡೆ ಕೋಮುವಾದದ ಆಧಾರದಲ್ಲಿ ಕೆಲಸ ಮಾಡತೊಡಗಿತು. ಬಂಗಾಳದ ರಾಜ್ಯಪಾಲರಿಗೆ ಪದೇ ಪದೆ ಮನವಿ ಮಾಡಿದರೂ ಅವರು ಕೊನೆ ಕ್ಷಣದವರೆಗೆ ಸೇನೆಯನ್ನೇನು ಕರೆಸಲಿಲ್ಲ. ಪರಿಸ್ಥಿತಿ ಕೈಮೀರಿ ಇಡೀ ಕಲ್ಕತ್ತ ನಗರ ಸಾಮೂಹಿಕ ಹತ್ಯಾಕಾಂಡ ಮತ್ತು ಲೂಟಿಗಳಿಗೆ ಒಳಗಾದ ಮೇಲಷ್ಟೇ ಬ್ರಿಟಿಷ್ ಆಡಳಿತಗಾರರು ಸೇನೆಯನ್ನು ನಿಯೋಜಿಸಿದರು. ಹಾಗೂ ತಾವು 'ಶಾಂತಿಯ ರಕ್ಷಕರು' ಹಾಗೂ 'ಭಾರತದ ಮಿತ್ರರು' ಎಂದು ಪೋಸ್ ನೀಡಿದರು. ಅಂತಿಮವಾಗಿ ಅವರು ತಮ್ಮ ಗುರಿಯಲ್ಲಿ ಸಫಲರಾದರು. ಈ ಗಲಭೆಗಳು ವಿಭಜನೆಯ ಬೀಜವನ್ನು ಬಿತ್ತಿತು.

ವಿಭಜನೆಯನ್ನು ನಮ್ಮ ಪಕ್ಷ ತೀಕ್ಷ್ಣವಾಗಿ ವಿರೋಧಿಸಿತು. ಕಾಂಗ್ರೆಸ್-ಲೀಗ್ ಏಕತೆ ಹಾಗೂ ಸಮುದಾಯಗಳ ನಡುವಿನ ಒಗ್ಗಟ್ಟನ್ನು ಉಳಿಸಿಕೊಳ್ಳಲು ನಾವು ನಮ್ಮ ಕೈಲಾದ ಗರಿಷ್ಟ ಪ್ರಯತ್ನ ಮಾಡಿದೆವು.

ಮೊಟ್ಟಮೊದಲಬಾರಿಗೆ ವಿಧಾನಸಬೆಗೆ ಆರಿಸಿ ಹೋದ ಜ್ಯೋತಿ ಬಸುರವರು ಅಲ್ಲಿ ಮಾಡಿದ ಮೊಟ್ಟಮೊದಲ ಬಾಷಣ, ರಾಜಕೀಯ ಕೈದಿಗಳ ಬಿಡುಗಡೆಯ ಪ್ರಶ್ನೆಯನ್ನು ಬಲವಾಗಿ ಎತ್ತಿದ್ದು,ಬ್ರಿಟಿಷ್ ಪೊಲೀಸರ ದಮನದ ಪ್ರತೀಕವಾಗಿ ಅವರು ಹರಿದ ಬಟ್ಟೆಯಲ್ಲೇ ವಿಧಾನಸಭೆ ಪ್ರವೇಶಿಸಿದ ಘಟನೆ, ವಿಧಾನಸಭೆಯಲ್ಲಿ ಕಾಂಗ್ರೆಸ್-ಲೀಗ್‌ಗಳನ್ನು ತಲ್ಲಣಗೊಳಿಸಿದ ಭಾಷಣದ ಬಗ್ಗೆ ಕಳೆದ ಸಂಚಿಕೆಯಲ್ಲಿ ಓದಿದ್ದೀರಿ. ಮುಂದೆ...

ಮಾಸದ ನೆನಪುಗಳು

(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಭಾಗ-11

ಸಾವಿನ ದವಡೆಗೆ ಸಿಲುಕಿದವರು

ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನ ಬಹುತೇಕ ಜನರೂ ವಿಭಜನೆಗೆ ವಿರೋಧಿಗಳಾಗಿದ್ದರು. ಹಿಂದೂ ಮತ್ತು ಮುಸ್ಲಿಮರ ಅಭಿಪ್ರಾಯವೂ ಇದೇ ಆಗಿತ್ತು. ಆದರೆ ಎರಡೂ ಕೋಮುಗಳಲ್ಲಿನ ಪ್ರತಿಗಾಮಿ ಶಕ್ತಿಗಳು ಸಾಮ್ರಾಜ್ಯಶಾಹಿಗಳ ಪ್ರೇರಣೆಯಿಂದ ಗಲಭೆಗಳನ್ನು ಹುಟ್ಟು ಹಾಕಿದರು. ಪಂಜಾಬ್, ಸಂಯುಕ್ತ ಪ್ರಾಂತಗಳು ಮತ್ತು ಬಿಹಾರದಲ್ಲಿ ಕೂಡ ಗಲಭೆಗಳು ನಡೆದವು. ಅದು ಕಾಡ್ಗಿಚ್ಚಿನಂತೆ ಹಬ್ಬಿತು. ದೇಶಾದ್ಯಂತ ಆಗಸ್ಟ್ 16 ರಂದು ನೇರ ಕಾರ್ಯಾಚರಣೆ ದಿನ ಆಚರಿಸಲು ಮುಸ್ಲಿಂ ಲೀಗ್ ಕಲ್ಕತ್ತ ರ‍್ಯಾಲಿಯೊಂದರಲ್ಲಿ ಕರೆ ಕೊಟ್ಟಿತು. ಬಂಗಾಳ ಸರಕಾರ ರಾಜ್ಯವ್ಯಾಪಿ ರಜೆ ಘೋಷಿಸಿತು. ವಿಧಾನಸಭೆ ಅಧಿವೇಶನ ನಡೆಯುತ್ತಿತ್ತು.

ಪರಿಸ್ಥಿತಿ ಬಗ್ಗೆ ನಿಲುವಳಿ ಗೊತ್ತುವಳಿ ಮಂಡಿಸಲು ಕಾಂಗ್ರೆಸ್ ಸದಸ್ಯರಿಗೆ ಸ್ಪೀಕರ್ ಅವಕಾಶ ನಿರಾಕರಿಸಿದ್ದರು. ನಮ್ಮ ಪಕ್ಷದ ಪರವಾಗಿ ಕೆಲ ವಿಚಾರಗಳನ್ನು ತಿಳಿಸಲು ನಾನು ಮುಂದಾದರೂ ಸ್ಪೀಕರ್ ಮತ್ತು ಉಪ ಸ್ಪೀಕರ್ ಅವಕಾಶ ಕೊಡಲಿಲ್ಲ.

ರಜೆಯ ನೋಟಿಸನ್ನು ವಾಪಸ್ಸು ಪಡೆಯುವಂತೆ ನಾನು ಸರಕಾರವನ್ನು ಒತ್ತಾಯಿಸಬೇಕೆಂದು ನಾವು ನಿರ್ಧರಿಸಿದ್ದೆವು. ಶಾಂತಿಯಿಂದ ಜೀವಿಸಬೇಕೆಂಬುದು ಜನಸಾಮಾನ್ಯರ ಬಯಕೆ ಹಾಗೂ ನೇರ ಕಾರ್ಯಾಚರಣೆಯ ಕರೆ ಅಗತ್ಯವಿಲ್ಲ ಎಂಬುದು ನನ್ನ ಅಭಿಪ್ರಾಯವಾಗಿತ್ತು.

ನೇರ ಕಾರ್ಯಾಚರಣೆ ದಿನಕ್ಕೆ ಕಾಂಗ್ರೆಸ್ ಕೂಡ ವಿರೋಧ ಸೂಚಿಸಿತು. ಆದರೆ ಮುಸ್ಲಿಂ ಲೀಗ್ ನಾಯಕತ್ವ ಈ ವಿಚಾರದಲ್ಲಿ ದೃಢವಾಗಿತ್ತು.

ಆ. 16 ರಂದು ಗಲಭೆಗಳು ನಡೆಯಬಹುದೆಂಬ ಭೀತಿ ನಮ್ಮ ಪಕ್ಷಕ್ಕೆ ಇತ್ತು. ಕಲ್ಕತ್ತದ ಕಾರ್ಮಿಕರು ಹಾಗೂ ಮಿಶ್ರ ಜನಸಂಖ್ಯೆಯ (ಹಿಂದೂ-ಮುಸ್ಲಿಂ ಒಟ್ಟಾಗಿ ವಾಸಿಸುವ) ಜನರು ಹೆಚ್ಚಾಗಿರುವ ಪ್ರದೇಶಗಳಲ್ಲಿ ಗಸ್ತು ತಿರುಗುವಂತೆ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಿಗೆ ಸೂಚಿಸಲಾಯಿತು.

ಪಕ್ಷದ ನಿರ್ದೇಶನದ ಮೇರೆಗೆ ನಾನು ನರ್ಕೇಲ್‌ದಂಗದ ಕಾರ್ಮಿಕ ಪ್ರದೇಶಗಳಿಗೆ ಹೋದೆ. ರೈಲ್ವೆ ಯೂನಿಯನ್ ಮುಖಂಡ ಕೃಷ್ಣಮೂರ್ತಿ ಮತ್ತು ನಿಖಿಲ್ ಮೈತ್ರಾ ನನ್ನ ಜತೆಗಿದ್ದರು. ಆ ಸಂಜೆ ರೈಲ್ವೆ ಕಾಲನಿಯಲ್ಲಿ ಕಳೆದವು.

ಹೊರಗೆ ಏನು ನಡೆಯುತ್ತಿದೆ ಎಂಬುದು ಕಾಲನಿ ಒಳಗಿನಿಂದ ಗೊತ್ತಾಗುತ್ತಿರಲಿಲ್ಲ. ಘೋಷಣೆ ಕೂಗುತ್ತಿದ್ದ ಕೆಲವು ಪ್ರತಿಭಟನಾಕಾರರಷ್ಟೇ ನಮಗೆ ಕಾಣಿಸುತ್ತಿದ್ದ... ನಮ್ಮ ಮೇಲೆ ದಾಳಿ ನಡೆಯಬಹುದೆಂಬ ಭೀತಿಯಿ... ಆ ಜಾಗ ಬಿಟ್ಟು ಹೋಗುವಂತೆ ಕಾರ್ಮಿಕರು ನಮ್ಮ... ಕೋರಿದರು. ಇಡೀ ನಗರ ಹೊತ್ತಿ ಉರಿಯು... ಎಂದು ಅವರು ನಮಗೆ ಹೇಳಿದರು. ಹೇಗೋ ನಾ... ಸಿಲ್ದಾ ನಿಲ್ದಾಣ ತಲುಪಿದೆವು. ಅಲ್ಲಿಂದ ಕಾಲ್ನಡಿಗೆಯ... ಲೋವರ್ ಸರ್ಕುಲರ್ ರಸ್ತೆಗೆ ಬಂದೆವು.

ಕಾಲುದಾರಿಯಲ್ಲೆಲ್ಲಾ ಶವಗಳು ಚದುರಿ ಬಿದ್ದಿ... ಹಲ್ಲೆಕೋರರು ಸ್ವತಂತ್ರವಾಗಿ ಓಡಾಡುತ್ತಿದ್ದರು. ನಾ... ಕಾಲುದಾರಿ ಬಿಟ್ಟು ರಸ್ತೆಯ ಮಧ್ಯದಲ್ಲೇ ನಡೆದು... ಲೊರೆಟೋ ಶಾಲೆಯ ಬಳಿಯಿರುವ ಪಕ್ಷದ ಜಿ... ಕಛೇರಿ ತಲುಪಿದೆವು.

ಅಲ್ಲಿ ಕೂಡ ಪಕ್ಷದ ಸಂಗಾತಿಗಳು ಇಂಥ... ಕಥೆಗಳನ್ನು ವಿವರಿಸಿದರು. 'ಕಲ್ಕತ್ತ ಉರಿಯುತ್ತಿ... ನಾವು ಅಲ್ಲೇ ರಾತ್ರಿ ಕಳೆದವು. ಆ ಪ್ರದ... ಸುರಕ್ಷಿತವಾಗಿರಲೂ ಇಲ್ಲ; ಆಕ್ರಮಣಕಾರ... ಯಾವುದೇ ಕ್ಷಣದಲ್ಲಿ ದಾಳಿ ಮಾಡುವ ನಿರೀಕ್ಷೆಯಿ... ಲಾಠಿ ಹಿಡಿದ ಸ್ವಯಂ ಸೇವಕರು ಕಾವ... ಕಾಯುತ್ತಿದ್ದರು. ಡಕ್ರೆಸ್ ಲೇನ್‌ನಲ್ಲಿರುವ ಪಕ್ಷದ ಪ್ರಾ... ಸಮಿತಿ ಕಚೇರಿಗಾಗಲೀ ಮನೆಗಾಗಲಿ ಯಾವ... ಸುದ್ದಿಯನ್ನು ತಲುಪಿಸಲು ಆಗುತ್ತಿರಲಿಲ್ಲ.

(ಮುಂದುವರಿಯುವು...

ಪೋಖ್ರಾನ್ ಅಣು ಸ್ಫೋಟ ಮತ್ತು ದೇಶದ ಅಭದ್ರತೆ

ಹಿರೋಶಿಮಾ ನಾಗಸಾಕಿಯ ಮೇಲಿನ ಬಾಂಬ್ ದಾಳಿಯ ದಿನಾಚರಣೆ ಹಿನ್ನೆಲೆಯಲ್ಲಿ ಒಂದು ವಿಶ್ಲೇಷಣೆ

ಎಸ್. ಅರ್ಜುನ್, ಈ.ಬಸವರಾಜು

ಪೋಖ್ರಾನ್ 2 ರ ಅಣ್ವಸ್ತ್ರ ಪರೀಕ್ಷೆ ನಮ್ಮ ದೇಶದ ಭದ್ರತೆಯನ್ನು ಹೆಚ್ಚಿಸಿದಂತಾಗಿದೆಯೆಂದು ಅದನ್ನು ನಡೆಸಿದವರು ಹೇಳಿದರು. ಈ ಪರೀಕ್ಷೆ ಅಂತರಾಷ್ಟ್ರೀಯ ವಲಯದಲ್ಲಿ ಭಾರತದ ಪ್ರತಿಷ್ಠೆ, ವಿಶ್ವಾಸ ಹೆಚ್ಚಿಸಿತು. ಪಾಕಿಸ್ತಾನದಿಂದ ಯಾವುದೇ ಅಪಾಯ ಎದುರಿಸಲು ಸಾಧ್ಯ ಎಂದು ಪ್ರಚಾರ ಮಾಡಿದರು. ಆದರೆ ಇತ್ತೀಚಿಗಿನ ಕಾರ್ಗಿಲ್ ಬೆಳವಣಿಗೆ ದೇಶದ ರಕ್ಷಣೆಯಲ್ಲಿ ಅಣ್ವಸ್ತ್ರಗಳು ನಿಷ್ಪ್ರಯೋಜಕ ಹಾಗೂ ಪರಮಾಣು ಅಸ್ತ್ರಗಳ ಸ್ಫೋಟಗಳಿಂದ ಇತರ ದೇಶಗಳು ನಮ್ಮ ಮೇಲೆ ಆಕ್ರಮಣ ನಡೆಸುವುದನ್ನು ತಡೆಯಬಹುದು ಎಂಬುದನ್ನು ಸುಳ್ಳಾಗಿಸಿತು.

ಪೋಖ್ರಾನ್ 2 ನಮ್ಮ ದೇಶದ ವಿಜ್ಞಾನ ಕ್ಷೇತ್ರದ ಅತಿದೊಡ್ಡ ಸಾಧನೆಯೆಂದು ಬಣ್ಣಿಸಲಾಯ್ತು. ಆದರೆ ಪ್ರಪಂಚದಾದ್ಯಂತ ಇದನ್ನು ಸಾಧನೆಯೆಂದು ಸ್ವೀಕರಿಸುವುದಿಲ್ಲ. ಅಣ್ವಸ್ತ್ರಗಳ ಪರೀಕ್ಷೆ 50 ವರ್ಷಗಳಷ್ಟು ಹಳೆಯದು. ಭಾರತದಂತಹ ವಿಜ್ಞಾನ-ತಂತ್ರಜ್ಞಾನದಲ್ಲಿ ಸಮರ್ಥ್ಯ ರಾಷ್ಟ್ರಕ್ಕೆ ಪೋಖ್ರಾನ್ 2 ರ ಸಾಧನೆ ವಿಶೇಷವೇನಲ್ಲ.

ಈ ಅನಗತ್ಯವಾದ ಅಣ್ವಸ್ತ್ರಗಳ ಬಗ್ಗೆ, ಪರೀಕ್ಷೆ ನಡೆಸದೇ ಇದೇನೆಂದು ನಮಗೆ ಹಾಗೂ ಪ್ರಪಂಚಕ್ಕೆ ತಿಳಿದಿದೆ. ಭಾರತಕ್ಕಿಂತ ಆರ್ಥಿಕವಾಗಿ ದುರ್ಬಲವಾಗಿರುವ ಪಾಕಿಸ್ತಾನವೂ ಅಣ್ವಸ್ತ್ರ ಪರೀಕ್ಷೆ ನಡೆಸಿದ ಮೇಲಂತೂ ಇದೊಂದು ನಮ್ಮ ದೊಡ್ಡ ಸಾಧನೆ ಎಂಬ ಹೇಳಿಕೆಯನ್ನು ಸುಳ್ಳಾಗಿಸಿತು.

ಸರ್ವನಾಶಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನ ಸಾಮರ್ಥ್ಯದ ಬಳಕೆಯನ್ನು ಎಲ್ಲರೂ ತಿರಸ್ಕರಿಸಲೇಬೇಕು. ಈ ಅಣ್ವಸ್ತ್ರ ತಯಾರಿಕೆ- ಪರೀಕ್ಷೆ ವಿಜ್ಞಾನ ಕ್ಷೇತ್ರಕ್ಕೆ ಯಾವುದೇ ಪ್ರತಿಷ್ಠೆ ತಂದುಕೊಡದು. ಎಲ್ಲಾ ವಿಜ್ಞಾನಿಗಳಿಗೂ ವಿಜ್ಞಾನ ಒಂದು ನೀತಿಯನ್ನು ಭೋದಿಸುತ್ತದೆ. ಖ್ಯಾತ ವಿಜ್ಞಾನಿಗಳಾದ ಕ್ಯೂರಿ, ಮೇಡಮ್ ಕ್ಯೂರಿ, ಐನ್‌ಸ್ಟೀನ್, ಬೋರ್, ರಸೆಲ್ ಹಾಗೂ ಇವರ ನಂತರದ ಎಲ್ಲಾ ವಿಜ್ಞಾನಿಗಳೂ ಅಣ್ವಸ್ತ್ರ ವಿರೋಧಿ ನೀತಿ ಅನುಸರಿಸಿದರು. ನಮ್ಮ ದೇಶದಲ್ಲಿಯೂ ಸಿ.ವಿ.ರಾಮನ್, ಮೇಘನಾಥ ಸಹಾರಂತಹ ವಿಜ್ಞಾನಿಗಳು ವಿಜ್ಞಾನಿ ಹಾಗೂ ದೇಶಪ್ರೇಮಿಯಾಗಿ ಅಣ್ವಸ್ತ್ರ ಪರೀಕ್ಷೆ ಹಾಗೂ ಪ್ರಯೋಗ ವಿರೋಧಿಸಿದರು. ಆದರೆ ಈಗ ನಮಗೆ ತಿಳಿದಿರುವ ಪ್ರಕಾರ ಪೋಖ್ರಾನ್ ಪರೀಕ್ಷೆಯನ್ನು ಅಣ್ವಸ್ತ್ರ ತಜ್ಞರ ಒತ್ತಡದಿಂದ ನಡೆಸಲಾಯಿತು. ಫಿಶನ್ (ಪರಮಾಣು ಶಕ್ತಿ ಪಡೆಯುವ ಒಂದು ವಿಧಾನ) ತಂತ್ರಜ್ಞಾನ ಕಂಡುಹಿಡಿದ ನಂತರ ಪಾಶ್ಚಿಮಾತ್ಯ ದೇಶಗಳ ಪರಮಾಣು ವಿಜ್ಞಾನಿಗಳ ಒಂದು ವಿಭಾಗ ಮಿಲಿಟರಿ ಸಂಪನ್ಮೂಲಗಳಾಗಿ ಕೆಲಸ ಮಾಡಿ ಸುಖಮಯ ಜೀವನ ನಡೆಸಿದರು. ಈ ವಿಜ್ಞಾನದ ಮಿಲಿಟರೀಕರಣ ನಮ್ಮ ದೇಶದ ವಿಜ್ಞಾನ ಕ್ಷೇತ್ರದಲ್ಲಿ ಇರಲಿಲ್ಲ. ಪೋಖ್ರಾನ್ 2 ರ ಪರೀಕ್ಷೆ ನಡೆಸಿದ ವಿಜ್ಞಾನಿಗಳು ಇದನ್ನು ಬದಲಾಯಿಸಿದರು. ಈ ಪರೀಕ್ಷೆಗಳು ಸಾಮಾನ್ಯ ಪರೀಕ್ಷೆಗಳಾಗಿರಲಿಲ್ಲ. ಮಧ್ಯಮವರ್ಗದ ಜನರಲ್ಲಿ ಇದೊಂದು ಸಾಮೂಹಿಕ ಉನ್ಮಾದವನ್ನುಂಟು ಮಾಡಿತು. ಮತ್ತು ರಾಜತಾಂತ್ರಿಕ ಸಂಬಂಧಗಳಲ್ಲಿ ದೊಡ್ಡ ಸಮಸ್ಯೆಯನ್ನುಂಟು ಮಾಡಿತು. ನಮ್ಮ ದೇಶ ಅನುಸರಿಸಿಕೊಂಡು ಬಂದಿದ್ದ ಶಾಂತಿಯುತ ವಿಜ್ಞಾನ ಕಾರ್ಯಕ್ರಮಗಳನ್ನು ಮಿಲಿಟರೀಕರಣ ಗೊಳಿಸಿತು.

ಪೋಖ್ರಾನ್ 2 ಪರೀಕ್ಷೆಯನ್ನು ಅಣುಶಕ್ತಿ ಇಲಾಖೆ (ಡಿ.ಎ.ಇ) ತನ್ನ ಸಾಧನೆಯೆಂದಿತು. ವಿಜ್ಞಾನ ಕ್ಷೇತ್ರದ ಯಾವುದೇ ಸಾಧನೆಯ ಬಗ್ಗೆ ಚರ್ಚಿಸುವಾಗ ಆ ಯೋಜನೆ ನಿರ್ವಹಿಸಬೇಕಾಗಿದ್ದ ಕೆಲಸಗಳನ್ನು ವಿಮರ್ಶಿಸಬೇಕಾಗುತ್ತದೆ. ಇದು ಡಿ.ಎ.ಇ.ಗೂ ಅನ್ವಯಿಸುತ್ತದೆ. ಒಂದು ಪ್ರಶ್ನೆ ಉದ್ಭವಿಸುತ್ತದೆ. ಅಣ್ವಸ್ತ್ರ ಪರೀಕ್ಷೆ ಡಿ.ಎ.ಇ (ಡಿಪಾರ್ಟ್‌ಮೆಂಟ್ ಆಫ್ ಆಟೋಮಿಕ್ ಎನರ್ಜಿ)ಯ ಮುಖ್ಯ ಉದ್ದೇಶವಾಗಿತ್ತೇ? 2000ನೇ ಇಸವಿ ವೇಳೆಗೆ 10,000 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಬದ್ಧತೆಯನ್ನು ಅದು ಹೊಂದಿರಲಿಲ್ಲವೇ? ಇದು ಡಿ.ಎ.ಇ ಯ ಪ್ರಾಥಮಿಕ ಕರ್ತವ್ಯವಾಗಿರಲಿಲ್ಲವೇ?. ದಾಖಲೆಗಳ ಪ್ರಕಾರ ಡಿ.ಎ.ಇ 2000 ದ ವೇಳೆ 10,000 ಮೆ.ವಾ. ವಿದ್ಯುತ್ ಉತ್ಪಾದಿಸುವುದಿರಲಿ, ಅದರ ಮೂರನೆ ಒಂದರಷ್ಟನ್ನೂ ಸಾಧಿಸಲಾಗುತ್ತಿಲ್ಲ. ಮತ್ತೊಂದು ಕಡೆ ನೋಡಿದರೆ ಒಂದು ಸಾಮಾನ್ಯ ಅಣ್ವಸ್ತ್ರ ಕಾರ್ಯಕ್ರಮಕ್ಕೆ ಮುಂದಿನ 10 ವರ್ಷಗಳಲ್ಲಿ 40 ರಿಂದ 50 ಸಾವಿರ ಕೋಟಿಗಳಾಗಬಹುದು. ಈ ಹಣವನ್ನು ಸಾಂಪ್ರದಾಯಿಕ ವಿದ್ಯುತ್ ಉತ್ಪಾದನೆಗೆ ವಿನಿಯೋಗಿಸಿದಲ್ಲಿ ಏನಾಗಬಹುದೆಂದು ನೋಡೋಣ. ಇಂದಿನ ವೆಚ್ಚದಲ್ಲೇ ಲೆಕ್ಕ ಹಾಕಿದರೂ 7000 ಮೆ.ವಾ ವಿದ್ಯುತ್ ಉತ್ಪಾದಿಸಬಹುದು. ಬದಲಾಗಿ ಅಣುಶಕ್ತಿ ಮೂಲಕ ವಿದ್ಯುತ್ ಉತ್ಪಾದಿಸಿದಲ್ಲಿ ಎಷ್ಟು ಮೆ.ವಾ ಆಗಬಹುದೆಂದು ಊಹಿಸಬಹುದು. ಇದು ಸಾಂಪ್ರದಾಯಿಕ ವಿಧಾನಕ್ಕಿಂತ ಹೆಚ್ಚಿರುತ್ತದೆ. ವಿದ್ಯುತ್ ಕಡಿತದ ಸಮಸ್ಯೆಯಿರುವ ಈ ದಿನಗಳಲ್ಲಿ 7000 ಮೆ.ವಾ ವಿದ್ಯುತ್ತಿನಿಂದ ಎಷ್ಟೊಂದು ಬದಲಾವಣೆ ಸಾಧ್ಯ ಎಂಬುದನ್ನು ಊಹಿಸಬೇಕಾಗುತ್ತದೆ. ಇದು ಅನೇಕ ಕಾರ್ಖಾನೆಗಳನ್ನು ನಡೆಸಲು ಹಾಗೂ ಸಾವಿರಾರು ಟನ್ ಆಹಾರ ಉತ್ಪಾದನೆಗೆ ಸಹಾಯ ಮಾಡುತ್ತದೆ. 40 ರಿಂದ 50 ಸಾವಿರ ಕೋಟಿಯನ್ನು ನೇರವಾಗಿ ಆಹಾರ ಉತ್ಪಾದನೆಗೆ ತೊಡಗಿಸಿದಲ್ಲಿ ಅಥವಾ ಆಸ್ಪತ್ರೆ, ಶಾಲೆಗಳನ್ನು ಕಟ್ಟಿಸಿದಲ್ಲಿ ಎಷ್ಟು ಜನರಿಗೆ ಉಪಯೋಗ ವಾಗಲಿದೆಯೆಂಬುದನ್ನು ನಾವು ಊಹಿಸಬಹುದು. ಅಣ್ವಸ್ತ್ರ ತಯಾರಿಕೆಗೆ ವ್ಯಯಿಸುವ ಹಣದ ಮೊತ್ತವನ್ನು ಇತರ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿದರೆ ಹೇಗೆ ಎಂದು ಪ್ರಶ್ನಿಸಿದಾಗ ಈ ಎರಡನ್ನೂ ಒಟ್ಟಿಗೆ ನೋಡಬಾರದೆಂಬ ವಾದವೂ ಇದೆ. ವಿದ್ಯುತ್ ಕೊರತೆಯ ಸಮಸ್ಯೆಯನ್ನು ವಿದೇಶೀ ಬಂಡವಾಳದ ಹರಿಯುವಿಕೆಯಿಂದ ಪರಿಹರಿಸಬಹುದೆಂದು ಹೇಳಲಾಗುತ್ತದೆ. ಇದು ನಿಜವಿರಬಹುದು. ಆದರೆ ವಿದೇಶೀ ಬಂಡವಾಳದಿಂದ ಯಾರೂ ಅಣ್ವಸ್ತ್ರ ತಯಾರಿಸುವುದಿಲ್ಲ. ಆದ್ದರಿಂದ ಅಣ್ವಸ್ತ್ರ ತಯಾರಿಕೆಯ ಯೋಜನೆಯಿರುವಾಗಲೇ ಅದಕ್ಕೆ ಅಗತ್ಯವಾದ ಹಣವೂ ಇರಲೇಬೇಕಾಗುತ್ತದೆ. ವಿದ್ಯುತ್ ಕ್ಷೇತ್ರದಲ್ಲಿ ಹಣ ವಿನಿಯೋಗಿಸುವುದರಿಂದ ಸರ್ಕಾರಕ್ಕೆ ಅಷ್ಟೇನೂ ಅಗ್ಗದ ಪ್ರಚಾರ ಸಿಗದು. ಅದೇ ಸಂದರ್ಭದಲ್ಲಿ ಪೋಖ್ರಾನ್ 2ರ ಪರೀಕ್ಷೆಯನ್ನು ಸಿಹಿ ಹಂಚುವುದರ ಮೂಲಕ ವ್ಯಾಪಕ ಪ್ರಚಾರದೊಂದಿಗೆ ಆಚರಿಸಲಾಯ್ತು. ಅತ್ಯಂತ ಅಪಾಯಕಾರಿಯಾದ ವಿಕಿರಣಯುಕ್ತ ಮರಳನ್ನು ಜನರಿಗೆ ವಿತರಿಸುತ್ತಿ... ...ದ್ದೇವೆಂಬುದನ್ನು ಅವರು ಮರೆತಿರಬಹುದು.

ವಿಜ್ಞಾನ ತಂತ್ರಜ್ಞಾನದ ಸಾಧನೆಗಳ ತೀರ್ಮಾನಿಸುವಾಗ ಅದರ ಜನೋಪಯೋ... ಕೆಲಸಗಳ ಬಗೆಗೂ ಯೋಚಿಸಬೇಕಾಗುತ್ತದೆ. ಮಿಲಿಟರೀಕರಣ ಕಾರ್ಯಕ್ರಮಗಳ ವಿಜ್ಞಾನಿಗ... ಆಕರ್ಷಿಸಲು ಸರ್ಕಾರ ಪೋಖ್ರಾನ್ 2 ಪರ... ನಡೆಸಿತು. ರಕ್ಷಣೆ, ಅಣುಶಕ್ತಿ ಮತ್ತು ಬಾಹ್ಯಾ... ಕ್ಷೇತ್ರದಲ್ಲಿ ಕೆಲಸ ಮಾಡುವ ವಿಜ್ಞಾನಿಗಳಿಗೆ ಸಕಾ... ವಿಶೇಷ ಸೌಲಭ್ಯ-ಸವಲತ್ತು ನೀಡುವ ಹೇಳಿಕೆಯ... ಕೇಂದ್ರ ಸರ್ಕಾರ ನೀಡಿತು. ಇದು ಖಂಡಿ... ವಿಜ್ಞಾನಿಗಳಲ್ಲಿ ಕೆಲವರಿಗಾದರೂ ಇಕ್ಕಟ್ಟಿನ ಪರಿ... ಉಂಟುಮಾಡಿರುತ್ತದೆ. ಈ ರೀತಿಯ ವಿಶ... ಪರಿಗಣನೆಯಿಂದಾಗಿ ರಾಮಾನುಜ... ಸಿ.ವಿ.ರಾಮನ್, ಮೇಘನಾಥ ಸಹಾ, ಸತ್ಯೆ... ಬೋಸ್ ಇವರಿಗಿಂತ ರಾಜಾರಾಮ... ಚಿದಂಬರಮ್, ಅಬ್ದುಲ್ ಕಲಮ್ ಇವರ ಬಗ್ಗೆ ... ಪಡಬೇಕೆಂಬ ಅಭಿಪ್ರಾಯ ಮೂಡಿಸಿದಂತಾಗು... ಈ ಮಿಲಿಟರೀಕರಣವು ನಮ್ಮಂತಹ ಶಾಂತಿಪ್ರಿಯ... ಬದ್ಧವಾಗಿರುವ ಶಾಂತಿಯುತ ಅಭಿವೃದ್ಧಿಯ ... ಸಂಘರ್ಷವನ್ನುಂಟು ಮಾಡುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಪ್ರೊ. ಅಮರ್ತ್ಯ... ರವರ ಕೊಡುಗೆಗಿಂತ ಬೇರೆ ಯಾವುದೂ ನಮ್ಮ ದೇ... ಶೋಭೆ ತರುವುದಿಲ್ಲ. ಪೋಖ್ರಾನ್ 2 ನ್ನು ಪ್ರಪ... ಬಹುಬೇಗನೆ ಮರೆಯಬಹುದು. ಪ್ರೊ. ಅಮರ್ತ್ಯ... ಅವರ ಅಭಿಪ್ರಾಯದ ಕೆಲ ಅಂಶಗಳನ್ನಾದ... ತೆಗೆದುಕೊಂಡು ಶಿಕ್ಷಣ, ಆರೋಗ್ಯ, ಸಾರ್ವಜ... ವಿತರಣಾ ವ್ಯವಸ್ಥೆಗೆ ಆದ್ಯತೆ ನೀಡಬೇಕಾಗಿದೆ... ಹೊರತು ಬಾಂಬ್ ತಯಾರಿಕೆಗಲ್ಲ. ಪೋಖ್ರಾನ್... ಪರೀಕ್ಷೆ ನಂತರ ಕೆಲವರು ಸಿಹಿ ಹಂಚಿ ... ಪಡುತ್ತಿದ್ದರೆ ಮತ್ತೊಂದೆಡೆ ಸಾವಿರಾರು ಜನ ಬಿಸಿ... ಝಳ ತಾಳಲಾರದೆ ಪ್ರಾಣ ತೆತ್ತರು.ಈ ಜನರಿಗೆ ಸಾ... ದಲ್ಲಿ ನೀರನ್ನು ಒದಗಿಸಿ ಅವರನ್ನು ಉಳಿಸ ಬಹುದಿ... ಇದಕ್ಕೆ ದೊಡ್ಡ ವಿಜ್ಞಾನ ತಂತ್ರಜ್ಞಾನದ ಅಗತ್ಯವೂ... ಈ ಕ್ಷೇತ್ರದಲ್ಲಿ ಕೆಲಸ ಮಾಡುವ ವಿಜ್ಞಾನಿಗಳಿಗೆ ... ಪ್ರೋತ್ಸಾಹ ನೀಡಿದಲ್ಲಿ ಪೋಖ್ರಾನ್ ಸಾಧನೆ... ಹೆಚ್ಚಿನ ಸಾಧನೆಯನ್ನುಂಟು ಮಾಡಬಹುದಿ... ಇದರಿಂದ ದೇಶವೂ ಹೆಮ್ಮೆಪಡುತ್ತಿತ್ತು. ... ಏಪ್ರಿಲ್‌ನಲ್ಲಿ ಕಾಂಡ್ಲಾದಲ್ಲಿ ಸಂಭವಿಸಿದ ಬಿರು... ಸಾವಿರಾರು ಜನರನ್ನು ಬಲಿ ತೆಗೆದುಕೊಂಡಿತು. ... ಜನರನ್ನು ಅನವಶ್ಯಕ ವರ್ಗವೆಂದು ಪರಿಗಣಿಸುತ್ತ... ಜವಾನ್, ಜೈ ಕಿಸಾನ್, ಜೈ ವಿಜ್ಞಾನ್ ಎಂದು ... ನಮಗೆ ನಾವೇ ...



ಠಾಕ್ರೆಯ ಮುಖಕ್ಕೆ ಹೊಡೆದ ತೀರ್ಪು

ಧರ್ಮನಿರಪೇಕ್ಷತೆಗೆ ಸಂದ ಜಯ

ಕುಖ್ಯಾತ ನಾಯಕ ಬಾಳಾಠಾಕ್ರೆಯ ತದಾನದ ಹಕ್ಕನ್ನು ಅನರ್ಹಗೊಳಿಸಿ ಚುನಾವಣ ಯೋಗ ಆಜ್ಞೆ ನೀಡಿದೆ.

ತನ್ನ ಮಾಫಿಯ ಹುಕುಂನಿಂದ ಏನೆಲ್ಲಾ ಾಡುತ್ತೇನೆಂದು ಹೂಂಕರಿಸಿ ಕೊಬ್ಬಿ, ಬ್ಬಿಹೋಗಿದ್ದ ಠಾಕ್ರೆಯ ಈ ಬೆಲೂನನ್ನು ೖನಿಸಿದ ಸೂಜಿಯಂತಿದೆ ಈ ತೀರ್ಪು. ಕಲೆ, ಹಿತ್ಯ, ಸಂಸ್ಕೃತಿ, ಕ್ರೀಡೆ, ರಾಜಕೀಯ..... ಹೀಗೆ ಲ್ಲಾ ಕ್ಷೇತ್ರಗಳಲ್ಲಿಯೂ ಕೈಯಾಡಿಸಿ ಕೆಡಿಸುತ್ತಿದ್ದ ಮುವಾದಿಗೆ ನೀಡಿದ ಪ್ರಹಾರವಿದು. ಭಾರತ ಶವು ಸಂವಿಧಾನದಲ್ಲಿ ಪ್ರತಿಪಾದಿಸುವ ರ್ಮನಿರಪೇಕ್ಷತೆ, ಪ್ರಜಾಪ್ರಭುತ್ವದ ಮೂಲಭೂತ ೌಲ್ಯಗಳಿಗೆ ಬದ್ಧವಾಗಿರುವುದನ್ನು ನ್ಯಾಯಾಲಯ, ಷ್ಟ್ರಪತಿಗಳು ಹಾಗೂ ಚುನಾವಣಾ ಯೋಗಗಳು ದೃಢವಾಗಿ ಪುನರುಚ್ಚರಿಸಿವೆ. ರ್ಮನಿರಪೇಕ್ಷ ರಾಷ್ಟ್ರ ಎಂದು ತಿಪಾದಿತವಾಗಿದೆ. ಅವರೆಲ್ಲಾ ಭಿನಂದನಾರ್ಹರು. ಈ ತೀರ್ಪು ಧರ್ಮವನ್ನು ಜಕೀಯ ದುರುದ್ದೇಶಗಳಿಗೆ ಬಳಸುವ ಮುವಾದಿಗಳಿಗೆ ಕಲಿಸಿದ ತಕ್ಕಪಾಠ. ರ್ಮವನ್ನು ರಾಜಕೀಯದಿಂದ ಬೇರ್ಪಡಿಸಬೇಕು ಬ ಆಗ್ರಹಕ್ಕೆ ದೊರೆತ ಮನ್ನಣೆ.

12 ವರುಷಗಳ ನಂತರದಲ್ಲಿ ತನ್ನ ಮೇಲೆ ೕಕೆ ಇಂತಹ ತೀರ್ಪು, ಇದನ್ನು ರೋಧಿಸುತ್ತೇನೆ ಎಂದೆಲ್ಲಾ ಠಾಕ್ರೆ ಮನಬಂದಂತೆ ಗಾಡಿದ್ದಾರೆ. ಅದು ಅವರ ಸಹಜ ಶೈಲಿ. ಇಷ್ಟು ಳಂಬ ಯಾಕೆ ಎಂಬುದನ್ನು ಅವರೇ ಕೇಳಿಕೊಳ್ಳಬೇಕು. ನ್ಯಾಯಾಲಯದ ತೀರ್ಪು ಬಂದ ನಂತರ ಅದು ಜಾರಿಯಾಗಲು ಠಾಕ್ರೆ ಮತ್ತು ಅವರು ಬೆಂಬಲಿಸುವ ಕೇಂದ್ರ ಸರ್ಕಾರ, ಅದರ ಪರಿವಾರ ಒಡ್ಡಿದ ಅಡ್ಡಿ- ಆತಂಕಗಳಿಗೆ ಅವರೇ ಉತ್ತರ ಹೇಳಬೇಕು!

ಈಗಿನ ಮಹಾರಾಷ್ಟ್ರದಲ್ಲಿ ಅವರದೇ ಪಕ್ಷದ ಅಧಿಕಾರ, ಕೇಂದ್ರದಲ್ಲಿ ಬಿಜೆಪಿಯೊಂದಿಗೆ ಭಾಗೀದಾರ, ಆತನ ಪ್ರತಿ ಉಸಿರು ವಿಷಗಾಳಿ ಹಬ್ಬಿಸಿದೆ. ಅಪಾಯದ ಹಂತ ತಲುಪಿದೆ.

ನ್ಯಾಯಾಲಯದ ತೀರ್ಪಿನ ಹಿನ್ನೆಲೆ:

1987 ರಲ್ಲಿ ಮಹಾರಾಷ್ಟ್ರದ ವಿಲೆಪಾರ್ಲೆ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ಶಿವಸೇನೆಯ ಅಭ್ಯರ್ಥಿ ರಮೇಶ್ ಪ್ರಭು ಪರವಾಗಿ ಬಾಳಾಠಾಕ್ರೆ ಅತ್ಯಂತ ಕೀಳು ಭಾಷೆ ಬಳಸಿದ್ದಲ್ಲದೇ, ಕೋಮುದ್ವೇಷ ಹುಟ್ಟಿಸುವ ಅನೇಕ ಪ್ರಚೋದನಾತ್ಮಕ ಮಾತುಗಳನ್ನು ಆಡಿದ್ದರು. ಮಸೀದಿಗಳನ್ನು ಉರುಳಿಸಿ, ದೇವಸ್ಥಾನಗಳನ್ನು ನಿರ್ಮಿಸುವುದಾಗಿಯೂ ಬೆದರಿಕೆ ಹಾಕಿದ್ದರು. ಶಿವಸೇನೆ ಅಂತಹುದೇ ಕರಪತ್ರಗಳನ್ನು ಹಂಚಿದ್ದರು. ಚುನಾವಣೆಯಲ್ಲಿ ಶಿವಸೇನೆಯ ಅಭ್ಯರ್ಥಿ ಗೆದ್ದರು. ರಾಜಕೀಯದಲ್ಲಿ ಧರ್ಮವನ್ನು ಬಳಸಲಾಗಿದೆಯೆಂದು, ಅನ್ಯಮತಗಳ ವಿರುದ್ಧ ಕೋಮು ಪ್ರಚೋದನೆ ಮಾಡಲಾಗಿದೆಯೆಂದು, ಇದು ಚುನಾವಣೆ ನಿಯಮಗಳ ಉಲ್ಲಂಘನೆಯೆಂದು ಸೋತ ಅಭ್ಯರ್ಥಿ ಪ್ರತಿಭಟಿಸಿ ಬಾಂಬೆ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದರು. ಠಾಕ್ರೆಯನ್ನು ತಪ್ಪಿತಸ್ಥರೆಂದು ಘೋಷಿಸಿ ಆರು ವರ್ಷಗಳ ಮತದಾನ ಹಕ್ಕನ್ನು ಅನರ್ಹಗೊಳಿಸಿ 1989 ರಲ್ಲಿ ತೀರ್ಪನ್ನು ನ್ಯಾಯಾಲಯ ನೀಡಿತು. ಆದರೆ ಶಿವಸೇನೆ ಈ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟ್‌ಗೆ ಮನವಿ ಸಲ್ಲಿಸಿತು. 1995 ಡಿಸೆಂಬರ್ 11, ರಂದು ಸುಪ್ರೀಕೋರ್ಟ್ ಬಾಂಬೆ ಹೈಕೋರ್ಟ್‌ನ ತೀರ್ಪನ್ನು ಎತ್ತಿಹಿಡಿಯಿತು. ನಂತರ ಚುನಾವಣಾ ಆಯೋಗವು, ರಾಷ್ಟ್ರಪತಿಗಳು, ನಂತರ ರಾಷ್ಟ್ರಪತಿಗಳು ಕೇಂದ್ರ ಕಾನೂನು ಸಚಿವಾಲಯಕ್ಕೆ ಕ್ರಮಕ್ಕೆ ಕಳಿಸಿದರು. ಈ ಪ್ರಕರಣ 1998 ರ ಆಗಸ್ಟ್‌ನಲ್ಲಿ ಇತ್ಯರ್ಥ ಆಗಬೇಕಿತ್ತು. ಆದರೆ ವಾಜಪೇಯಿಯವರ ಬಿಜೆಪಿ ನೇತೃತ್ವದ ಸರ್ಕಾರ ಕಾನೂನು ಸಚಿವರು ಒಂದಿಲ್ಲೊಂದು ನೆಪವೊಡ್ಡಿ ಕಾಲಹರಣ ಮಾಡುತ್ತಲೇ ಬಂದರು. ಅಂತಿಮವಾಗಿ ರಾಷ್ಟ್ರಪತಿಗಳ ಮಧ್ಯಪ್ರವೇಶದಿಂದಾಗಿ ಚುನಾವಣಾ ಆಯೋಗ ಠಾಕ್ರೆಯ ಮತದಾನದ ಹಕ್ಕನ್ನು 1995 ಡಿಸೆಂಬರ್ 11 ರಿಂದ ಪರಿಗಣಿಸಿ ಆರು ವರ್ಷಗಳ ಕಾಲ ಅಂದರೆ 2001 ಡಿಸೆಂಬರ್ 10 ರವರೆಗೆ ಅನರ್ಹಗೊಳಿಸಿ ಆದೇಶ ಹೊರಡಿಸಿದೆ.

ಈ ಹಿನ್ನೆಲೆ ಭಾರೀ ಮೌಲ್ಯಗಳ ಬಗ್ಗೆ, ಸಂಸ್ಕೃತಿ ಬಗ್ಗೆ ಮಾತನಾಡುವ ಬಿಜೆಪಿ ಹಾಗೂ ಶಿವಸೇನೆ ಪಕ್ಷಪಾತವನ್ನು ಎತ್ತಿತೋರಿಸುತ್ತದೆ. ಮಾತ್ರವಲ್ಲ ಅವರು ದೇಶ ಬದ್ಧವಾಗಿರುವ ಮೌಲ್ಯಗಳಿಗೆ ವಿರುದ್ಧವಾಗಿದ್ದಾರೆಂಬುದನ್ನು ಬಯಲು ಮಾಡುತ್ತದೆ. ಇಂತಹವರೆಲ್ಲಾ ಪಾಠ ಕಲಿಯಲೇಬೇಕು. ಪ್ರಜೆಯಾಗಿ ಮೂಲಭೂತ ಹಕ್ಕನ್ನು ಕಳೆದುಕೊಂಡ ಠಾಕ್ರೆ ನಾಚಿಕೆಯಿಲ್ಲದೇ ತಾನು ಹಿಂದುವೆಂದು, ಅದನ್ನೇ ರಾಜಕೀಯದಲ್ಲಿ ಪ್ರಚಾರಿಸುವನೆಂದು ಮತ್ತೆ ಹೇಳುತ್ತಿದ್ದಾರೆ. ಠಾಕ್ರೆಯಂತಹ ವಿಷಜಂತುಗಳ ವಿರುದ್ಧ ಕಾನೂನು ಮೂಲಕ ಮಾತ್ರ ಸಾಲದು, ಜನಸಮೂಹವೇ ಇಂತಹವರಿಗೆ ಪಾಠ ಕಲಿಸಬೇಕು. ತಾವಾಗಿ ಪಾಠ ಕಲಿಯುವ ಜಾಯಮಾನದವರು ಇವರಲ್ಲ ಎಂಬುದು ಅನುಭವದ ಮಾತು. ಅಂತೂ ಠಾಕ್ರೆಯಂತಹ ವಿಷಜಂತುವಿನ ಹಲ್ಲುಕಿತ್ತುವ ಸಾಮರ್ಥ್ಯ ಈ ದೇಶಕ್ಕೆ ಇದೆ, ಧರ್ಮನಿರಪೇಕ್ಷ ಶಕ್ತಿಗಳಿಗೆ ಇದೆಯೆಂಬುದನ್ನು ಈ ತೀರ್ಪು ದೃಢೀಕರಿಸುತ್ತದೆ. ಇವನ್ನು ಬೆಂಬಲಿಸಬೇಕು ಬಲಪಡಿಸಬೇಕು.

- ಎಸ್.ವೈ.ಜಿ

ವ್ಯಂಗ್ಯಚಿತ್ರ ಕೃಪೆ: 'ದಿ ವೀಕ್' ಯಲ್ಲಿ ಪ್ರಕಾಶ್ ಶೆಟ್ಟಿ



ರಾಜಕೀಯ ಲಾಭಕ್ಕೆ ಸೇನೆಯ ದುರುಪಯೋಗ – ಇನ್ನೊಂದು ಪ್ರಯತ್ನ

ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ವಿವರಣೆ ಕೊಡಲು ಸೇನಾಧಿಕಾರಿ ಗಳನ್ನು ಕರೆಸಿದ ಬಿಜೆಪಿಯ ಕ್ರಮಕ್ಕೆ ದೇಶಾದ್ಯಂತ ಭಾರಿ ಟೀಕೆ ವ್ಯಕ್ತಗೊಂಡಿದ್ದು ನಿಮಗೆ ನೆನಪಿರ ಬಹುದು. ಇದರಿಂದಲಾದರೂ ಬಿಜೆಪಿ ಪ್ರಜಾಪ್ರಭುತ್ವವಾದಿ ನಡವಳಿಕೆ ಹೇಗಿರಬೇಕೆಂದು ತಿಳಿದುಕೊಳ್ಳಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ವಾಜಪೇಯಿ ಸರಕಾರ ಸೇನಾಪಡೆಗಳನ್ನು ಸಂಕುಚಿತ ಉದ್ದೇಶಗಳಿಗೆ ಬಳಸುವ ಇನ್ನೊಂದು ಪ್ರಯತ್ನವನ್ನು ಮಾಡಿದೆ. ಇತ್ತೀಚೆಗೆ ಜಮ್ಮು-ಕಾಶ್ಮೀರದ ಲಡಾಖ್‌ನಲ್ಲಿ 'ಸಿಂಧು ಯಾತ್ರೆ'ಗೆ ಸೈನಿಕರನ್ನು ಬಳಸಿಕೊಳ್ಳಲಾಗಿದೆ.

'ಸಿಂಧು ಯಾತ್ರೆ' ಎಂಬುದು ಧಾರ್ಮಿಕ ಅಂಶಗಳಿರುವ ಆರ್.ಎಸ್.ಎಸ್. ನ ಕಾರ್ಯ ಕ್ರಮ. ಈ ಬಗ್ಗೆ ಸಂದೇಹವೇನೂ ಇಲ್ಲ. ಬೌದ್ಧ ಮತಾವಲಂಬಿಗಳೇ ಹೆಚ್ಚಿನ ಸಂಖ್ಯೆಯಲ್ಲಿರುವ ಲಡಾಖ್‌ನ್ನು ಆರ್.ಎಸ್.ಎಸ್. ವಿಶೇಷ ಕಾರಣಗಳಿ ಗಾಗಿಯೇ ಆರಿಸಿಕೊಂಡಿದೆ. 1977 ರಿಂದ ಈಗ ಕೇಂದ್ರ ಗೃಹ ಮಂತ್ರಿಯಾಗಿರುವ ಅಡ್ವಾಣಿ ಹಾಗೂ ಆರ್.ಎಸ್.ಎಸ್. ಪತ್ರಿಕೆ 'ಪಾಂಚಜನ್ಯ'ದ ಸಂಪಾದಕ ಪವನ್ ವಿಜಯ್ ಆರಂಭಿಸಿದ ಈ ಆರ್.ಎಸ್.ಎಸ್. ಕಾರ್ಯ ಕ್ರಮದಲ್ಲಿ ಸಾಮಾನ್ಯವಾಗಿ ಈಗ ಪಾಕಿಸ್ತಾನದಲ್ಲಿರುವ ಸಿಂಧ್‌ನಿಂದ ವಲಸೆ ಬಂದ ಸಿಂಧಿ ಹಿಂದುಗಳೇ ಹೆಚ್ಚಾಗಿ ಭಾಗವಹಿಸುತ್ತಿ ದ್ದರೆ.(ಸಿಂಧೂ ನದಿ ಭಾರತದಲ್ಲೂ ಹರಿಯುತ್ತಿದೆ ಎಂದು 1976 ರಲ್ಲಷ್ಟೇ ಅಡ್ವಾಣಿಯವರಿಗೆ ತಿಳಿಯಿತಂತೆ!) ಈ ಬಾರಿ ಬಿಜೆಪಿ ನೇತೃತ್ವದ ಸರಕಾರದಿಂದಾಗಿ ಕೇಂದ್ರ, ಗೃಹಮಂತ್ರಿಗಳು ಮಾತ್ರವಲ್ಲ ಕೇಂದ್ರ ರಕ್ಷಣಾ ಮಂತ್ರಿಗಳೂ ಭಾಗ ವಹಿಸಿದ್ದರು. ಜತೆಗೆ ಅವರೊಂದಿಗೆ ಶಾಮೀಲಾಗಿ ಕಾಶ್ಮೀರ ಜನತೆಗೆ ದ್ರೋಹ ಬಗೆಯುತ್ತಿರುವ ಫಾರೂಕ್‌ಅಬ್ದುಲ್ಲಾ ಕೂಡಾ ಭಾಗವಹಿಸಿದ್ದರು.

ಗೃಹಮಂತ್ರಿಗಳಿಂದಾಗಿ ಐಟಿಬಿಪಿ (ಭಾರತ-ಟಿಬೆಟ್ ಗಡಿ ಪೋಲೀಸ್ ಪಡೆ) ಯ ಘಟಕಗಳು ಈ ಕಾರ್ಯಕ್ರಮಕ್ಕೆ ಆಹಾರ ಮತ್ತಿತರ ನೆರವು ಒದಗಿಸುವಂತೆ ಮಾಡಲಾಗಿತ್ತು ಎಂದೂ ವರದಿಗಳು ಬಂದಿವೆ. ಈ ಆರ್.ಎಸ್.ಎಸ್. ಕಾರ್ಯಕ್ರಮದ ವೇದಿಕೆಯಲ್ಲಿ ಸೇನಾಧಿಕಾರಿ ಲೆಫ್ಟಿನೆಂಟ್ ಜನರಲ್ ಬುಧ್ವಾ ಕೂಡಾ ಇದ್ದರು. ಲಡಾಖ್ ಕ್ಷೇತ್ರದಲ್ಲಿದ್ದ ಸೈನಿಕರು ಇದರಲ್ಲಿ ಭಾಗವಹಿಸುವಂತೆ ಮಾಡಲಾಗಿತ್ತು. "ಇದು ಶುದ್ಧ ರಾಜಕೀಯ ಸಭೆ. ಇಲ್ಲಿ ನಮಗೇನು ಕೆಲಸ? ಸೈನಿಕರನ್ನು ಸನ್ಮಾನಿಸಬೇಕೆಂದಿದ್ದರೆ ಅವರು ನಮ್ಮ ಘಟಕಗಳಿಗೇ ಬರಬೇಕಾಗಿತ್ತು" ಎಂದು ಒಬ್ಬ ಸೇನಾಧಿಕಾರಿ ಹೇಳಿರುವುದಾಗಿ 'ಔಟ್ ಲುಕ್'ಪತ್ರಿಕೆ ಹೇಳಿದೆ.

ಸಶಸ್ತ್ರ ಪಡೆಗಳನ್ನು ರಾಜಕೀಯಗ್ರಸ್ತಗೊಳಿಸುವ ಅಪಾಯಕಾರಿ ಮಾರ್ಗವನ್ನು ಈ ಉಸ್ತುವಾರಿ ಸರಕಾರ ಹಿಡಿಯುತ್ತಿದೆ. ಹಾಗೆ ಮಾಡದಂತೆ ತಡೆಯಬೇಕು ಎಂದು ಸಿಪಿಐ(ಎಂ) ಪೊಲಿಟ ಬ್ಯೂರೋ ರಾಷ್ಟ್ರಪತಿಗಳಿಗೆ ಮನವಿ ಮಾಡಿದೆ.

ವಾಧ್ವಾ ಆಯೋಗದ ವರದಿ ಯಾರ ಕಣ್ಣಿಗೆ ಮಣ್ಣೆರಚಲು?


ಒರಿಸ್ಸಾದಲ್ಲಿ ಆಸ್ಟ್ರೇಲಿಯನ್ ಕ್ರೈಸ್ತ ಪಾದ್ರಿ ಗ್ರಹಾಂ ಸ್ಟೈನ್ಸ್ ಮತ್ತು ಆತನ ಇಬ್ಬರು ಮಕ್ಕಳನ್ನು ಜೀವಂತ ಸುಟ್ಟು ಅತ್ಯಂತ ಹೀನ ಘಟನೆಯ ತನಿಖೆ ನಡೆಸಲು ನೇಮಿಸಿದ ನ್ಯಾಯಮೂರ್ತಿ ವಾಧ್ವಾ ಆಯೋಗದ ವರದಿಯನ್ನು ಸಾರ್ವಜನಿಕಗೊಳಿಸಲಾಗಿದೆ. ಈ ಆಯೋಗವನ್ನು ನೇಮಿಸಿದಾಗಲೇ ಇದೊಂದು ಆರ್.ಎಸ್.ಎಸ್. ನೇತೃತ್ವದ ವಿವಿಧ ಕಾವಿಪಡೆಗಳ ಪಾತ್ರವನ್ನು ಮರೆಮಾಚಲಿಕ್ಕಾಗಿಯೇ ನೇಮಿಸಿದ ಆಯೋಗ ಎಂದು ಎಡ ಮತ್ತು ಪ್ರಗತಿಪರ ವ್ಯಕ್ತಿಗಳು ಹೇಳಿದ್ದರು. ಅದೀಗ ನಿಜವಾಗಿದೆ. ಏಕೆಂದರೆ ಆದಾಗಲೇ ಎರಡು ಶಾಸನಬದ್ಧ ಸಂಸ್ಥೆಗಳಾದ 'ರಾಷ್ಟ್ರೀಯ ಮಾನವ ಹಕ್ಕು ಆಯೋಗ' ಮತ್ತು 'ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ' ತಮ್ಮ ತನಿಖಾ ತಂಡಗಳನ್ನು ಕಳಿಸಿದ್ದವು. ಹೆಚ್ಚಿನ ಕೊಲೆಗಡುಕರನ್ನು ಆಗಲೇ ಗುರುತಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಕ್ರೈಸ-ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೆ ಒಂದು ಆಯೋಗ ನೇಮಿಸಿ ಅದಕ್ಕೆ ಎರಡು ತಿಂಗಳ ಅವಕಾಶ ನೀಡಿರುವುದು ಈ ಜಘನ್ಯ ಕೃತ್ಯದಿಂದ ಜನಗಳ ಗಮನವನ್ನು ಬೇರೆಡೆ ತಿರುಗಿಸುವ ವಿಳಂಬ ತಂತ್ರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸೇರಿದಂತೆ ಹಲವರು ಖಂಡಿಸಿದ್ದರು.

ನ್ಯಾಯಮೂರ್ತಿ ವಾಧ್ವಾ ಆಯೋಗದ ವರದಿಯಲ್ಲಿನ ಅಂಶಗಳು ಇದನ್ನೀಗ ಸಾಬಿತುಪಡಿಸಿವೆ. ಈ ಹೀನಕೃತ್ಯಕ್ಕೆ ಧಾರಾಸಿಂಗ್ ಎಂಬ ವ್ಯಕ್ತಿ ಮಾತ್ರವೇ ಜವಾಬ್ದಾರ, ಆತ ಯಾವುದೇ ಸಂಘಟನೆಯ ಸದಸ್ಯನಲ್ಲ, ಯಾವುದೇ ಸಂಘಟನೆ ಈ ಕೃತ್ಯದಲ್ಲಿ ಭಾಗವಹಿಸಿರಲಿಲ್ಲ ಎಂಬ ತೀರ್ಮಾನಕ್ಕೆ ಈ ಆಯೋಗ ಬಂದಿದೆ.

ಈ ಪ್ರದೇಶದಲ್ಲಿ ದಾರಾಸಿಂಗ್ ಆರ್.ಎಸ್.ಎಸ್. ಸಂಘಟನೆಯ ಪ್ರಚಾರ ಕಾರ್ಯಗಳಲ್ಲಿ ಭಾಗವಹಿಸಿದ ಪುರಾವೆಗಳು ಸಾಕಷ್ಟು ವ್ಯಾಪಕವಾಗಿ ಇರುವಾಗ ಆಯೋಗ ಇಂತಹ ತೀರ್ಮಾನಕ್ಕೆ ಯಾವ ಆಧಾರದಲ್ಲಿ ಬಂತೋ ತಿಳಿಯದು. ಇದೇ ಆಯೋಗ ಧಾರಾಸಿಂಗ್ ಮುಸ್ಲಿಂ ರಾಸು ವ್ಯಾಪಾರಿಗಳ ವಿರುದ್ಧ ಕ್ರಿಮಿನಲ್ ಧಾಳಿಗಳನ್ನು ನಡೆಸಿದ್ದ ಎಂದು ಉದಾಹರಣೆ ನೀಡುತ್ತದೆ. ಆದರೆ ಈ ಮುಸ್ಲಿಂ ರಾಸು ವ್ಯಾಪಾರಿಗಳ ವಿರುದ್ಧ ಪ್ರಚಾರ ಚಳುವಳಿ ಆರಂಭಿಸಿದ್ದು ವಿಶ್ವ ಹಿಂದು ಪರಿಷತ್ ಮತ್ತು ಭಜರಂಗ ದಳ ಎಂಬುದು ಸರ್ವವಿದಿತ- ಆಯೋಗದ ಗಮನಕ್ಕೆ ಈ ಅಂಶ ಏಕೆ ಬರಲಿಲ್ಲ?

ಈ ಹೀನ ಕೃತ್ಯದಲ್ಲಿ ಆರ್.ಎಸ್.ಎಸ್. ಸಂಘಟನೆಗಳ ಪಾತ್ರವನ್ನು ಮರೆ ಮಾಚಲು ಬಿಜೆಪಿ ನೇತೃತ್ವದ ಸರಕಾರದ ಪ್ರಯತ್ನಗಳಿಂದ ಯಾರನ್ನೂ ವಂಚಿಸಲು ಸಾಧ್ಯವಾಗದು. ಕೊಲೆ ಮಾಡಿ ಏಳು ತಿಂಗಳಾದರೂ ಧಾರಾಸಿಂಗ್ ಈಗಲೂ ತಲೆಮರೆಸಿಕೊಂಡಿದ್ದಾನೆ ಎಂಬುದು ಏನನ್ನು ತೋರಿಸುತ್ತದೆ? ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ದ್ವೇಷದ ರಾಜಕೀಯಕ್ಕೆ ಸರ್ಕಾರಿ ರಕ್ಷಣೆಯಿದೆ ಎಂದೇ ಅಲ್ಲವೇ? ವಾಧ್ವಾ ಆಯೋಗದ ವರದಿ ಈ ಅಂಶವನ್ನಂತೂ ಮರೆ ಮಾಚಲು ಸಾಧ್ಯವಿಲ್ಲ.

ಟೆಲಿಕಾಂ ಹಗರಣವೆಂದರೆ ನಿಮಗೆ ತಟ್ಟನೆ ಪಂಡಿತ್ ಸುಖರಾಂ ಎಂಬ ಹೆಸರು ನೆನಪಾಗುತ್ತಿರಬೇಕಲ್ಲವೇ? ಅದಕ್ಕಿಂತ ಹೆಚ್ಚಾಗಿ ಅವರ ಮನೆಯಲ್ಲೆಲ್ಲಾ ಅಡಗಿಸಿಟ್ಟ ಕೋಟ್ಯಾಂತರ ರೂಪಾಯಿಗಳ ನೋಟುಗಳು ಚೆಲ್ಲಾಪಿಲ್ಲಿಯಾಗಿದ್ದ ದೃಶ್ಯ ನೆನಪಾಗುತ್ತದೆಯೇ? ದೂರಸಂಪರ್ಕ ಇಲಾಖೆಗೆ ೨೦ಸಾವಿರ ಕೋಟಿ ರೂಪಾಯಿಗಳ ನಷ್ಟವುಂಟುಮಾಡಿದ್ದಕ್ಕೆ ಪಡೆದ ಲಂಚದ ಹಣ ಅದು ಎಂದು ಅಂದು ಜನ ಜನಿತವಾಗಿದ್ದ ಸುದ್ದಿ. ನರಸಿಂಹ್ ರಾವ್ ಸರಕಾರದ ಅತ್ಯಂತ ದೊಡ್ಡ ಹಗರಣ ಎಂದು ಅದು ಕುಖ್ಯಾತವಾಯಿತು.ಆದರೆ ಈಗ ಬಯಲಾಗುತ್ತಿದೆ ಅದನ್ನೂ ನಾಚಿಸುವ ಎರಡನೇ ಟೆಲಿಕಾಂ ಹಗರಣ-ರಾಷ್ಟ್ರೀಯ ಖಜಾನೆಗೆ ಐವತ್ತು ಸಾವಿರ ಕೋಟಿ ರೂಪಾಯಿಗಳ ವಂಚನೆ ಮಾಡುವ ಪ್ರಯತ್ನ. ಉಸ್ತುವಾರಿ ವಾಜಪೇಯಿ ಸರಕಾರದ ಉಸ್ತುವಾರಿಯಲ್ಲಿ ನಡೆದಿರುವ ಈ ಪ್ರಯತ್ನದ 'ಫಲ' ಎಷ್ಟು ನೂರು ಸಾವಿರ ಕೋಟಿ ರೂಪಾಯಿಗಳು? ಅವು ಎಲ್ಲೆಲ್ಲಿ 'ಚೆಲ್ಲಾಪಿಲ್ಲಿ' ಯಾಗಿರಬಹುದು? ಸಂಪರ್ಕ ಖಾತೆಯ ಮಂತ್ರಿಯನ್ನು ಮೂಲೆಗೆ ತಳ್ಳಿ, ಹಣಕಾಸು ಮಂತ್ರಿ ಹಾಗೂ ಅಡ್ವೊಕೇಟ್ ಜನರಲ್‌ರವರ ಅಭಿಪ್ರಾಯಗಳನ್ನು ದಬಾಯಿಸಿ ರಾಷ್ಟ್ರಪತಿಗಳ ಸಲಹೆಯನ್ನು ತಿರಸ್ಕರಿಸಿ, ಉಸ್ತುವಾರಿ ಸರಕಾರದ ಮಿತಿಗಳನ್ನೆಲ್ಲಾ ಮೀರಿದ, ಚುನಾವಣಾ ಆಯೋಗ ಮತ್ತು ದಿಲ್ಲಿ ಹೈಕೋರ್ಟು ಕೂಡ ಪ್ರಶ್ನಿಸಿದ ಈ 'ಸಹಸ್ರಮಾನದ ಮಹಾ ಹಗರಣ' ಈ ಬಿಜೆಪಿ ನೇತೃತ್ವದ ಸರಕಾರದ ನಿಜಸ್ವರೂಪವನ್ನು ದೇಶದ ಮುಂದಿಟ್ಟದೆ.



ಮೇ 13,1994. ಆಗ ನರಸಿಂಹರಾವ್ ಸರಕಾರದಲ್ಲಿ ದೂರಸಂಪರ್ಕ ಮಂತ್ರಿಯಾಗಿದ್ದ , ನಂತರ ಕುಖ್ಯಾತರಾದ ಪಂಡಿತ್ ಸುಖರಾಂ 'ರಾಷ್ಟ್ರೀಯ ದೂರಸಂಪರ್ಕ ನೀತಿ'ಯನ್ನು ಅಂದರೆ ಟೆಲಿಕಾಂ ವಲಯವನ್ನು ಖಾಸಗೀಕರಿಸುವ ಧೋರಣೆಯನ್ನು ಮಂಡಿಸಿದರು. ಇದರ ಪ್ರಕಾರ ದೇಶವನ್ನು ಹಲವು ಟೆಲಿಕಾಂ ವಲಯಗಳನ್ನಾಗಿ ಮಾಡಿ ಪ್ರತಿ ವಲಯದಲ್ಲೂ ಸಾಮಾನ್ಯ ದೂರವಾಣಿ ಸೇವೆಗಳು ಹಾಗೂ ಮಹಾನಗರಗಳನ್ನು ಬಿಟ್ಟು ಇತರೆಡೆ ಸೆಲ್ಯುಲರ್(ಅಥವಾ ಮೊಬೈಲ್ ಅಂದರೆ ಎಲ್ಲೆಂದರಲ್ಲಿ ಒಯ್ಯಬಹುದಾದ ಟೆಲಿಫೋನುಗಳು)ಸೇವೆಗಳನ್ನು ಒದಗಿಸಲು ತಲಾ ಇಬ್ಬರಿಗೆ ಲೈಸೆನ್ಸುಗಳನ್ನು ನೀಡುವ ಪದ್ಧತಿಯನ್ನು ಆರಂಭಿಸಲಾಯಿತು.(ಮಹಾನಗರಗಳಲ್ಲಿ ಸೆಲ್ಯುಲರ್ ಸೇವೆಯನ್ನು ಆ ಮೊದಲೇ ಖಾಸಗಿಯವರಿಗೆ ನೀಡಲಾಗಿತ್ತು. ಸಾಮಾನ್ಯ ಟೆಲಿಫೋನ್ ಸೇವೆಗಳಲ್ಲಿ ದೂರ ಸಂಪರ್ಕ ಇಲಾಖೆ ಅಥವಾ ಸರಕಾರೀ ಒಡೆತನದ ಎಂ.ಟಿ.ಎನ್ ಎಲ್.ಗೆ (ಮಹಾನಗರ ಟೆಲಿಫೋನ್ ನಿಗಮ) ಹಾಗೂ ಇನ್ನೊಂದು ಲೈಸೆನ್ಸನ್ನು ಖಾಸಗಿಯವರಿಗೆ ಕೊಡಬೇಕು, ಸೆಲ್ಯುಲರ್ ವಿಭಾಗದಲ್ಲಿ ಎರಡೂ ಲೈಸೆನ್ಸಗಳು ಖಾಸಗಿಯವರಿಗೆ. ಟೆಂಡರ್ ಕರೆದು ಅತಿ ಹೆಚ್ಚು ಲೈಸೆನ್ಸ್ ಶುಲ್ಕ ನೀಡುವವರಿಗೆ ಈ ಲೈಸೆನ್ಸ್‌ಗಳನ್ನು ನೀಡುವುದು ಇದು ಈ ಧೋರಣೆಯ ಮುಖ್ಯಾಂಶ (ಈ ಟೆಂಡರ್‌ನ್ನು ಕರೆದ ಮೇಲೆ ನಿಯಮಗಳನ್ನು ಕೆಲವು ಕಂಪನಿಗಳಿಗೆ ಅನುಕೂಲವಾಗುವಂತೆ ಬದಲಿಸಿ ದೂರಸಂಪರ್ಕ ಇಲಾಖೆಗೆ 20 ಸಾವಿರ ಕೋಟಿ ರೂ.ಲೈಸೆನ್ಸ್ ಶುಲ್ಕ ವಂಚನೆಯಾಗುವಂತೆ ಮಾಡಿದ್ದು ಮೊದಲನೇ ಟೆಲಿಕಾಂ ಹಗರಣದ ಸಾರಾಂಶ. ಈ ವ್ಯಕ್ತಿ ಈಗ ಬಿಜೆಪಿಯ ಮಿತ್ರರಾಗಿರುವುದು ಕೇವಲ ರಾಜಕೀಯ ಸಮಯಸಾಧಕತನವಷ್ಟೇ ಅಲ್ಲ)

ಈ ಟೆಲಿಕಾಂ ಧೋರಣೆಯನ್ನು ಎಡಪಕ್ಷಗಳು ಆಗ ಬಲವಾಗಿಯೇ ವಿರೋಧಿಸಿದ್ದವು- ಕಾರಣ ಜಗತ್ತಿನಲ್ಲಿ ಎಲ್ಲೂ ಟೆಲಿಫೋನ್ ಸಂಪರ್ಕಗಳ ಸಂಖ್ಯೆ ಸಾಕಷ್ಟು ಇರದೆ ಇಬ್ಬರಿಬ್ಬರಿಗೆ ಲೈಸೆನ್ಸ್ ನೀಡಿದ ಉದಾಹರಣೆಗಳಿಲ್ಲ. ಇದರಿಂದ ಟೆಲಿಫೋನ್ ಸಂಪರ್ಕ ಇನ್ನಷ್ಟು ದುಬಾರಿಯಾಗುತ್ತವೆ ಎಂದು ಸಿಪಿಐ(ಎಂ) ಎಚ್ಚರಿಸಿತ್ತು. ಆದರೆ ಕಾಂಗ್ರೆಸ್(ಐ) ಸರಕಾರ, ಇದನ್ನು 'ಕುರುಡು ಸಿದ್ಧಾಂತ' ಎಂದು ಜರೆದು ಟೆಲಿಫೋನ್ ಸಂಪರ್ಕ ವ್ಯವಸ್ಥೆಯನ್ನು ಖಾಸಗಿಯವರಿಗೆ ಕೊಟ್ಟರೆ ಭಾರಿ ಬೇಡಿಕೆ ಬರುತ್ತದೆ ಎಂದು ಹೇಳಿ ಕೆಲವರು ಭಾರೀ ಟೆಂಡರ್ ಕೂಗಿ ಲೈಸೆನ್ಸ್ ಪಡೆದರು. ಆದರೆ ಎಡಪಕ್ಷಗಳು ಹೇಳಿದ್ದು ಸರಿ ಎಂದು ಬೇಗನೆ ಇವರೆಲ್ಲರ ಅರಿವಿಗೆ ಬಂತು. ಹಲವಾರು ವಲಯಗಳಲ್ಲಿ ಟೆಂಡರ್‌ಗಳೇ ಬರಲಿಲ್ಲ. ಟೆಂಡರ್ ಗೆದ್ದವರಲ್ಲಿಯೂ ಹಲವರು ಟೆಲಿಫೋನ್ ಅಥವಾ ಸೆಲ್ಯುಲರ್ ಸೇವೆಗಳನ್ನು ಪ್ರಾರಂಭಿಸಲೇ ಇಲ್ಲ. ಇದರಿಂದ ಲೈಸೆನ್ಸ್ ಶುಲ್ಕ ಬಾಕಿ ಅಗಾಧ ಪ್ರಮಾಣದಲ್ಲಿ ಏರಿತು. ಈ ವರ್ಷದ ಆರಂಭದ ವೇಳೆಗೆ ಅದು ಸುಮಾರು 4500 ಕೋಟಿ ರೂ. ತಲುಪಿತು. ರಾಷ್ಟ್ರದ ಬೊಕ್ಕಸಕ್ಕೆ ಸಲ್ಲಬೇಕಾದ ಈ ಹಣವನ್ನು ಸಲ್ಲಿಸಲಿಲ್ಲ ಮಾತ್ರವಲ್ಲ ಸರಕಾರ ಮಧ್ಯ ಪ್ರವೇಶಿಸಿ ಈ ಲೈಸೆನ್ಸ್ ಶುಲ್ಕದಲ್ಲಿ ರಿಯಾಯ್ತಿ ನೀಡಬೇಕು ಅಥವಾ ರದ್ದು ಮಾಡಬೇಕು ಎಂದು ಒತ್ತಡ ಹಾಕಲಾರಂಭಿಸಿದರು.

ಜಗಮೋಹನ್ ಎತ್ತಂಗಡಿ ಏಕೆ?

ಜೂನ್ 9 ರಂದು ಒಂದು ದೊಡ್ಡ ಸುದ್ದಿ ದೇಶದ ಗಮನ ಸೆಳೆಯಿತು. ಉಸ್ತುವಾರಿ ಕೆಲಸವಷ್ಟೇ ಮಾಡಬೇಕಿದ್ದ ವಾಜಪೇಯಿ ಮಂತ್ರಿಮಂಡಲದಲ್ಲಿ ಖಾತೆಗಳ ಬದಲಾವಣೆಯನ್ನು ಪ್ರಕಟಿಸಲಾಯಿತು. ಅದರ ಮುಖ್ಯ ಉದ್ದೇಶ ದೂರಸಂಪರ್ಕ ಖಾತೆಯ ಮಂತ್ರಿ ಜಗಮೋಹನ್ ಎತ್ತಂಗಡಿ. ಇದು ಯಾವ ಮೂರ್ಖನಿಗೂ ಬೆಳಕಿನಷ್ಟು ಸ್ಪಷ್ಟವಾದ ಸಂಗತಿ.

ಏಕೆ ಈ ಎತ್ತಂಗಡಿ? ಆ ಇಲಾಖೆಯನ್ನು ಸ್ವತ: ಪ್ರಧಾನಮಂತ್ರಿಗಳೇ ಏಕೆ ವಹಿಸಿಕೊಂಡರು? ಒಂದು ತಿಂಗಳೊಳಗೆ ಜುಲೈ 6ರಂದು ಅಂದರೆ 13ನೇ ಲೋಕಸಭೆಗೆ ಚುನಾವಣೆಗಳ ವೇಳಾಪಟ್ಟಿಯನ್ನು ಚುನಾವಣಾ ಆಯೋಗ ಪ್ರಕಟಿಸುವ ಕೇವಲ 5 ದಿನಗಳ ಮೊದಲು ಉಸ್ತುವಾರಿ ಬಿಜೆಪಿ ಸರಕಾರ ಸಂಸತ್ತಿಗೆ ತಿಳಿಸದೆಯೇ ರಾಷ್ಟ್ರೀಯ ದೂರ ಸಂಪರ್ಕ ನೀತಿಯಲ್ಲಿ ಒಂದು ಪ್ರಮುಖ ಬದಲಾವಣೆ ತರುವ 'ರಾಷ್ಟ್ರೀಯ ದೂರಸಂಪರ್ಕ ನೀತಿ-99' (ಎನ್.ಟಿ. ಪಿ.-99) ನ್ನು ಪ್ರಕಟಿಸಿತು.1994ರ ಧೋರಣೆಯಲ್ಲಿದ್ದ ಲೈಸೆನ್ಸ್ ಶುಲ್ಕ ವ್ಯವಸ್ಥೆಯನ್ನು ಬಿಟ್ಟು ತಾವು ಲೈಸೆನ್ಸ್ ಪಡೆದ ವಲಯದಲ್ಲಿನ ಆದಾಯವನ್ನು ಹಂಚಿಕೊಳ್ಳುವ ಹೊಸ ಪದ್ಧತಿಯನ್ನು ಖಾಸಗಿ ಕಂಪನಿಗಳವರು ಕೆಲವು ಶರತ್ತುಗಳ ಮೇಲೆ ಆಯ್ದುಕೊಳ್ಳಬಹುದು ಎಂದು ಹೇಳಲಾಯಿತು. ಅಷ್ಟೇ ಅಲ್ಲ, ದೂರ ಸಂಪರ್ಕವಲಯದ ಬಗ್ಗೆ ಸಾಂವಿಧಾನಿಕ ಅಧಿಕಾರ ಹೊಂದಿರುವ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (tras)ವನ್ನು ಕೇಳದೆ ಆದಾಯದ 15%ವನ್ನು ಸರಕಾರಕ್ಕೆ ಕೊಟ್ಟರೆ ಸಾಕು ಎಂದು ಹೇಳಲಾಯಿತು!

ವಾಸ್ತವವಾಗಿ ಈ ನೀತಿಯನ್ನೂ ಮೊದಲೇ ತಯಾರಿಸಲಾಗಿತ್ತು. ಆದರೆ ಲೋಕಸಭೆಯ ಮುಂದೆ ಅದನ್ನು ಮಂಡಿಸಿರಲಿಲ್ಲ. ಜಗಮೋಹನ್‌ರವರು ಈ ಬದಲಾವಣೆಯನ್ನು ವಿರೋಧಿಸುತ್ತಾರೆಂಬ ಕಾರಣಕ್ಕೇ ಅವರ ಎತ್ತಂಗಡಿ ನಡೆಯಿತು. ಲೈಸೆನ್ಸ್ ಶುಲ್ಕ ಬಾಕಿ ಮಾಡಿಕೊಂಡ ಖಾಸಗೀ ದೂರಸಂಪರ್ಕ ಕಂಪನಿಗಳ ಒತ್ತಡವನ್ನು ವಿರೋಧಿಸಿ ಅವರು ಒಂದು ಸುತ್ತೋಲೆ ಕಳಿಸಿದ್ದರಂತೆ. ಅದರಲ್ಲಿ ಅವರು ಹನ್ನೊಂದು ಪ್ರಶ್ನೆಗಳನ್ನು ಕೇಳಿದ್ದರಂತೆ. ಈ 'ಅಪರಾಧ'ಕ್ಕಾಗಿಯೇ ಅವರನ್ನು ಬೇರೆ ಖಾತೆಗೆ ವರ್ಗಾಯಿಸಿ ಸ್ವತ: ಪ್ರಧಾನಿಗಳು ಆ ಖಾತೆಯನ್ನು ವಹಿಸಿಕೊಂಡರು.

ದೇಶದ ಮಹಾ ಲೆಕ್ಕ ಪರಿಶೋಧಕರ (ಸಿ.ಎ.ಜಿ) 1997-98 ರ ವರದಿ ಖಾಸಗಿ ಕಂಪನಿಗಳಿಂದ ಬರಬೇಕಾದ ಈ ಶುಲ್ಕವನ್ನು ವಸೂಲಿ ಮಾಡದ ಬಗ್ಗೆ ಗಂಭೀರ ಟಿಪ್ಪಣಿ ಮಾಡಿದ್ದನ್ನು ಉಲ್ಲೇಖಿಸಿದ ಜಗಮೋಹನ್ ರವರು ಕೇಳಿದ ಪ್ರಮುಖ ಪ್ರಶ್ನೆಗಳು-

1. ಸ್ಪರ್ಧಾತ್ಮಕ ಟೆಂಡರ್‌ನ ಆಧಾರದ ಮೇಲೆ ಸಹಿ ಕರಾರು ಪತ್ರಗಳಿಗೆ ಸಹಿ ಮಾಡಿ ನಂತರ ಆ ಕರಾರುಗಳನ್ನು ಪಾಲಿಸಲಾಗವುದಿಲ್ಲ ಎನ್ನುವದು ಕಾನೂನಿನ ಪ್ರಕಾರ, ಹಣಕಾಸಿನ ದೃಷ್ಟಿಯಿ[…] ವಾಣಿಜ್ಯ ದೃಷ್ಟಿಯಿಂದ ಹಾಗೂ ನೈತಿಕವಾಗಿ ಸರಿ[…]

2. ಖಾಸಗಿ ಕಂಪನಿಗಳಿಗೆ ಲಾಭಕರವಾಗಿಲ್ಲವಾದರೆ ಹಾಗಿದ್ದರೆ [...] ಕಂಪನಿಗಳು ಹೆಚ್ಚಿನ ದರಗಳಲ್ಲಿ ತಮ್ಮ ಶೇರು[...] ಮಾರಿಕೊಂಡು ಅಪಾರ ಹಣಗಳಿಸಿದ್ದು ಹೇಗೆ?([...] ನೋಡಿ)

3- ನಷ್ಟವಾಗುತ್ತಿದ್ದರೆ ಅಂತಹ ಕಂಪನಿಗಳು ಲೈಸೆನ್ಸ್ ನ್ನು ಹಿಂತಿರಗಿಸುತ್ತಿಲ್ಲವೇಕೆ?

4-ಮುಕ್ತ ಮಾರುಕಟ್ಟೆ, ಮುಕ್ತ ವ್ಯವಹಾರ ಎ[...] ಹೇಳುವ ಈ ಮಂದಿ ಈಗ ಸರ[...] ಮಧ್ಯಪ್ರವೇಶಿಸಬೇಕು ಎಂದು ಏಕೆ ಪ್ರಶ್ನಿಸುತ[...]

ಇವೆಲ್ಲಾ ಸಹಜವಾದ ಪ್ರಶ್ನೆಗಳು. ವಾಜಪೇಯಿಯವರಿಗೆ ಮತ್ತು ಅವರ ನೇತೃತ್ವದ [...] ಇಂತಹ ತರ್ಕಗಳು ಬೇಕಿರಲಿಲ್ಲ. ಹಾಗೆ ಮಾ[...] ತಮ್ಮ ವಿದೇಶಿ- ಪ್ರಿಯ, ಬ.ಕ.(ಬಹುರಾ[...] ಕಂಪನಿ) ಪ್ರಿಯ ಇಮೇಜಿಗೆ ಧಕ್ಕೆ ಬರುವುದಿ[...] ಅವರು ನೀಡಬಹುದಾದ 'ಪ್ರತಿಫಲ' ಹೋಗುವುದಿಲ್ಲವೇ?

ಅಡ್ವೊಕೇಟ್ ಜನರಲ್ ಕೂಡಾ ವಿರೋಧಿಸಿದರೇಕೆ?

ಹೌದು,ವಾಜಪೇಯಿ ಸರಕಾ[...] ಎನ್.ಟಿ.ಪಿ.-99 ನ್ನು ಪ್ರಶ್ನಿಸಿದವರು [...] ಜಗಮೋಹನ್ ಮಾತ್ರವೇ ಅಲ್ಲ. ವಾಜ[...] ಸರಕಾರದ ಅಡ್ವೊಕೆಟ್ ಜನರಲ್ ಅಂದರೆ ವಕೀಲರಾಗಿರುವ ಸೋಲಿ ಸೋರಬ್‌ಜೀಯ[...] ಆರಂಭದಲ್ಲಿ ಅಂತದ್ದೇ ಅಭಿಪ್ರಾಯ ನೀಡಿದ್ದರು[...] ಲೆಕ್ಕಾಚಾರ ತಪ್ಪಾಯಿತೆಂಬ ಕಾರಣಕ್ಕೆ ತಾವ[...] ಮಾಡಿದ ಕರಾರಿನಂತೆ ನಡೆಯಲು ಸಾಧ್ಯ[...] ಎಂಬುದು ಒಪ್ಪತಕ್ಕಂತಹ ಮಾತಾಗಲಾರದು[...] ಲೈಸೆನ್ಸ್ ಶುಲ್ಕದ ಬದಲು ಆದಾಯ ಹಂಚಿಕೆ[...] ವ್ಯವಸ್ಥೆಗೆ ಬದಲಾಯಿಸಿಕೊಳ್ಳಲು ಅವಕಾಶ [...] ಲೈಸೆನ್ಸ್ ಶುಲ್ಕವನ್ನು ಈಗಾಗಲೇ ಕಾನೂನು[...]

ದೇಶಕ್ಕೆ ಐವತ್ತು ಕೋಟಿ ರೂಪಾಯಿಗಳ ವಂಚನೆ ವ[...]

ಕಳೆದ ಲೋಕಸಭಾ - ಚುನಾವಣೆಗಳ ಸ್ವಲ್ಪ ಮೊದಲು ಡಿಸೆಂಬರ್ 25, 1997 ರಂದು ಭಾರತದ ಪ್ರಮುಖ ಪತ್ರಿಕೆಗಳ ಜೊತೆಗೆ ಪ್ರಕಟವಾದ 8 ಪುಟಗಳ ಪ್ರಾಯೋಜಿತ ವರ್ಣರಂಜಿತ ಪುರವಣಿಯ ಮುಖಪುಟದಲ್ಲಿದ್ದ ದೊಡ್ಡ ಅಕ್ಷರಗಳು `The man India Awaits' ಅಂದರೆ ಭಾರತ ಕಾದಿರುವ ವ್ಯಕ್ತಿ'. ಇದು ವಾಜಪೇಯಿಯವರ ಜನ್ಮದಿನದ ಸಂದರ್ಭದಲ್ಲಿ ಬಿಜೆಪಿ ತನ್ನ ಬಂಡವಾಳಶಾಹಿ ಮಿತ್ರರ ನೆರವಿನಿಂದ ಪ್ರಾಯೋಜಿಸಿದ್ದ ಪುರವಣಿ. ಇವರ 13 ತಿಂಗಳ ಆಡಳಿತ ಈ ಪ್ರಾಯೋಜಿತ ಪ್ರಭೆಯನ್ನು ಬಹಳಷ್ಟು ಮಂಕುಗೊಳಿಸಿತ್ತು. ಹಣಕಾಸು ಮಂತ್ರಿಗಳ ಸಲಹೆಗಾರ ಆರ್.ಎಸ್.ಎಸ್.ನ ಗುರುಸ್ವಾಮಿ ರಾಜೀನಾಮೆ ನೀಡಿದಾಗ ಪ್ರಧಾನಮಂತ್ರಿ ಹಿಂದುಜಾಗಳ ವಕೀಲಿ ಮಾಡಿದರು, ಅದರ ಅಳಿಯನದ್ದೇ ದರ್ಬಾರು ಎಂದು ಹೊರಗೆಡವಿದಾಗ ಇದು ಇನ್ನಷ್ಟು ಮಂಕಾಗಿತ್ತು. ಈ ಎರಡನೇ ಟೆಲಿಕಾಂ ಹಗರಣ ಅದು ಸಂಪೂರ್ಣ ಹುಸಿ ಪ್ರಭೆ, ಕಾಂಗ್ರೆಸ್ಸಿನ ನರಸಿಂಹರಾಯರಿಗಿಂತ ಬಿಜೆಪಿಯ ವಾಜಪೇಯಿ ಏನೇನೂ ಭಿನ್ನವಲ್ಲ ಎಂದು ದೃಢಪಡಿಸಿದೆ.


ಕೃಪೆ: 'ಔಟ್‌ಲುಕ್' ಜಯಚಂದ್ರನ್

ಏಕೆಂದರೆ ಈ ಹಗರಣದಲ್ಲಿ ನೇರವಾಗಿ ಸಿಲುಕಿ ಕೊಂಡಿರುವುದು ಪ್ರಧಾನಮಂತ್ರಿಗಳ ಕಚೇರಿ, ಅದರಲ್ಲೂ ಮುಖ್ಯವಾಗಿ ಪ್ರಧಾನ ಮಂತ್ರಿಗಳ ಅಳಿಯ ರಂಜನ್ ಭಟ್ಟಾಚಾರ್ಯ ಇವರೆಲ್ಲರ ಮೂಲಕ ಜಗಮೋಹನ ರನ್ನು ಎತ್ತಂಗಡಿ ಮಾಡಿದ ಮೇಲೆ ಸ್ವತಃ ಪ್ರಧಾನ ಮಂತ್ರಿಗಳೇ ದೂರಸಂಪರ್ಕ ಖಾತೆಯನ್ನು ವಹಿಸಿ ಕೊಂಡರು ಎಂಬುದು ಇದರಲ್ಲಿನ ಒಂದು ಅಂಶ ಮಾತ್ರ.

ಜುಲೈ 6 ರಂದು ವಾಜಪೇಯಿ ಸಂಪುಟ ಟೆಲಿಕಾಂ ವಲಯವನ್ನು ಕುರಿತಂತೆ ಕೈಗೊಂಡ ನಿರ್ಣಯ ಸರಕಾರ ಹೇಳಿಕೊಳ್ಳುತ್ತಿರುವಂತೆ ಭಾರತದ ದೂರಸಂಪರ್ಕ ವಲಯವನ್ನು ಉಳಿಸಲಿಕ್ಕಂತೂ ಖಂಡಿತಾ ಅ[...] ಒಂದು ತಿಂಗಳಲ್ಲಿ ಇದು ಸ್ಪಷ್ಟವಾಗಿದೆ.

1994 ರ ನರಸಿಂಹ ರಾವ್ ಸ[...] 'ದೂರಸಂಪರ್ಕ ನೀತಿ'ಯಡಿ ಅಂಗಡಿ [...] ಕಂಪನಿಗಳಲ್ಲಿ 12 (ಇವೆಲ್ಲಾ ಮಹಾನಗರಗಳ[...] ಇತರೆಡೆ ಸೆಲ್ಯುಲರ್ ಸೇವೆ ಒದಗಿಸುತ್ತೇವೆ[...] ಲೈಸೆನ್ಸ್ ಪಡೆದ ಕಂಪನಿಗಳು) ಬಾಗಿಲು [...] ಸನ್ನಾಹದಲ್ಲಿವೆ. ಕೋಶಿಕಾ, ಜೆ.ಟಿ.ಎ[...] ಏರ್‌ಸೆಲ್ ಈ ಮೂರು ಕಂಪನಿಗಳ ಲೈ[...] ರದ್ದಾಗಿವೆ. ವಾಜಪೇಯಿಯವರ ಪ್ಯಾಕೇಜ[...] ಉಳಿಸಲಾರದು. ಅದರ ಉದ್ದೇಶವೂ ಅ[...]

ಆದರ ನಿಜವಾದ ಉದ್ದೇಶ ನಾಲ್ಕು ಮ[...] ಗಳಲ್ಲಿ ವ್ಯವಹಾರ ಕುದುರಿಸಿರುವ ದೊಡ್ಡ [...] ಗಾರರ ಗುಂಪಿನ ಎಂಟು ಕಂಪನಿಗಳಿಗೆ ಅ[...] ಒದಗಿಸುವುದಷ್ಟೇ. ಗಮನಿಸಬೇಕಾದ ಸಂಗ[...] ಈ ಕಂಪನಿಗಳಿಗೆ ಲೈಸೆನ್ಸ್ 1994 ರ ದೂ[...] ನೀತಿ ಬರುವ ಮೊದಲೇ ಬಹಳ ಕಡಿಮೆ[...] ಕೊಡಲಾಗಿತ್ತು. ಆದ್ದರಿಂದ ಪಾಪ, ಭಾ[...] ಲೈಸೆನ್ಸ್ ಫೀ ಶುಲ್ಕ ತೆತ್ತು ಕೈಸುಟ್ಟುಕೊ[...]

ಕಾರ್ಗಿಲ್ ವಿಜಯದಲ್ಲಿ ವಾಜಪೇಯಿ ಸರಕಾರದ ನಿಜವಾದ 'ಸಾಧನೆ' ಏನು ಎಂದು ಕಳೆದವಾರ ನೋಡಿದ್ದೀರಿ. ಈ ಬಾರಿ ಓದಿ-----

...ಯಿ ಸರಕಾರದ ಇನ್ನೊಂದು 'ಮಹಾಸಾಧನೆ'!

ತೆತ್ತವರಿಗೆ ಅನ್ಯಾಯ ಮಾಡಿ, ಕರಾರಿಗೆ ತಪ್ಪಿದವರಿಗೆ ಅನುಕೂಲ ಮಾಡಿಕೊಡುವ ತಪ್ಪು ಸಂಕೇತ ಕೊಟ್ಟಂತಾಗುತ್ತದೆ ಎಂದು ಸರಕಾರದ ಪರವಾಗಿ ಟೆಲಿಕಾಂ ಕುರಿತ ಗುಂಪಿನ ಅಧ್ಯಕ್ಷರಾದ ಜಸ್ವಂತಸಿಂಗ್ ಕೇಳಿದಾಗ ಸೋರಬ್‌ಜೀ ಸ್ಪಷ್ಟವಾಗಿ ಹೇಳಿದ್ದರು. ಆದರೂ ಜಗಮೋಹನ್ ತಮ್ಮ 'ಅಪರಾಧ'ಕ್ಕೆ ಶಿಕ್ಷೆ ಅನುಭವಿಸಲೇಬೇಕಾಯಿತು.'ಅತ್ಯುತ್ತಮ' ಪ್ರಧಾನಿ ನಿಜ ನುಡಿದ ತಮ್ಮ ಸಹಯೋಗಿಯನ್ನೇ ಹೊರಗಟ್ಟಿ ಸುಖರಾಂರನ್ನೂ ಮೀರಿಸಿ ಬಿಟ್ಟರು.

ಮೇಲೆ ಹೇಳಿದಂತೆ **ಜುಲೈ 6 ರಂದು ಪ್ರಕಟಿಸಿದ ವಾಜಪೇಯಿ ಸರಕಾರದ ಎನ್.ಟಿ.ಪಿ.-99 ಸೋಲಿ ಸೋರಬ್ ಜೀಯವರು ಸಂಕೇತ ನೀಡಬಾರದು ಎಂದಿದ್ದರೋ ಅದನ್ನೇ ಸಾರಿತು.ಅಂದರೆ ಕರಾರು ಮುರಿದವರಿಗೆ ಭಕ್ಷೀಸು, ಪಾಲಿಸಿದವರಿಗೆ ಅನ್ಯಾಯ!** ನಿಜ, ಸೋಲಿ ಸೋರಬ್ ಜೀಯವರಿಂದ ಹೂಂ ಎನಿಸಿಕೊಂಡ ಮೇಲೆಯೇ ಈ 'ಸಂಕೇತ' ನೀಡಲಾಯಿತು. ಮೇ ತಿಂಗಳ ಕೊನೆಯಲ್ಲಿ ಸೋರಬ್‌ಜೀಯವರು ಲಂಡನ್ ಪ್ರವಾಸದಲ್ಲಿದ್ದರು. ಅವರನ್ನು ತುರ್ತಾಗಿ ಭಾರತಕ್ಕೆ ಕರೆಸಿಕೊಳ್ಳಲಾಯಿತು. ಮೇ 27 ರಂದು ನಡೆಸಿದ ಈ ಸಭೆಯಲ್ಲಿ "ಮಹಾನ್ ಕಾನೂನು ಪಂಡಿತ" ತಮ್ಮ ತಪ್ಪು ಸಂಕೇತದ ಅಭಿಪ್ರಾಯವನ್ನು ಬದಲಿಸಿ ಎನ್.ಟಿ.ಪಿ-94 ರ ಲೈಸೆನ್ಸ್ ಪದ್ಧತಿಯನ್ನು ಹಾಗೂ ಎನ್.ಟಿ.ಪಿ-99ರ ಆದಾಯ ಹಂಚಿಕೆ ಪದ್ಧತಿಯನ್ನು ಹೋಲಿಸಲು ಸಾಧ್ಯವಿಲ್ಲ ಎಂದರು. ಅಂದರೆ ಅನ್ಯಾಯದ ಭಕ್ಷೀಸಿನ ಪ್ರಶ್ನೆಯೇ ಇಲ್ಲ ಎಂದು ವಾಜಪೇಯಿಯವರು ಅವರಿಂದ ಸರ್ಟಿಫಿಕೇಟ್ ಗಿಟ್ಟಿಸಿಕೊಂಡೇ ತಮ್ಮ ಹೊಸನೀತಿಯನ್ನು ಸಂಪುಟದ ನಿರ್ಧಾರ ಎಂದು ಪ್ರಕಟಿಸಿದರು.

ಇಷ್ಟೇ ಅಲ್ಲ, ಪ್ರಧಾನ ಮಂತ್ರಿಗಳ ಕಚೇರಿ ದೂರಸಂಪರ್ಕ ಇಲಾಖೆ ಮತ್ತು ಹಣಕಾಸು ಇಲಾಖೆಯ ಎಚ್ಚರಿಕೆಗಳನ್ನು ನಿರ್ಲಕ್ಷಿಸಿ ಈ ಕರಾರಿನಂತೆ ನಡೆದುಕೊಳ್ಳದ ಟೆಲಿಕಾಂ ಕಂಪನಿಗಳಿಗೆ ಭಕ್ಷೀಸು ನೀಡಲು ಮುಂದಾಯಿತು ಎಂದು ಈಗ ಬೆಳಕಿಗೆ ಬಂದಿದೆ. ಜಗಮೋಹನ್‌ರ ಎತ್ತಂಗಡಿಯ ಸ್ವಲ್ಪವೇ ಮೊದಲು ದೂರಸಂಪರ್ಕ ಇಲಾಖೆ ಸರಕಾರಕ್ಕೆ ಆದಾಯ ನಷ್ಟವಾಗದಂತೆ ಮಾಡಲು ಶತಪ್ರಯತ್ನ ನಡೆಸಿತಂತೆ. ಅಲ್ಲದೆ ಆದಾಯ ಹಂಚಿಕೊಳ್ಳುವ ಮಾತನಾಡುವಾಗ ಆದಾಯ ಎಂದರೆ ಏನು ಎಂದು ಸಂದೇಹಕ್ಕೆ ಎಡೆಯಿಲ್ಲದಂತೆ ಸ್ಪಷ್ಟ ಪಡಿಸಬೇಕು ಎಂದೂ ಅದು ಹೇಳಿತ್ತು.

ಹಣಕಾಸು ಇಲಾಖೆಯೂ ಈ 'ಬಚಾವ್ ಯೋಜನೆ' ಬಗ್ಗೆ ಕೆಲವು ಆಕ್ಷೇಪಗಳನ್ನೆತ್ತಿತ್ತು. ಟೆಲಿಕಾಂ ಲೈಸೆನ್ಸ್ ದಾರ ಕಂಪನಿಗಳ ಬಾಕಿಯನ್ನು ಕಂತಿನಲ್ಲಾದರು ವಸೂಲು ಮಾಡಿಕೊಳ್ಳುವುದು ಒಳ್ಳೆಯದು ಅವರಿಗೆ ಕೊಡಬೇಕೆಂದಿರುವ ವಿಸ್ತರಣೆಗೆ ಮಹಾಲೆಕ್ಕ ಪರಿಶೋಧಕರು(ಸಿ.ಎ.ಜಿ.) ಮತ್ತು ಸಾರ್ವಜನಿಕರಿಂದಲೂ ಟೀಕೆ ಬರಬಹುದು ಎಂದು ಅದು ಎಚ್ಚರಿಸಿತ್ತು. ಆದರೆ ಪ್ರಧಾನಮಂತ್ರಿಯ ಕಚೇರಿ ಇವನ್ನೆಲ್ಲಾ ಬದಿಗೊತ್ತಿತು. ಜುಲೈ 6ರಂದು ನಿರ್ಣಯವನ್ನು ಪ್ರಕಟಿಸಲಾಯಿತು.

ಪುನರುಜ್ಜೀವನ ಯೋಜನೆಯೋ ?
ಅಥವಾ ಬಚಾವ್ ತಂತ್ರವೋ?

ಖಾಸಗಿ ಟೆಲಿಕಾಂ ಕಂಪನಿಗಳನ್ನು ಬಚಾವ್ ಮಾಡುವ ಪ್ಯಾಕೇಜ್ ಎಂದೇ ಕರೆಯಲ್ಪಟ್ಟಿರುವ ಈ ಧೋರಣೆಯನ್ನು ವಾಜಪೇಯಿ ಸರಕಾರ ಹೇಗೆ ಸಮರ್ಥಿಸಿಕೊಳ್ಳುತ್ತಿದೆ?ಅವರ ಪ್ರಕಾರ ಹೀಗೆ ಮಾಡದಿದ್ದರೆ ಭಾರತದ ದೂರಸಂಪರ್ಕ ಉದ್ದಿಮೆ ಸಂಪೂರ್ಣ ಮುಳುಗಿಯೇ ಹೋಗುತ್ತದೆ. ಅದರೊಡನೆ ಅದಕ್ಕೆ ಸಾಲ ನೀಡಿದ ಹಣಕಾಸು ಸಂಸ್ಥೆಗಳಿಗೂ ದುರ್ಗತಿಯಾಗುತ್ತಿತ್ತು. ಆದ್ದರಿಂದ ಇದು ಬಚಾವ್ ಯೋಜನೆಯಲ್ಲ, ಪುನರುಜ್ಜೀವನ ಯೋಜನೆ. ಅಲ್ಲದೆ ಇದರಲ್ಲಿ ಸಿಪಿಐ(ಎಂ) ಮತ್ತಿತರರು ಹೇಳುವಂತೆ 50ಸಾವಿರ ಕೋಟಿ ರೂಪಾಯಿಗಳ ನಷ್ಟ ಆಗುವುದಿಲ್ಲ ಎಂದು ಬಿಜೆಪಿ ವಾದ. 'ಆಗಲೇ ಮಾರ್ಚ್26 ರಂದು

ಪುಟ 8 ಕ್ಕೆ

ಬಿಜೆಪಿಯ ಗೋಬೆಲ್ಸ್‌ತನವನ್ನು ಮತ್ತೆ ಬಯಲಿಗೆಳೆದ

ಸೋಮನಾಥ್ ಚಟರ್ಜಿಯವರ ಪತ್ರ



ಹಗರಣದಲ್ಲಿ ನರಸಿಂಹರಾವ್ ಸರಕಾರವನ್ನು ಪಂಡಿತ್ ಸುಖ್‌ರಾಂರನ್ನೂ ನಾಚಿಸಲು ಹೊರಟ ವಾಜಪೇಯಿ ಸರಕಾರ ತನ್ನ ಆಟ ಸಿಪಿಐ(ಎಂ)ನ ಪ್ರಯತ್ನಗಳಿಂದಾಗಿ ಬಯಲಾಗುವುದನ್ನು ಕಂಡು ಹತಾಶಗೊಂಡು ಲೋಕಸಭೆಯಲ್ಲಿ ಸಿಪಿಐ(ಎಂ) ಮುಖಂಡರಾಗಿರುವ ಸೋಮನಾಥ್ ಚಟರ್ಜಿಯವರೇ ಇಂತಹ ನೀತಿ ಪ್ರತಿಪಾದಿಸಿದ್ದರು ಎಂದು ಹೇಳುವ ಮಟ್ಟಕ್ಕೆ ಹೋಯಿತು. ಸ್ವಲ್ಪ ಸಮಯ ತೆರೆಮರೆಗೆ ತಳ್ಳಲ್ಪಟ್ಟ ಬಿಜೆಪಿಯ ವಕ್ತಾರೆ (ಈಕೆ ಹಿಂದೆ ದೂರಸಂಪರ್ಕ ಮಂತ್ರಿಯೂ ಆಗಿದ್ದರು) ಸುಷ್ಮಾ ಸ್ವರಾಜ್ ಮೇಜು ಕುಟ್ಟಿ ಹೇಳಿದ್ದರು - 'ಈ ಬಗ್ಗೆ ಚರ್ಚೆ ನಡೆಯಲಿ, ಸಿಪಿಐ(ಎಂ) ಸೋಮನಾಥ್ ಚಟರ್ಜಿಯವರನ್ನು ಕರೆತರಲಿ' ಎಂದು. ಆದರೆ ಜುಲೈ 21 ರಂದು ಸೋಮನಾಥ್ ಚಟರ್ಜಿಯವರು ರಾಷ್ಟ್ರಪತಿಗಳಿಗೆ ಬರೆದ ಪತ್ರದ ನಂತರ ಅವರ ಈ ಸವಾಲು ಠುಸ್ಸಾಯಿತು. ವಾಜಪೇಯಿ ಸರಕಾರ ನಗೆಪಾಟಲಾಯಿತಷ್ಟೇ ಅಲ್ಲ, ಅದರ ದುಷ್ಟ ಗೋಸುಂಬೆತನದ ಇನ್ನೊಂದು ಉದಾಹರಣೆಯೂ ದೇಶದ ಮುಂದೆ ಬಂತು.

12 ನೇ ಲೋಕಸಭೆಯಲ್ಲಿ ಸೋಮನಾಥ ಚಟರ್ಜಿಯವರು ದೂರಸಂರ್ಕ ಇಲಾಖೆಯ ಸ್ಥಾಯೀ ಸಮಿತಿಯ ಅಧ್ಯಕ್ಷರಾಗಿದ್ದವರು. 'ಆದ್ದರಿಂದ ಸಹಜವಾಗಿಯೇ ಈ ಉದ್ದಿಮೆಗೆ ಸಂಬಂಧಪಟ್ಟವರು ಬಂದು ತಮ್ಮ ಅಹವಾಲುಗಳನ್ನು ಹೇಳಿಕೊಳ್ಳುತ್ತಾರೆ. ಅವರನ್ನೆಲ್ಲಾ ಜನರ ಪ್ರತಿನಿಧಿಯಾಗಿ, ಸಮಿತಿಯ ಪರವಾಗಿ ಸರಕಾರದ ಗಮನಕ್ಕೆ ತರುವುದು ನಮ್ಮ ಕರ್ತವ್ಯ. ನಾನು ಮೇ 12 ರಂದು ಪ್ರಧಾನಿಗಳಿಗೆ ಪತ್ರ ಬರೆದದ್ದು ಈ ನೆಲೆಯಿಂದ. ನನ್ನ ವೈಯಕ್ತಿಕ ಅಭಿಪ್ರಾಯವನ್ನು ಅಥವಾ ಸಮಿತಿಯ ಅಭಿಪ್ರಾಯವನ್ನು ಅಲ್ಲಿ ಹೇಳಿರಲಿಲ್ಲ' ಎಂದು ಸೋಮನಾಥ ಚಟರ್ಜಿಯವರು ಈ ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.

ಭಾರತದ ಸೆಲ್ಯುಲರ್ ನಿರ್ವಾಹಕ ಸಂಘ (COAI) ದ ಪ್ರತಿನಿಧಿಗಳು ಸ್ಥಾಯೀ ಸಮಿತಿಯ ಅಧ್ಯಕ್ಷರಾದ ಸೋಮನಾಥ್ ಚಟರ್ಜಿಯವರನ್ನು ಭೇಟಿಯಾಗಿ ಒಂದು ಮನವಿಯನ್ನು ಕೊಟ್ಟರು. ಚಟರ್ಜಿಯವರು ಮಾಡಿದ್ದಿಷ್ಟೇ - ಆ ಮನವಿಯನ್ನು ಪ್ರಧಾನಮಂತ್ರಿಗಳಿಗೆ ಕಳಿಸುವಾಗ ಬರೆದ ಪತ್ರದಲ್ಲಿ ಈ ಸಂಘದವರು ವ್ಯಕ್ತಪಡಿಸಿದ ಆತಂಕವನ್ನು ಪರಿಶೀಲಿಸಿ ಎಂದು ಹೇಳಿದ್ದು.

ಅದಿರಲಿ, ಕಾರ್ಗಿಲ್ ಬಗ್ಗೆ ರಾಜ್ಯಸಭೆ ಕರೆಯಿರಿ ಎಂದು ವಿರೋಧಿ ಪಕ್ಷಗಳವರು ಪದೆ - ಪದೇ ಕೇಳಿಕೊಂಡರೂ ಕಿವಿಗೆ ಹಾಕಿಕೊಳ್ಳಲು ನಿರಾಕರಿಸಿದ ವಾಜಪೇಯಿಯವರು ಇದ್ದಕ್ಕಿದ್ದಂತೆ ವಿರೋಧ ಪಕ್ಷಗಳವರ ಮನವಿಗೆ ಕಿವಿಗೊಡಲು ನಿರ್ಧರಿಸಿದರೇಕೆ? ಅವರಿಗೆ ತಮ್ಮ ಸಹಯೋಗಿಗಳಾದ ಜಗಮೋಹನ್, ಯಶವಂತ ಸಿನ್ಹಾರಿಗಿಂತಲೂ ವಿರೋಧ ಪಕ್ಷಗಳವರ ಮಾತಿಗೆ ಹೆಚ್ಚು ಬೆಲೆ ಕೊಡಲಾರಂಭಿಸಿದ್ದಾರೆಯೇ? ತಮ್ಮ ಈ 'ಬಚಾವ್ ಪ್ಯಾಕೇಜ್'ಗೆ ವಿರೋಧ ಪಕ್ಷಗಳ ಬೆಂಬಲ ಬೇಕೆಂದಿದ್ದರೆ ಅದನ್ನು ಅಂತಿಮಗೊಳಿಸುವ ಮೊದಲು ಸರ್ವಪಕ್ಷ ಸಭೆಯನ್ನೇಕೆ ಕರೆಯಲಿಲ್ಲ?. ಇದು ಸಿಪಿಐ(ಎಂ) ಕೇಳಿರುವ ಪ್ರಶ್ನೆ. ಸರಕಾರದ ಬಳಿ ಇದಕ್ಕೆ ಉತ್ತರವಿದೆಯೇ?

ಮತ್ತೊಂದು ವಿಷಯ-ಸೋಮನಾಥ್ ಚಟರ್ಜಿಯವರ ಅಧ್ಯಕ್ಷತೆಯಲ್ಲಿದ್ದ ದೂರಸಂಪರ್ಕ ಸ್ಥಾಯಿ ಸಮಿತಿ ದೂರ ಕರೆಗಳನ್ನು ಖಾಸಗಿಯವರಿಗೆ ತೆರೆಯುವುದು, ದರಗಳ ಮರು ವಿಮರ್ಶೆ ಇತ್ಯಾದಿಗಳಿಂದ ದೂರಸಂಪರ್ಕ ಇಲಾಖೆ ಹಾಗೂ ಎಂ.ಟಿ.ಎನ್.ಎಲ್.ಗೆ ಆಗುತ್ತಿರುವ ನಷ್ಟವನ್ನು ತುಂಬಿಸಲು ಖಾಸಗಿಯವರಿಂದ ವಸೂಲು ಮಾಡುವ ಲೈಸೆನ್ಸ್ ಶುಲ್ಕದಿಂದ ಒಂದು 'ದೂರಸಂಪರ್ಕ ಅಭಿವೃದ್ಧಿ ನಿಧಿ'ಯನ್ನು ರಚಿಸಬೇಕು ಎಂದು ಸರ್ವಾನುಮತದಿಂದ ಶಿಫಾರಸು ಮಾಡಿತ್ತು. ಜುಲೈ 6 ರ ಸಂಪುಟ ಸಭೆಯ ಟಿಪ್ಪಣಿಯಲ್ಲಿ ಈ ಅಂಶವೂ ಇತ್ತು. ಆದರೆ ಎನ್.ಟಿ.ಪಿ.-99ನ್ನು ಅನುಮೋದಿಸಿದ ಸಭೆ, ಈ ಶಿಫಾರಸ್ಸನ್ನು ಕೈಬಿಟ್ಟಿತು. ಸೋಮನಾಥ ಚಟರ್ಜಿಯವರ ಅಥವಾ ಇತರ ವಿರೋಧ ಪಕ್ಷಗಳ ಮುಖಂಡರ ಮಾತಿಗೆ ಈ ಸರಕಾರ ಎಷ್ಟು ಬೆಲೆ ಕೊಡುತ್ತದೆ ಎಂಬುದು ಮಾತ್ರವಲ್ಲ, ದೂರಸಂಪರ್ಕ ವಲಯದ ಅಭಿವೃದ್ಧಿಯ ಬಗ್ಗೆ ಸರಕಾರಕ್ಕೆ ನಿಜವಾಗಿ ಇರುವ ಕಾಳಜಿಯೆಷ್ಟು ಎಂಬುದೂ ಬಯಲಿಗೆ ಬಂದಿದೆ.

ಹಗರಣವನ್ನು ಮುಚ್ಚಿಕೊಳ್ಳಲು ಗೊಬೆಲ್ಸ್‌ನ ಉತ್ತರಾಧಿಕಾರಿಗಳಾದ ಇವರು ಸುಳ್ಳನ್ನು ಸಾವಿರ ಬಾರಿ ಹೇಳಿ ಸತ್ಯವಾಗಿಸಲು ನಡೆಸಿದ ಪ್ರಯತ್ನದಲ್ಲಿ ತಮ್ಮ ನಿಜ ಸ್ವರೂಪವನ್ನು ತಾವೇ ಬಯಲು ಮಾಡಿಕೊಂಡರು.

ಗುತ್ತೇದಾರಿಗಳ ನೇರ ಏಜೆಂಟರು!

ಪ್ರಧಾನಮಂತ್ರಿಗಳ ಕಚೇರಿ ನಿರ್ಲಜ್ಜೆಯಿಂದ ಎಲ್ಲರಿಗೂ ತಿಳಿದಿರುವ ಗುತ್ತೇದಾರಿ ಬಂಡವಾಳಿಗ ಗುಂಪುಗಳ ನೇರ ಏಜೆಂಟನಾ ಕೆಲಸ ಮಾಡಿದೆ. ಸಾವಿರಾರು ಕೋಟಿ ರೂಪಾಯಿಗಳ ಸರಕಾರೀ ಆದಾಯವನ್ನು ಮನ್ನಾ ಮಾಡುವ, ಈ ಕಾನೂನುಬಾಹಿರ ಕೆಲಸವನ್ನು ಒಪ್ಪದ ಮಂತ್ರಿಯನ್ನೇ ತೆಗೆದುಹಾಕುವ ಮಟ್ಟಕ್ಕೂ ಇಳಿದಿರುವುದು ಬಿಜೆಪಿ ಸರಕಾರ ಹಾಗೂ ಪ್ರಧಾನಮಂತ್ರಿಗಳು ಎಂತಹ ಪ್ರಮಾಣದ ಭ್ರಷ್ಟಾಚಾರಗಳಲ್ಲಿ ತೊಡಗಿದ್ದಾರೆ ಎಂಬ ಗುಮಾನಿ ಮೂಡಿಸಿದೆಯೆಂದರೆ ಇದಕ್ಕೆ ಒಂದು ಉನ್ನತ ಮಟ್ಟದ ತನಿಖೆಯೇ ನಡೆಯಬೇಕಾಗಿದೆ, ತಪ್ಪಿತಸ್ಥರನ್ನು ಶಿಕ್ಷಿಸಬೇಕಾಗಿದೆ. ಈ ಟೆಲಿಕಾಂ ಹಗರಣ ದೇಶದ ಅತ್ಯಂತ ಹೀನ ಭ್ರಷ್ಟಾಚಾರದ ಹಗರಣಗಳಲ್ಲಿ ಒಂದು ಎಂದು ದಾಖಲಾಗುತ್ತದೆ.

- ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿಕೆಯಿಂದ

...ಂದು ಈ ವ್ಯಕ್ತಿಗಾಗಿ ಭಾರತ ಕಾದಿತ್ತೇ?

ಅವರಿಗೆ ಮುಲಾಮಿನ ಅವಶ್ಯಕತೆಯಿದೆಯೆಂಬ ವಾಜಪೇಯಿ ಸರಕಾರದ ತರ್ಕ ಇವರಿಗಂತೂ ಅನ್ವಯವಾಗುವುದಿಲ್ಲ. (ಅದು ಯಾರಿಗೆ ಅನ್ವಯವಾಗುತ್ತದೋ ಅವರಿಗೆ ಮೇಲೆ ಹೇಳಿರುವ ಈ ಪ್ಯಾಕೇಜ್‌ನಿಂದ ಅಷ್ಟೇನೂ ಉಪಯೋಗವಿಲ್ಲ)- ವಾಸ್ತವವಾಗಿ ಈ ಎಂಟು ಕಂಪನಿಗಳು, ನಂತರ ಸೆಲ್ಯುಲರ್ ಫೋನುಗಳಿಗೆ ಲೈಸೆನ್ಸ್ ಪಡೆದ ಇತರ ಕಂಪನಿಗಳಿಗೆ ಹೋಲಿಸಿದರೆ ಸುಮಾರು 10 ಸಾವಿರ ಕೋಟಿ ರೂ.ಗಳಷ್ಟು ಕಮ್ಮಿ ಲೈಸೆನ್ಸ್ ಶುಲ್ಕ ತೆರುವವರು. ಇವುಗಳಲ್ಲಿ ಒಂದಾದ ದಿಲ್ಲಿಯ ಭಾರತಿ ಸೆಲ್ಯುಲರ್ ಕಂಪನಿಯ ಮುಖ್ಯಸ್ಥ ಸುನಿಲ್ ಮಿತ್ತಲ್ ತಮ್ಮ ಕಂಪನಿಗೆ ಇಂತಹ ನೆರವಿನ ಅಗತ್ಯವೇನಿಲ್ಲ ಎಂದು ಹೇಳಿರುವುದಾಗಿಯೂ ವರದಿಯಾಗಿದೆ. ಆದರೆ ವಾಜಪೇಯಿಯವರು ಪ್ರತಿಫಲ ಕೊಡಲು ಹೊರಟಿರುವುದು ಇಂತಹ ಕಂಪನಿಗಳಿಗೆ ಈ ಹಗರಣದ ಮೂಲ ಇರುವುದು ಇಲ್ಲೇ.

ಈ ಕಂಪನಿಗಳು ಉತ್ತಮ ಸ್ಥಿತಿಯಲ್ಲಿದ್ದರೂ ಲೈಸೆನ್ಸ್ ಶುಲ್ಕ ನೀಡಿಲ್ಲ, ಕಳೆದೆರಡು ವರ್ಷಗಳಲ್ಲಿ ಅವು ಒಟ್ಟಾಗಿ ತೆತ್ತದ್ದು ಕೇವಲ 3.5 ಕೋಟಿ ರೂ.ಗಳು. ಈ ವರ್ಷದಿಂದ ಅವು ಪ್ರತಿ ಸೆಲ್ಯುಲರ್ ಫೋನ್ ಬಳಕೆದಾರರಿಂದ 6023 ರೂ.ಗಳ ದರದಲ್ಲಿ ಲೈಸೆನ್ಸ್ ಶುಲ್ಕ ತೆರಬೇಕಾಗಿತ್ತು. ಈರೀತಿ ಒಟ್ಟು 5 ಲಕ್ಷ ಬಳಕೆದಾರರಿಂದ ಸಂಗ್ರಹವಾಗಬೇಕಾದ ಹಣ 300 ಕೋಟಿ ರೂ. ಲೈಸೆನ್ಸ್‌ನ ಹತ್ತು ವರ್ಷಗಳ ಅವಧಿಯನ್ನು ಗಮನಿಸಿದರೆ ಇದು ಸಾವಿರಾರು ಕೋಟಿ ರೂ.ಗಳಾಗುತ್ತದೆ(ಈಗ ಲೈಸೆನ್ಸ್ ಅವಧಿಯನ್ನು 20 ವರ್ಷಕ್ಕೆ ಹೆಚ್ಚಿಸಿರುವುದರಿಂದ ಈ ಪ್ರಮಾಣ ಇನ್ನಷ್ಟು ಹೆಚ್ಚುತ್ತದೆ) ಇಷ್ಟೊಂದು ಹಣವನ್ನು ಅವರೀಗ ತೆರಬೇಕಿಲ್ಲ - ವಾಜಪೇಯಿಯವರ ಕೃಪೆಯಿಂದ.

ಯಾವುದು ಈ ಕಂಪನಿಗಳು?

ದಿಲ್ಲಿ:	ಭಾರತಿ - ಬ್ರಿಟಿಶ್ ಟೆಲಿಕಾಂ
	ಎಸ್ಸಾರ್ - ಸ್ವಿಸ್ ಕಾಂ - ಶಿವಶಂಕರನ್
ಮುಂಬೈ:	ಹಚಿನ್‌ಸನ್ - ಮ್ಯಾಕ್ಸ್
	ಬಿ.ಪಿ.ಎಲ್. - ಯು.ಎಸ್.
ಕಲ್ಕತ್ತ:	ಉಷಾ ಮಾರ್ಟಿನ್- ಟೆಲಿಕಾಂ ಮಲೇಶ್ಯಾ
ಚೆನ್ನೈ:	ಶಿವಶಂಕರನ್ - ಶ್ರೀನಿವಾಸನ್ ಸೆಲ್‌ಕಂ
	ಸ್ಕೈ ಸೆಲ್

ಈ ಕಂಪನಿಗಳಲ್ಲಿ ಪ್ರತಿಯೊಂದು ಅವುಗಳ ಹೆಸರಿನ ಜೊತೆಗಿರುವ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಕಿರಿಯ ಪಾಲುದಾರರು. ಉದಾಹರಣೆಗೆ 'ಭಾರತೀ' ಬ್ರಿಟಿಶ್ ಟೆಲಿಕಾಂಗೆ ತನ್ನ 38% ಶೇರು ಬಂಡವಾಳ ಮಾರಿ ಭಾರೀ ಹಣ ಮಾಡಿದೆ. ಎಸ್ಸಾರ್ ಸ್ವಿಸ್‌ಕಾಂ ಗೆ ತನ್ನ ಶೇರುಗಳನ್ನು ಮಾರಿ 3500 ಕೋಟಿ ರೂ.ಗಳಿಸಿದೆ. ಮುಂಬೈಯಲ್ಲಿ ಹಾಂಕಾಂಗ್‌ನ ಹಚಿನ್ಸನ್ ಕಂಪನಿ 70% ಶೇರು ಖರೀದಿಸಿದೆ - ಅಂದರೆ ವಾಜಪೇಯಿ ಸರಕಾರ ಭಾರತದ ದೂರಸಂಪರ್ಕ ಉದ್ದಿಮೆಯನ್ನು ಉಳಿಸುವ ಹೆಸರಲ್ಲಿ ವಾಸ್ತವವಾಗಿ ನಮ್ಮ ಈ ಉದ್ದಿಮೆಯನ್ನು ವಿದೇಶಿ ಕಂಪನಿಗಳ ಕೈಗೆ ಕೊಡುತ್ತಿದ್ದಾರೆ?. ಇದೇ ಈ ಹಗರಣದ ಹೂರಣ. ಇದಕ್ಕೆ ದೊರೆತಿರುವ 'ಪ್ರತಿಫಲ' ಸುಮಾರು 300 ಕೋಟಿ ರೂ ಎಂದು ಒಂದು ಪತ್ರಿಕೆ ಹೇಳಿದೆ. ಈಗ ನೀವು ಕೇಳಬಹುದು - ಇದು ನಮ್ಮ ಈ ಪ್ರಧಾನಿಯ 'ಸ್ವದೇಶಿ'ಯ ಪ್ರಜ್ಞೆಯ ಬೆಲೆಯೇನು? 13 ತಿಂಗಳ 'ಸಮರ್ಥ' ಆಡಳಿತದ ನಂತರ ವಾಜಪೇಯಿ ಸರಕಾರ ಲೋಕಸಭೆಯಲ್ಲಿ ವಿಶ್ವಾಸಮತ ಕಳಕೊಂಡಾಗ ದೇಶದ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ಒಂದಿಡೀ ಪುಟದ ಜಾಹೀರಾತು ಪ್ರಶ್ನಿಸಿತ್ತು - 'ಈ ವ್ಯಕ್ತಿ ಮಾಡಿದ ತಪ್ಪಾದರೂ ಏನು?' ಈಗ ಈ ಪ್ರಶ್ನೆಗೆ ಉತ್ತರ ಬೇಕೆ? ವಾಜಪೇಯಿಯವರು ದೇಶ ಕಂಡ ಅತ್ಯುತ್ತಮ ಪ್ರಧಾನಿ ಎಂಬ ದೊಡ್ಡ ಪತ್ರಿಕೆಗಳ, ಮಾಧ್ಯಮಗಳ ಪ್ರಚಾರಕ್ಕೆ ಏನಾದರೂ ಅರ್ಥ ಉಳಿದಿದೆಯೇ? ಇಂತಹ ಪ್ರಧಾನಿಯ ಕೈಗಳನ್ನು ಬಲಪಡಿಸಬೇಕು ಎಂಬ ಜಗಜೀ-ಫರ್ನಾಂಡೀಸ್-ಪಟೇಲ್ ತರ್ಕದಲ್ಲಿ ಏನಾದರೂ ಬಲ ಉಳಿದಿದೆಯ?

- ಕೆ.ವಿ.

ಶತಮಾನದ ಮಹಾಹಗರಣ

ಪುಟ 7 ರಿಂದ

ಸಂಸತ್ತಿನಲ್ಲಿ ಪ್ರಕಟಿಸಿದ ದೂರಸಂಪರ್ಕ ನೀತಿಯಡಿ ಈ ನಿರ್ಣಯ ಕೈಗೊಳ್ಳಲಾಗಿದೆ. ಈಗ ಅದನ್ನು ಜಾರಿ ಮಾಡಲಾಗುತ್ತಿದೆಯಷ್ಟೆ' ಎಂದೂ ಅದು ಹೇಳಿಕೊಳ್ಳುತ್ತಿದೆ.ಇಷ್ಟಕ್ಕೇ ನಿಲ್ಲದೆ ಕಾಂಗ್ರೆಸ್ (ಐ), ಸಿಪಿಐ(ಎಂ) ಮುಖಂಡರ ಬಯಕೆಯಂತೆ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ ಎಂದು ಹೇಳಿಕೊಳ್ಳುತ್ತಿದೆ.

ಆದರೆ ಸತ್ಯಾಂಶಗಳು ತದ್ವಿರುದ್ಧವಾಗಿವೆ-

- 1994ರ ಟೆಲಿಕಾಂ ನೀತಿಯನ್ನು ಸಂಸತ್ತಿನಲ್ಲಿ ಮಂಡಿಸಲಾಗಿತ್ತು. ಆದರೆ 1998 ರ ಟೆಲಿಕಾಂ ನೀತಿಯನ್ನು ಸರಕಾರ ಅಂತಿಮಗೊಳಿಸಿದ್ದರೂ ಸಂಸತ್ತಿನಲ್ಲಿ ಮಂಡಿಸಲಿಲ್ಲ. ಅಷ್ಟೇ ಅಲ್ಲ, ಅದನ್ನು ಅಂತಿಮಗೊಳಿಸಿದ ನಂತರ ಲೋಕಸಭೆಯ ವಿಸರ್ಜನೆಯ ನಡುವೆ ಸಾಕಷ್ಟು ಸಮಯಾವಕಾಶ ವಿದ್ದರೂ ಅದನ್ನು ಲೋಕಸಭೆಯಲ್ಲಿ ಮಂಡಿಸುವ ಪ್ರಯತ್ನವನ್ನೂ ಮಾಡಲಿಲ್ಲ. 1999ರ ಟೆಲಿಕಾಂ ನೀತಿಯಲ್ಲೂ ನಿಗದಿತ ಲೈಸೆನ್ಸ್ ಶುಲ್ಕದ ಬದಲು ಆದಾಯ ಹಂಚಿಕೊಳ್ಳುವ ವ್ಯವಸ್ಥೆಯ ಪ್ರಸ್ತಾಪವಿಲ್ಲ. ಅದು ಜುಲೈ 6 ಮಂತ್ರಿಮಂಡಲದ ನಿರ್ಣಯದಲ್ಲಿ ಮಾತ್ರವೇ ಇದೆ. ಇದು ಲೋಕಸಭೆಯಲ್ಲಿ ವಿಶ್ವಾಸ ಮತ ಕಳಕೊಂಡ ಮಂತ್ರಿ ಸಂಪುಟದ ನಿರ್ಣಯ, ಆದ್ದರಿಂದಈ ಹೊಸ ನಿರ್ಣಯಕ್ಕೆ ಸಾಂವಿಧಾನಿಕ ನೆಲೆಯಿಲ್ಲ.
- ಮಂತ್ರಿಮಂಡಲದ ಈ ನಿರ್ಣಯವೇ ಹೇಳಿರುವಂತೆ ದೇಶದ ಬೊಕ್ಕಸಕ್ಕೆ ಈ ವರ್ಷ 1443.58 ಕೋಟಿ ರೂ. ಲೈಸೆನ್ಸ್ ಶುಲ್ಕದ ಬಾಬ್ತಿನಲ್ಲಿ ಕಡಿತವಾಗುತ್ತದೆ. ವಾಸ್ತವವಾಗಿ ಅದು ಈ ವರ್ಷದ ಬಜೆಟ್ಟಿನಲ್ಲಿ ಈ ಬಾಬ್ತಿನಲ್ಲಿ 2800 ಕೋಟಿ ರೂ. ಆದಾಯ ಬರುತ್ತದೆ ಎಂದು ಲೆಕ್ಕಹಾಕಿತ್ತು. ಸಂಸತ್ತು ಅಂಗೀಕರಿಸಿರುವ ಈ ಬಜೆಟ್ಟನ್ನು ಸಂಸತ್ತಿನ ಅನುಮತಿಯಿಲ್ಲದೇ ಬದಲಿಸಿರುವುದು ಇನ್ನೊಂದು ಸೂಕ್ತವಲ್ಲದ ಕ್ರಮ.
- ಈ ವರ್ಷ ಆದಾಯ ಹಂಚಿಕೆ ವ್ಯವಸ್ಥೆಯಲ್ಲಿ 15% ವನ್ನು ಕೊಡಬೇಕು ಎಂದು ಮಧ್ಯಂತರ ಮಿತಿ ನಿಗದಿ ಮಾಡಲು ಮಂತ್ರಿ ಮಂಡಳಕ್ಕೆ ಹಕ್ಕಿಲ್ಲ. ಅದನ್ನು ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (TRAI) ಮಾತ್ರ ಮಾಡಲು ಸಾಧ್ಯ. ಈ ಮೂಲಕ ಸರಕಾರ ಸಂಸತ್ತು ಅಂಗೀಕರಿಸಿದ ಶಾಸನದ ಉಲ್ಲಂಘನೆ ಮಾಡಿದೆ. ಇದರ ವಿರುದ್ಧ ನ್ಯಾಯಾಲಯಕ್ಕೆ ಹೋಗುವುದಾಗಿ TRAI ಹೇಳಿದೆ.

ಇವಿಷ್ಟು ಈ ಕ್ರಮದ ಸಂವಿಧಾನ-ವಿರೋಧಿ ಸ್ವರೂಪದ ಬಗೆಗಾಯಿತು. ಇನ್ನು ಈ ನಿರ್ಣಯ ರಾಷ್ಟ್ರೀಯ ಬೊಕ್ಕಸಕ್ಕೆ ಮಾಡಿದ ಅಪಾರ ಹಾನಿಯ ಬಗ್ಗೆ ನೋಡೋಣ.

- ಮೇಲೆ ಹೇಳಿದ ಹಾಗೆ 1443.58 ಕೋಟಿ ರೂ. ತಕ್ಷಣವೇ ಸರಕಾರದ ಬೊಕ್ಕಸಕ್ಕೆ ಆಗಿರುವ ನಷ್ಟ. 1995 ರಲ್ಲಿ ಸರಕಾರದೊಡನೆ ವಿವಿಧ ಕಂಪನಿಗಳು ಮಾಡಿಕೊಂಡ ಕರಾರುಗಳ ಪ್ರಕಾರ ಲೈಸೆನ್ಸ್ ಶುಲ್ಕದ ಮೂಲಕ ಮುಂದೆ ಬರಬೇಕಾದ ಒಟ್ಟು ಹಣ ಸುಮಾರು 48,000 ಕೋಟಿ ರೂಪಾಯಿಗಳು. (ಟೆಲಿಫೋನ್ ಸೇವೆಗಳಲ್ಲಿ 25000 ಕೋಟಿ, ಮಹಾನಗರಗಳಲ್ಲಿನ ಸೆಲ್ಯುಲರ್ ವಲಯದಲ್ಲಿ 8000 ಕೋಟಿ ಹಾಗೂ ಇತರ ಸೆಲ್ಯುಲರ್ ವಲಯದಲ್ಲಿ 15000 ಕೋಟಿ ರೂಗಳು). ಈ ಪದ್ಧತಿಯನ್ನು ರದ್ದು ಮಾಡಿದ್ದರಿಂದ ಖಾಸಗಿ ಟೆಲಿಕಾಂ ಕಂಪನಿಗಳಿಂದ ಬರಬೇಕಾಗಿದ್ದ ಇಷ್ಟು ಹಣ ಇನ್ನು ಮುಂದೆ ಬರುವುದಿಲ್ಲ. ಇದನ್ನು ಸಿಂಧುಗೊಳಿಸಬೇಕಾದರೆ ಅದಕ್ಕೂ ಸಂಸತ್ತಿನ ಮಂಜೂರಾತಿ ಅಗತ್ಯ.
- ಸಂಪನ್ಮೂಲ ಹಂಚಿಕೊಳ್ಳುವ ಹೊಸ ಪ್ರಸ್ತಾಪಿತ ಪದ್ಧತಿಯಲ್ಲೂ ಸರಕಾರಕ್ಕೆ ಹಣ ಇನ್ನು ಮುಂದೆ ಬರುತ್ತದೆ, ಆದ್ದರಿಂದ ನಷ್ಟದ ಮಾತು ಸರಿಯಲ್ಲ ಎಂಬ ಸರಕಾರದ ವಾದದಲ್ಲೂ ಹುರುಳಿಲ್ಲ. ಏಕೆಂದರೆ ಅಡ್ವೋಕೇಟ್ ಜನರಲ್ ಸಲಹೆ ಮಾಡಿದರೂ 'ಆದಾಯ' ಎಂದರೆ ಏನು ಎಂದು ಸರಕಾರ ಇನ್ನೂ ನಿಗದಿ ಮಾಡಿಲ್ಲ.
- ಲೈಸೆನ್ಸ್ ಶುಲ್ಕ ಪದ್ಧತಿಯಿಂದ ಹಣಕಾಸು ಸಂಸ್ಥೆಗಳು 10,000 ಕೋಟಿ ರೂಪಾಯಿಗಳಷ್ಟು ಕಳಕೊಳ್ಳುವ ಸಂಭವವಿತ್ತು ಎಂಬುದು ನಿಜ. ಆದರೆ ಇವೆಲ್ಲಾ ವಾಣಿಜ್ಯ ಸಾಲಗಳು. ಖಂಡಿತಾ ಅವಕ್ಕೆ ಸೆಕ್ಯೂರಿಟಿಯಾಗಿ ಈ ಸಂಸ್ಥೆಗಳು, ಬ್ಯಾಂಕುಗಳು ಏನನ್ನಾದರೂ ಪಡೆದುಕೊಂಡಿರುತ್ತಾರೆ ತಾನೆ? ಹಾಗಿದ್ದರೆ ಸರಕಾರಕ್ಕೆ ಏಕೆ ಆತಂಕ? ಈ 10000 ಕೋಟಿ ರೂ. ಗಳಲ್ಲಿ ವಿದೇಶಿ ಹಣಕಾಸು ಸಂಸ್ಥೆಗಳಿಂದ ಬಂದ ಹಣ ಎಷ್ಟು ಎಂದು ಸರಕಾರ ಹೇಳಿಲ್ಲ. ಅದು ಸುಮಾರು 90% ಇರಬಹುದೆಂದು ಅಂದಾಜು. ಈ ವಿದೇಶಿ ಹೂಡಿಕೆಯೇ ಸರಕಾರದ ಆತಂಕಕ್ಕೆ ಕಾರಣವಿರಬೇಕು. ಇದೇ ಆತಂಕವನ್ನು ಈ ಸರಕಾರ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ದೊಡ್ಡ-ದೊಡ್ಡ ಕುಳಗಳು ಬಾಕಿಯಿಟ್ಟುಕೊಂಡ ಸುಮಾರು 45000 ಕೋಟಿ ರೂ.ಗಳ ಸಾಲ ವಸೂಲಿ ಬಗ್ಗೆ ಏಕೆ ತೋರಿಸುತ್ತಿಲ್ಲ? ಈ ಗೋಸುಂಬೆತನ ಏನೇ ಇರಲಿ, ಈ ಹಣ ಒಂದು ಮೂಲರಚನೆಯಲ್ಲಿ ತೊಡಗಿಸಿದ ಹಣ, ಆದ್ದರಿಂದ ಅದನ್ನು ಖಂಡಿತಾ ಹಿಂದಕ್ಕೆ ಪಡೆಯಲು ಸಾಧ್ಯ, ಅದಕ್ಕಾಗಿ ಸರಕಾರ ಸಂಸತ್ತನ್ನು ಬದಿಗೊತ್ತಿ, ತನ್ನ ಮಂತ್ರಿಗಳ, ಅಡ್ವೋಕೇಟ್ ಜನರಲ್‌ರ ಅಭಿಪ್ರಾಯಗಳನ್ನು ಬದಿಗೊತ್ತಿ ಆತುರಾತುರವಾಗಿ ಈ ನಿರ್ಣಯ ಕೈಗೊಳ್ಳುವ ಅವಶ್ಯಕತೆಯೇ ಇರಲಿಲ್ಲ.
- ಈ ಹೊಸ ಪದ್ಧತಿಯಿಂದ ಮಾತ್ರವೇ ದೂರಸಂಪರ್ಕ ಉದ್ದಿಮೆ ಬದುಕುಳಿಯಲು ಸಾಧ್ಯ ಎಂಬ ತರ್ಕವೂ ಅರ್ಥಹೀನ. ಏಕೆಂದರೆ ಈ ಪದ್ಧತಿಯಿಂದ ಮಹಾನಗರಗಳನ್ನು ಬಿಟ್ಟು ಇತರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವ ಕಂಪನಿಗಳಿಗೆ ಏನೂ ಪ್ರಯೋಜನವಿಲ್ಲ. ಪ್ರಯೋಜನವಾಗುವುದು ಮಹಾನಗರಗಳಲ್ಲಿನ ಖಾಸಗಿ ಟೆಲಿಕಾಂ ಕಂಪನಿಗಳು ಅಂದರೆ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮಾತ್ರ. (ಹಗರಣವಿರುವುದೇ ಇಲ್ಲಿ-6ನೇ ಪುಟದ ಬಾಕ್ಸ್ ನೋಡಿ)
- ಇನ್ನು ವಿರೋಧಿ ಪಕ್ಷಗಳ ಮುಖಂಡರೇ ಇಂತಹ ಒಂದು ನೀತಿಯ ಬಗ್ಗೆ ಸಲಹೆ ಮಾಡಿದ್ದರು, ಆದ್ದರಿಂದ ಈ ನಿರ್ಣಯ ಕೈಗೊಂಡಿದೆ ಎಂಬುದು ಶುದ್ಧ ಸುಳ್ಳು ಎಂಬುದನ್ನು ಸಿಪಿಐ(ಎಂ) ಮುಖಂಡ ಸೋಮನಾಥ ಚಟರ್ಜಿಯವರು ರಾಷ್ಟ್ರಪತಿಗಳಿಗೆ ಬರೆದ ಪತ್ರ ಬಯಲಿಗೆಳೆದಿದೆ. (7ನೇ ಪುಟದ ಬಾಕ್ಸ್‌ನೋಡಿ)

ಏಕೆ ಈ ಮುಚ್ಚುಮರೆ?

ಚುನಾವಣಾ ಆಯೋಗದ ಪ್ರಶ್ನೆ

ಜುಲೈ 6 ರಂದು ಕೇಂದ್ರ ಸಂಪುಟದ ನಿರ್ಣಯ ಪ್ರಕಟವಾದ ಕೂಡಲೇ ಹಲವೆಡೆಯಿಂದ ವಿರೋಧ ವ್ಯಕ್ತವಾಯಿತು. ರಾಷ್ಟ್ರಪತಿಗಳು ಈಗ ಬೇರೆ ಖಾತೆ ನಿರ್ವಹಿಸುವ ಜಗಮೋಹನರನ್ನು ಕರೆಸಿ ಸ್ಪಷ್ಟೀಕರಣ ಪಡೆದರು. ನಂತರ ಈ ಹೊಸ ದೂರಸಂಪರ್ಕ ನೀತಿ ಕುರಿತು ನಿರ್ಣಯವನ್ನು ಸದ್ಯಕ್ಕೆ ಜಾರಿಗೆ ತರಬಾರದು ಎಂದು ಸರಕಾರಕ್ಕೆ ಸಲಹೆ ಮಾಡಿರುವುದಾಗಿ ತಿಳಿದು ಬಂದಿದೆ. ಇದರಿಂದ ಕುಪಿತಗೊಂಡ ಉಸ್ತುವಾರಿ ಸರಕಾರ ಅವರ ಸಲಹೆಯನ್ನು ಲೆಕ್ಕಿಸದೆ ತನ್ನ ನಿರ್ಣಯವನ್ನು ಜಾರಿಗೆ ತಂದೇ ಬಿಡಲು ಮುಂದಾಯಿತು. ಈ ನಿರ್ಣಯಕ್ಕೆ ಬಂದ ತರ್ಕಬದ್ಧ ಆಕ್ಷೇಪಗಳಿಗೆ ಉತ್ತರ ಕೊಡಲು ಸರಕಾರ ಪಡೆದದ್ದು ಖಾಸಗಿ ಕಂಪನಿಗಳ ವಕ್ತಾರರ ನೆರವನ್ನೇ ಎಂಬುದನ್ನು ಇಲ್ಲಿ ಗಮನಿಸಬೇಕು. ಆದರೂ ಈ ನಿರ್ಣಯವನ್ನು ಹೆಚ್ಚೆಚ್ಚು ಸಮರ್ಥಿಸಿಕೊಂಡಷ್ಟು ಇದರಲ್ಲಿ ಹುದುಗಿದ್ದ ಹೆಚ್ಚೆಚ್ಚು ಹೊಲಸು ಅಂಶಗಳು ಬಯಲಿಗೆ ಬರಲಾರಂಭಿಸಿದವು.

ಜುಲೈ 27 ರಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು ಒಂದು ಪತ್ರ ಬರೆದು ಈ ಬದಲಾವಣೆಯಲ್ಲಿರುವ ಭಾರೀ ಅನಿಯಮಿತತೆಯನ್ನು ಚುನಾವಣಾ ಆಯೋಗದ ಗಮನಕ್ಕೆ ತಂದರು. ಈ ಕಾನೂನುಬಾಹಿರ, ಸಂವಿಧಾನ ಬಾಹಿರ ನಿರ್ಣಯದ ಜೊತೆಗೆ ಮುಂದಿನ ಎರಡು ವರ್ಷಗಳವರೆಗೆ ತಮ್ಮದೇ ದೂರಸಂಪರ್ಕ ಇಲಾಖೆ ಮತ್ತು ಮಹಾನಗರ ಟೆಲಿಕಾಂ ನಿಗಮ್ ಲಿಮಿಟೆಡ್(ಎಂ.ಟಿ.ಎನ್.ಎಲ್) ಗಳು ಸೆಲ್ಯುಲರ್ ಸೇವೆಗಳನ್ನು ಕೈಗೊಳ್ಳುವಂತಿಲ್ಲ ಎಂದು ಅದು ಕೈಗೊಂಡ ನಿರ್ಣಯದಿಂದಾಗಿ ಒಂದು ಆಯ್ದ ಖಾಸಗೀ ಕಂಪನಿಗಳ ಗುಂಪಿಗೆ ಭಾರೀ ಭಕ್ಷೀಸು ನೀಡಿದಂತಾಗಿದೆ, ಇದರಿಂದಾಗಿ ಆ ಕಂಪನಿಗಳು ತಮ್ಮ ಇಕ್ವಿಟಿ ಶೇರುಗಳನ್ನು ಭಾರೀ ಲಾಭ ಮಾಡಿಕೊಂಡು ಮಾರುತ್ತಿದ್ದಾರೆ. ಚುನಾವಣೆಯ ಪ್ರಕಟಣೆಯ ನಂತರ ಇಂತಹ ಚಟುವಟಿಕೆಗಳು ಚುನಾವಣೆಯ ಪ್ರಕ್ರಿಯೆಯ ಮೇಲೆ ಭ್ರಷ್ಟ ಪ್ರಭಾವ ಬೀರುತ್ತವೆ ಎಂಬ ಸಂದೇಹವನ್ನು ಅವರು ವ್ಯಕ್ತಪಡಿಸಿದರು. ಟೆಲಿಕಾಂ ಕಂಪನಿಗಳಿಗೆ ಹೊಸ ಆದಾಯ ಹಂಚಿಕೆ ಪದ್ಧತಿ ಬಗ್ಗೆ ಪತ್ರಗಳು ಜುಲೈ 22 ರಂದು, ಅಂದರೆ ಚುನಾವಣೆಯ ಪ್ರಕಟಣೆಯ ಹನ್ನೊಂದು ದಿನಗಳ ನಂತರ ಹೋಗಿವೆ ಎಂಬ ಅಂಶವನ್ನೂ ಸುರ್ಜಿತ್ ಆಯೋಗದ ಗಮನಕ್ಕೆ ತಂದರು. ಇತರ ಹಲವು ಪ್ರಮುಖ ವ್ಯಕ್ತಿಗಳೂ, ಪಕ್ಷಗಳೂ ಚುನಾವಣಾ ಆಯೋಗಕ್ಕೆ ಮನವಿ ಮಾಡಿದರು.

ಜುಲೈ 28 - ಚುನಾವಣಾ ಆಯೋಗ ಟೆಲಿಕಾಂ ಕಂಪನಿಗಳಿಗೆ ನೀಡಿದ ಈ 'ಬಚಾವ್ ಪ್ಯಾಕೇಜ್' ಬಗ್ಗೆ ಅದರ ಹಣಕಾಸು ಪರಿಣಾಮಗಳ ಬಗ್ಗೆ ವಿವರಗಳನ್ನು ನೀಡಿ ಎಂದು ಸರಕಾರವನ್ನು ಕೇಳಿತು. ದೇಶ ಚುನಾವಣಾ ಪ್ರಕ್ರಿಯೆಯಲ್ಲಿರುವಾಗ ಸರಕಾರ ಕೈಗೊಳ್ಳುವ ಯಾವುದೇ ಪ್ರಮುಖ ನಿರ್ಣಯದ ಹಣಕಾಸು ಪರಿಣಾಮಗಳನ್ನು ನಾವು ಪರಿಶೀಲಿಸದಿರಲು ಸಾಧ್ಯವಿಲ್ಲ ಎಂದು ಆಯೋಗದ ಅಧಿಕಾರಿಗಳು ಹೇಳಿದ್ದಾರೆ. ಆಯೋಗದ ಈ ಹೇಳಿಕೆ ಸರಕಾರವನ್ನು ಇನ್ನಷ್ಟು ಹತಾಶಗೊಳಿಸಿತು. ಹಿಂದೆ ದೂರಸಂಪರ್ಕ ಮಂತ್ರಿಯಾಗಿದ್ದು ಬಹಳ ಪ್ರಚಾರ ಪಡೆದ ನಂತರ ಬಿಜೆಪಿಯ ಆಂತರಿಕ ಕಿತ್ತಾಟದಿಂದಾಗಿ ಮೂಲೆಗುಂಪಾಗಿದ್ದ ಸುಷ್ಮಾ ಸ್ವರಾಜ್ ಪಕ್ಷದ ವಕ್ತಾರೆಯಾಗಿ ಮತ್ತೆ ರಂಗದ ಮೇಲೆ ಬಂದು "ಚುನಾವಣಾ ಆಯೋಗ ಟೆಲಿಕಾಂ ನಿರ್ಣಯಗಳನ್ನು ಪರಿಶೀಲಿಸುವ ಅಧಿಕಾರ ಇಲ್ಲ" ಎಂದು ಹಾರಾಡಿದರು.


ಆದರೆ ಚುನಾವಣಾ ಆಯೋಗ ಅವರ ಈ ಹಾರಾಟವನ್ನು ಲೆಕ್ಕಿಸಲಿಲ್ಲ. ಈ ನಡುವೆ ಈ ಪ್ರಶ್ನೆ ದಿಲ್ಲಿ ಹೈಕೋರ್ಟ್ ಕಟ್ಟೆ ಹತ್ತಿದ್ದರಿಂದ ಈ ಬಗ್ಗೆ ಏನೇ ನಿರ್ಣಯ ತಿಳಿಸದಿದ್ದರೂ ಅದು ಆಗಸ್ಟ್ 2 ರಂದು ನೀಡಿದ ಪತ್ರಿಕಾ ಹೇಳಿಕೆಯಿಂದ ಸರಕಾರದ ತಲೆಯ ಮೇಲೆ ಇನ್ನೊಂದು ಚಪ್ಪಡಿ ಎಳೆದಂತಾಯಿತು. ವಾಜಪೇಯಿ ಸರಕಾರ ನೀಡಿರುವ ಮಾಹಿತಿ ಅಸಮರ್ಪಕವಾಗಿದೆ, ಸರಕಾರದ ಪ್ಯಾಕೇಜ್ ಮತ್ತು ಅದರ ಹಣಕಾಸು ಪರಿಣಾಮಗಳ ಬಗ್ಗೆ ಒಂದು ಪೂರ್ಣವಾದ, ಸಮಗ್ರವಾದ ವರದಿ ಸಲ್ಲಿಸಬೇಕು ಎಂದು ಆಯೋಗ ಸರಕಾರಕ್ಕೆ ಮತ್ತೆ ನಿರ್ದೇಶನ ನೀಡಿತು. ಚುನಾವಣಾ ಆಯೋಗ ಸಂಪುಟ ಕಾರ್ಯದರ್ಶಿಯಿಂದ ವಿವರ ಕೇಳಿತ್ತು. ಆದರೆ ಉತ್ತರ ಬಂದದ್ದು ಇನ್ನೂ ಕೆಳ ಹಂತದಲ್ಲಿರುವ ದೂರಸಂಪರ್ಕ ಇಲಾಖೆಯ ಉಪ ಮಹಾನಿರ್ದೇಶಕರಿಂದ ಎಂಬ ಬಗ್ಗೆಯೂ ಚುನಾವಣಾ ಆಯೋಗಕ್ಕೆ ಅಸಮಾಧಾನವಾಗಿದೆ ಎಂದು ತಿಳಿದುಬಂದಿದೆ.

ಏಕೆ ಈ ತರಾತುರಿ? - ಹೈಕೋರ್ಟ್ ಪ್ರಶ್ನೆ

ಈ ನಡುವೆ 'ದಿಲ್ಲಿ ಸಾಯನ್ಸ್ ಫೋರಂ' ದಿಲ್ಲಿ ಹೈಕೋರ್ಟ್‌ನಲ್ಲಿ ಈ 'ಬಚಾವ್ ಪ್ಯಾಕೇಜ್' ವಿರುದ್ಧ

ಪುಟ 12 ಕ್ಕೆ

500000000000



ಬಹುಶ: ಇದರಿಂದಲೂ 50 ಸಾವಿರ ಕೋಟಿ ರೂಪಾಯಿಗಳೆಂದರೆ ಎಷ್ಟಾಗುತ್ತದೆ ಎಂದು ನೀವು ಊಹಿಸಲಾರಿರಿ. ಜುಲೈ 6 ರಂದು ವಾಜಪೇಯಿ ಸರಕಾರ ಟೆಲಿಕಾಂ ಉದ್ದಿಮೆಯನ್ನು ಬಚಾವ್ ಮಾಡಲೆಂದು ಪ್ರಕಟಿಸಿದ ನಿರ್ಣಯದಿಂದ ದೇಶದ ಬೊಕ್ಕಸಕ್ಕೆ ಆಗುವ ನಷ್ಟದ ಅಂದಾಜು ಇದು.

ಕಾರ್ಗಿಲ್ ಬೆಳವಣಿಗೆಗಳಿಂದಾಗಿ ಸರಕಾರದ ಮೇಲೆ ಬಿದ್ದ ಹೆಚ್ಚಿನ ಖರ್ಚಿನಿಂದಾಗಿ ಜನಗಳ ಮೇಲೆ ಹೆಚ್ಚಿನ ತೆರಿಗೆ ಹಾಕಬೇಕಾಗುತ್ತದೆ ಎಂದು ಹಣಕಾಸು ಮಂತ್ರಿಗಳು ಹೇಳಿದ್ದಾರೆ (ಚುನಾವಣೆಯಿಲ್ಲದಿದ್ದರೆ ಹಾಕಿಯೇ ಬಿಡುತ್ತಿದ್ದರು). ಅಲ್ಲಿ ಸರಕಾರದ ಮೇಲೆ ಬಿದ್ದ ಹೆಚ್ಚಿನ ಹೊರೆಯೆಂದರೆ 5000 ಕೋಟಿ ರೂ. ಅಂದರೆ ಈಗ ಕೇವಲ 8 ಕಂಪನಿಗಳ ಮೂಲಕ ಅವರ ವಿದೇಶಿ ಸಹಯೋಗಿಗಳ ಲಾಭಕ್ಕಾಗಿ ಅದರ ಹತ್ತು ಪಟ್ಟು ರಾಷ್ಟ್ರದ ಬೊಕ್ಕಸದಿಂದಲೇ ಲೂಟಿ ಮಾಡಲಾಗುತ್ತಿದೆ ಎಂದರೆ ಈ ವಂಚನೆಯ ಅಗಾಧತೆ ಎಷ್ಟೆಂದು ನೀವೇ ಊಹಿಸಿ.

ಈ ವರ್ಷದ ಬಜೆಟ್‌ನಲ್ಲಿ ಈ ಸರಕಾರ ಜನಗಳ ಮೇಲೆ 10 ಸಾವಿರ ಕೋಟಿ ರೂ.ಗಳ ತೆರಿಗೆ ಹಾಕಿತ್ತು. ಈಗ ಅದರ ಐದುಪಟ್ಟು ಹೊರೆಯನ್ನು ಜನಗಳ ಮೇಲೆ ಹೇರಲು ಮುಂದಾಗಿದೆ.

ನಮ್ಮ ಕೆ.ಜಿ.ಎಫ್.ನಲ್ಲಿ ಚಿನ್ನದಗಣಿಯಲ್ಲಿ ನಲ್ಲಿ ಹತ್ತು ವರ್ಷಗಳ ಹಿಂದೆ 10 ಸಾವಿರ ಕಾರ್ಮಿಕರು ದುಡಿಯುತ್ತಿದ್ದರು. ಅದೀಗ ರೋಗಗ್ರಸ್ತವಾಗಿ ಕಾರ್ಮಿಕರ ಸಂಖ್ಯೆ ನಾಲ್ಕು ಸಾವಿರಕ್ಕಿಳಿದಿದೆ. ಈ ಬಿ.ಜಿ.ಎಂ.ಎಲ್. ಕಂಪನಿಯ ಪುನರುಜ್ಜೀವನಕ್ಕೆ ಬೇಕಾಗುವ ಹಣ 200 ಕೋಟಿ ರೂ. ಅಷ್ಟು ಹಣವಿಲ್ಲ ಎಂದು ಆರು ಸಾವಿರ ಕಾರ್ಮಿಕರು ಕೆಲಸ ಕಳಕೊಳ್ಳುವಂತೆ ಮಾಡಿರುವ ಸರಕಾರ 1400 ಕೋಟಿ ರೂ.ಗಳ ಉಡುಗೊರೆಯನ್ನು ಕರಾರಿಗೆ ತಪ್ಪಿದ ಕಂಪನಿಗಳಿಗೆ ಕೊಡಲು ಮುಂದೆ ಬಂದಿದೆ. ಇದು ಯಾರ ಸರಕಾರ, ಸ್ವಾಮಿ!

ನಾಲ್ಕು ಪ್ರಶ್ನೆಗಳು

ಲೋಕಸಭೆಯ ವಿಶ್ವಾಸ ಕಳೆದುಕೊಂಡ ಉಸ್ತುವಾರಿ ವಾಜಪೇಯಿ ಸರಕಾರದ ಟೆಲಿಕಾಂ ಕೊಡುಗೆ'ಯಲ್ಲಿ ನಾಲ್ಕು ಪ್ರಶ್ನೆಗಳಿವೆ -

1. ಇದ್ದಕ್ಕಿದ್ದಂತೆ ನಡುದಾರಿಯಲ್ಲೇ ಲೈಸೆನ್ಸ್ ಶುಲ್ಕ ವ್ಯವಸ್ಥೆಯಿಂದ ಆದಾಯ ಪಾಲುದಾರಿಕೆ ವ್ಯವಸ್ಥೆಯತ್ತ ಬದಲಿಸುವುದರಲ್ಲಿ ಸಾರ್ವಜನಿಕ ಹಿತಾಸಕ್ತಿ ಇದೆಯೇ?
   ಉತ್ತರ : ಸ್ಪಷ್ಟವಾಗಿ 'ಇಲ್ಲ'
   ಏಕೆಂದರೆ ರಾಷ್ಟ್ರೀಯ ಬೊಕ್ಕಸಕ್ಕೆ ಇದು ಅಪಾರ ಹಾನಿ ತರುತ್ತದೆ
2. ಒಂದು ಉಸ್ತುವಾರಿ ಸರ್ಕಾರ ಇಂತಹ ಪ್ರಮುಖ ನಿರ್ಣಯ ಕೈಗೊಳ್ಳಬಹುದೇ?
   ಉತ್ತರ - 'ಖಂಡಿತವಾಗಿ ಇಲ್ಲ'
   ದಿಲ್ಲಿ ಹೈಕೋರ್ಟ್‌ನ ಟಿಪ್ಪಣಿ ಕೂಡಾ ಇದನ್ನು ಅನುಮೋದಿಸಿದೆ. ಇದರಿಂದಾಗುವ ಬಜೆಟ್ ಆದಾಯದಲ್ಲಿನ ರೂ. 1443.58 ಕೋಟಿ ರೂ. ಕಡಿತಕ್ಕೆ ಸಂಸತ್ತಿನ ಮಂಜೂರಾತಿ ಅಗತ್ಯ.
3. ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ಮೇಲೆ ಟೆಲಿಕಾಂ ಕಂಪನಿಗಳಿಗೆ ಅನುಜ್ಞಾ ಪತ್ರ ನೀಡುವುದು ಸಕ್ರಮವೇ?
   ಉತ್ತರ - ಸ್ಪಷ್ಟವಾಗಿ 'ಇಲ್ಲ'
   ರಾಜ್ಯಸಭಾ ಸದಸ್ಯರೂ ಕೂಡಾ ಇಂತಹ ಸಂದರ್ಭದಲ್ಲಿ ತಮ್ಮ ಅಡುಗೆ ಅನಿಲದ ಕೋಟಾಗಳನ್ನು ಹಂಚುವಂತಿಲ್ಲವೆಂದ ಮೇಲೆ ಇದಕ್ಕೆಲ್ಲಿ ಅವಕಾಶ?
4. ಈ ವ್ಯವಹಾರದಲ್ಲಿ ಬೃಹತ್ ಪ್ರಮಾಣದಲ್ಲಿ ಲಂಚದ ಪಾತ್ರವಿದೆಯೇ?
   ಉತ್ತರ - ಹೌದು
   ವಾಸ್ತವವಾಗಿ ಈ ಲಂಚದಿಂದಾಗಿಯೇ ಟೆಲಿಕಾಂ ನೀತಿಯಲ್ಲಿ ಈ ಬದಲಾವಣೆ ಮಾಡಲಾಗುತ್ತಿದೆ. ಇಲ್ಲವಾದರೆ ವಾಜಪೇಯಿ ಸರಕಾರಕ್ಕೆ ಇಷ್ಟೊಂದು ತರಾತುರಿಯೇಕೆ?

ಶ್ರೀಯುತ ವಾಜಪೇಯಿ ಮತ್ತು ಬಿಜೆಪಿಗೆ ಈ ಪ್ರಶ್ನೆಯ ಮೇಲೆ ನಿಜವಾಗಿಯೂ ರಾಷ್ಟ್ರೀಯ ಚರ್ಚೆಯಾಗಬೇಕೆಂದಿದ್ದರೆ ವಿಶೇಷ ರಾಜ್ಯಸಭಾ ಅಧಿವೇಶನ ಕರೆಯಲಿ. ಈ ಪ್ರಶ್ನೆಗಳಿಗೆ ಉತ್ತರಿಸಲಾರದ ಶ್ರೀಯುತ ವಾಜಪೇಯಿಯವರು ವಿರೋಧ ಪಕ್ಷಗಳು ಈ ಪ್ರಶ್ನೆಯನ್ನು 'ರಾಜಕೀಯಗ್ರಸ್ತ'ಗೊಳಿಸಿದ್ದಾರೆ ಎಂದು ಗೋಳಿಡುತ್ತಿದ್ದಾರೆ. ಭ್ರಷ್ಟಾಚಾರದ ವಿರುದ್ಧ ಜಾಗರೂಕತೆ ತೋರುವುದನ್ನು ಹೀಗೆನ್ನುವುದಾದರೆ ಹಾಗೆಯೇ ಆಗಲಿ ಬಿಡಿ! ನೀತಿ ಬಾಹಿರ ವ್ಯಕ್ತಿಗಳು ದೇಶವನ್ನು ಲೂಟಿ ಮಾಡಲು ಬಿಡಲಾಗದು - ಇಲ್ಲಿರುವ ರಾಜಕೀಯ ಇಷ್ಟೆ.

- ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ

ಬಾಗೇಪಲ್ಲಿಯಲ್ಲಿ ಜನಪರ ಅಭಿವೃದ್ಧಿ

ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಆರಿಸಿಬಂದ ಸಿಪಿಐ(ಎಂ) ಶಾಸಕರು ಇತರ ಶಾಸಕರಂತಲ್ಲದೆ ಶೈಕ್ಷಣಿಕವಾಗಿ ಹಿಂದುಳಿದ ಕ್ಷೇತ್ರದಲ್ಲಿ ಶಾಲಾ-ಕಾಲೇಜು ಆರಂಭಿಸಲು, ಸಂಪರ್ಕಕ್ಕಾಗಿ ರಸ್ತೆಗಳು-ಸೇತುವೆಗಳು, ಭೂಹೀನರಿಗೆ ಜಮೀನು ಒದಗಿಸಲು ಪ್ರಯತ್ನಿಸಿ ಸಫಲರಾದ ಬಗ್ಗೆ ಕಳೆದ ಎರಡು ಸಂಚಿಕೆಗಲ್ಲಿ ಓದಿರುವಿರಿ. ಬಾಗೇಪಲ್ಲಿಯಲ್ಲಿ ಜನಪರ ಅಭಿವೃದ್ಧಿಗೆ ನಡೆದ ಇತರ ಹಲವು ಪ್ರಯತ್ನಗಳ ಬಗ್ಗೆ ಆ ವರದಿಯ ಉಳಿದ ಭಾಗವನ್ನು ಇಲ್ಲಿ ಓದಿ

ಬಾಲಭವನ ನಿರ್ಮಾಣ ಮಾಡಲು ಕಂದಾಯ ಇಲಾಖೆ ಆರೂವರೆ ಎಕರೆ ಜಮೀನು ಮಂಜೂರು ಮಾಡಿದೆ. ಸುಮಾರು 10 ಲಕ್ಷ ರೂ. ಖರ್ಚು ಮಾಡಿ ಬಾಲಭವನವೊಂದನ್ನು ನಿರ್ಮಾಣ ಮಾಡಲಾಗುತ್ತಿದೆಯೆಂದು ಶಾಸಕರು ತಿಳಿಸಿದ್ದಾರೆ. ಹಳೆಯ ಶಿಲ್ಪಕಲೆಗಳ ದೇವಸ್ಥಾನಗಳನ್ನು ಉಳಿಸಲೆಂದು ಮುಜರಾಯಿ ಇಲಾಖೆಯಿಂದ 3 ಲಕ್ಷ ರೂ. ಮಂಜೂರು ಮಾಡಿಸಲಾಗಿದೆ. ಶ್ರೀರಾಮ ದೇವಸ್ಥಾನಕ್ಕೆ ಕಾಂಪೌಂಡ್ ಗೋಡೆ ನಿರ್ಮಾಣಕ್ಕಾಗಿ ಆರಾಧನೆ ಯೋಜನೆ ಯಿಂದ ಒಂದೂವರೆ ಲಕ್ಷ ರೂ. ಮಂಜೂರು ಮಾಡಿ ಕೆಲಸ ಪ್ರಗತಿಯಲ್ಲಿದೆ. ಬಹಳ ಮುಖ್ಯವಾಗಿ ಅಲ್ಲಿಗೆ ಬರುವ ಪ್ರವಾಸಿಗರಿಗೆ ಉಳಿಯಲು ಅತಿಥಿ ಗೃಹವೊಂದು ನಿರ್ಮಾಣವಾಗುತ್ತಿದೆ. 12 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಅತಿಥಿಗೃಹ ಈ ಕೇಂದ್ರದ ಆಕರ್ಷಣೆಯಾಗಿರುತ್ತದೆ. ಸಿಹಿನೀರು ಕೆರೆಯ ಸುತ್ತಲೂ ಬಿದಿರು ಗಿಡಗಳನ್ನು ಬೆಳಸಲಾಗುತ್ತಿದೆ. ಸುಂದರ ತಾಣವನ್ನಾಗಿ ನಿರ್ಮಾಣ ಮಾಡಲು ರಾಜಕೀಯ ಇಚ್ಛಾಶಕ್ತಿ ಅವಶ್ಯವಿದ್ದು ಮುಂದಿನ ದಿನಗಳಲ್ಲಿ ಬಾಗೇಪಲ್ಲಿಯ ಕ್ಷೇತ್ರದ ಜನತೆಯ ನಿರ್ಧಾರದ ಮೇಲೆ ಪಾಳ್ಯದ ಅಭಿವೃದ್ಧಿ ಅವಲಂಬಿಸಿದೆ.

ಕೇವಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡುವುದೊಂದೇ ಶಾಸಕರಾಗಿ ಮಾಡಬೇಕಾಗಿರುವುದು ಎಂದು ಯಾವತ್ತೂ ಭಾವಿಸಿಲ್ಲ. ಶಾಸಕರು ವಿವಿಧ ಇಲಾಖೆಗಳಲ್ಲಿ ಸಾಮಾನ್ಯ ಜನರ ಕೆಲಸ ಕಾರ್ಯಗಳು ನಡೆಯುತ್ತಿರುವ ಬಗ್ಗೆ ಅಧಿಕಾರಿಗಳು ಸಾಮಾನ್ಯ ಜನರ ಹತ್ತಿರ ನಡೆದುಕೊಳ್ಳುವ ರೀತಿ, ನೀತಿ ಅವರ ವರ್ತನೆ ಇವೆಲ್ಲವೂ ತುಂಬಾ ಮುಖ್ಯ ಎಂದು ಶ್ರೀರಾಮರೆಡ್ಡಿ ಭಾವಿಸಿದ್ದಾರೆ. 1994 ರ ಚುನಾವಣೆಯಲ್ಲಿ ಗೆದ್ದ ನಂತರ ವಿಜಯೋತ್ಸವದಲ್ಲಿ ದುಡಿಯುವ ಜನರನ್ನುದ್ದೇಶಿಸಿ ಮಾತನಾಡುವಾಗ ಅಧಿಕಾರಿ ವರ್ಗದವರಿಗೆ ಎಚ್ಚರಿಕೆ ನೀಡಿದ್ದರು. ರೈತರಿಗೆ ಯಾವುದೇ ರೀತಿಯಲ್ಲಿ ತೊಂದರೆ ಉಂಟಾದದ್ದು ನಮ್ಮ ಗಮನಕ್ಕೆ ಬಂದರೆ ಎಷ್ಟೇ ದೊಡ್ಡವರಾದರೂ ಸುಮ್ಮನೆ ಕೂರಲು ಸಾಧ್ಯವಿಲ್ಲ ಎಂದು ಎಚ್ಚರಿಕೆ ನೀಡಿದ್ದರು. ಒಬ್ಬ ಸಾಮಾನ್ಯ ಮನುಷ್ಯ ತಾನೇ ಸ್ವತಃ ಕಛೇರಿಗೆ ತೆರಳಿ ತನ್ನ ಸಮಸ್ಯೆಗಳನ್ನು ಹೇಳಿಕೊಂಡು ಪರಿಹರಿಸಿಕೊಳ್ಳು ತ್ತಿದ್ದದ್ದು ಸಿಪಿಐ(ಎಂ) ಶಾಸಕರು ಬಂದಂದಿನಿಂದ ಮಾತ್ರ ಎನ್ನುವುದು ಸಾರ್ವಜನಿಕರ ಅಭಿಪ್ರಾಯ.

ಕ್ಷೇತ್ರದ ರಸ್ತೆಗಳ ಅಭಿವೃದ್ಧಿ ಮತ್ತು ಡಾಂಬರೀಕರಣ

ಬಾಗೇಪಲ್ಲಿ ತಾಲ್ಲೂಕು	ಮಣ್ಣು ಮತ್ತು ಜಲ್ಲಿ ರಸ್ತೆ		ಡಾಂಬರೀಕರಣ	
	(ಲಕ್ಷ ರೂ.ಗಳಲ್ಲಿ)	(ಕಿ.ಮಿ.)	(ಲಕ್ಷ ರೂ.ಗಳಲ್ಲಿ)	(ಕಿ.ಮಿ)
1. ಜಿಲ್ಲಾ ಪಂಚಾಯತ್	27.48	26.80	41.00	24
2. ಇ.ಎ.ಎಸ್.	11.20	12.60	90.00	43
3. ಬಯಲು ಸೀಮೆ	11.00	8.40	80.00	87
4. ಬಿ.ಎ.ಡಿ.ಪಿ.	21.80	17.35	40.00	30
ಒಟ್ಟು	71.48	215	251.00	184

ನಗರಗೆರೆ ಹೋಬಳಿ ಅಭಿವೃದ್ಧಿ ಕಾರ್ಯಕ್ರಮಗಳು:-

	ಲಕ್ಷ ರೂ.	ಕಿ.ಮಿ
ರಸ್ತೆಗಳ ಅಭಿವೃದ್ಧಿ	20.00	36
ಕುಡಿಯುವ ನೀರು ಸರಬರಾಜು (29 ಹಳ್ಳಿಗಳು)	54.55	
ಕಟ್ಟಡಗಳು : 33	38.80	

ಗುಡಿಬಂಡೆ ತಾಲ್ಲೂಕು	ಮಣ್ಣು ಮತ್ತು ಜಲ್ಲಿ ರಸ್ತೆ ಲಕ್ಷ ರೂ.ಗಳಲ್ಲಿ	ಕಿ.ಮಿ	ಡಾಂಬರೀಕರಣ ಲಕ್ಷ ರೂ.ಗಳಲ್ಲಿ	ಕಿ.ಮಿ
1. ಜಿಲ್ಲಾ ಪಂಚಾಯತ್	25.50	31	6.40	4
2. ಇ.ಎ.ಎಸ್.	10.00	6	20.00	8
3. ಬಯಲು ಸೀಮೆ	05.00	4	06.50,	4.5
4. ಬಿ.ಎ.ಡಿ.ಪಿ.	12.00	8	10.00	7
ಒಟ್ಟು	52.50	49	42.90	21.5

ಕ್ಷೇತ್ರಪೂರ್ತಿ

ಒಟ್ಟು ರಸ್ತೆಗಳ	ಲಕ್ಷ ರೂ.ಗಳಲ್ಲಿ	ಕಿ.ಮಿ	ಲಕ್ಷರೂ.ಗಳಲ್ಲಿ	ಕಿ.ಮಿ
ನಿರ್ಮಾಣ ವೆಚ್ಚ	143.98	264	293.90	205

ಕುಡಿಯುವ ನೀರು, ಕಟ್ಟಡ ಮತ್ತು ಶೈಕ್ಷಣಿಕ ಸಂಸ್ಥೆಗಳ ನಿರ್ಮಾಣ

	ಬಾಗೇಪಲ್ಲಿ ಲಕ್ಷ ರೂ.	ಹಳ್ಳಿ	ಗುಡಿಬಂಡೆ ಲಕ್ಷ ರೂ.	ಹಳ್ಳಿ	ನಗರಗೆರೆ ಲಕ್ಷ ರೂ.	ಹಳ್ಳಿ	ಒಟ್ಟು ಲಕ್ಷ ರೂ.	ಹಳ್ಳಿ
ಕುಡಿಯುವ	19.09	10	67.5	52	38.55	16	173.83	145
ನೀರು	23.36	29						
	26.21	38						
ಶಾಲೆ ಮತ್ತು ಇತರೆ ಕಟ್ಟಡಗಳು	121.27	145	47	50	34.8	33	212.35	233
	10	5						

ಹೊಸ ಶಿಕ್ಷಣ ಸಂಸ್ಥೆಗಳು		ಸಂಖ್ಯೆ	ಸಂಖ್ಯೆ
	ಪ್ರಾಥಮಿಕ	42	25
	ಪ್ರೌಢ	2	1
	ಸII ಪಾಲಿಟೆಕ್ನಿಕ್	1	-
	ಐಟಿಐ	1	-
	ಪ್ರ.ದರ್ಜೆ ಕಾಲೇಜ್	-	1

ಸಣ್ಣ ನೀರಾವರಿ ಕಾಮಗಾರಿಗಳು (ಕ್ಷೇತ್ರ ಪೂರ್ತಿ)

ವಿವರ	ಸಂಖ್ಯೆ	ಮಂಜೂರಾದ ಹಣ
1. ಹೊಸ ಕೆರೆಗಳು	3	13.32 ಕೋಟಿ
2. ಕೆರೆ ಕಲ್ಯಾಣ ಕಾರ್ಯಕ್ರಮ	12	64 ಲಕ್ಷ
3. ಕೆರೆಗಳ ಹೂಳೆತ್ತುವುದು	2	15.5 ಲಕ್ಷ
4. ಕೆರೆಗಳ ಆಧುನೀಕರಣ	2	60.00 ಲಕ್ಷ.
5. ಅಣೆಕಟ್ಟು, ಸೇತುವೆ ಪಿಕಪ್ ಇತ್ಯಾದಿ	2	12.00 ಲಕ್ಷ
ಒಟ್ಟು	21	15.77 ಕೋಟಿ

ಆರೋಗ್ಯ ಕ್ಷೇತ್ರ: ಗುಡಿಬಂಡೆ, ಬಾಗೇಪಲ್ಲಿ ಪಟ್ಟಣಗಳಲ್ಲಿ ತಲಾ 2.00 ಕೋಟಿ ವೆಚ್ಚದಲ್ಲಿ ಆಸ್ಪತ್ರೆಗಳ ಆಧುನೀಕರಣ ಕೈಗೊಳ್ಳಲಾಗಿದೆ. ಗುಡಿಬಂಡೆ ಆಸ್ಪತ್ರೆ ಕಾಮಗಾರಿ ಪೂರ್ಣಗೊಂಡಿದ್ದು, ಔಷದೋಪಚಾರ ನಡೆಯುತ್ತಿದೆ. ಬಾಗೇಪಲ್ಲಿಯಲ್ಲಿ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದ್ದರೂ ಸಹ ಸಾವಿರಾರು ರೋಗಿಗಳಿಗೆ ದಿನನಿತ್ಯ ಆಧುನಿಕ ಸೌಲಭ್ಯಗಳಿಂದ ಔಷದೋಪಚಾರ ನಡೆಯುತ್ತಿರುವುದು ಶಾಸಕರ ಪರಿಶ್ರಮವೇ ಕಾರಣ.

ಬಾಗೇಪಲ್ಲಿ ಕಾಂಗ್ರೆಸ್ಸಿಗರು ಈ ಪ್ರಶ್ನೆಗಳಿಗೆ ಉತ್ತರಿಸುವರೇ ?

ಸ್ವಾತಂತ್ರ್ಯ ಬಂದಾಗಿನಿಂದ ಬಾಗೇಪಲ್ಲಿ ಕ್ಷೇತ್ರದಲ್ಲಿ ಇದುವರೆವಿಗೂ ಸಿ.ಪಿ.ಐ.(ಎಂ) ಗೆದ್ದಿರುವುದು ಎರಡುಬಾರಿ ಬಿಟ್ಟರೆ, ಉಳಿದೆಲ್ಲಾ ವಿಧಾನಸಭೆಗಳಿಗೂ ಕಾಂಗ್ರೆಸ್ ಖದೀಮರೇ ಆರಿಸಿ ಬಂದಿದ್ದಾರೆ. 1983ರಲ್ಲಿ ಕಾಂII ಎ.ವಿ. ಅಪ್ಪಸ್ವಾಮಿರೆಡ್ಡಿಯವರು ಸಿ.ಪಿ.ಐ. (ಎಂ) ಪಕ್ಷದ ಅಭ್ಯರ್ಥಿಯಾಗಿ ನಿಂತು ಗೆದ್ದು ಬಂದಿರುತ್ತಾರೆ. ಕೇವಲ ಎರಡು ವರ್ಷಗಳಿಗೆ ರಾಮಕೃಷ್ಣ ಹೆಗಡೆಯವರ ಸರ್ಕಾರ ರಾಜಿನಾಮೆ ಕೊಟ್ಟ ಪರಿಣಾಮವಾಗಿ ಅವರ ಅವಧಿ ಕೊನೆಗೊಂಡಿತು. ಆನಂತರ 1985 ಮತ್ತು 1991 ರಲ್ಲಿ ಕ್ರಮವಾಗಿ 150 ಮತ್ತು 1200 ಮತಗಳ ಅತ್ಯಲ್ಪ ಅಂತರದಲ್ಲಿ ಸಿ.ಪಿ.ಐ(ಎಂ)ನ ಅಭ್ಯರ್ಥಿ ಕಾಂII ಜಿ.ವಿ. ಶ್ರೀರಾಮರೆಡ್ಡಿ ಸೋಲನ್ನೊಪ್ಪಿದರು. 1994ರ ಡಿಸೆಂಬರ್‌ನಲ್ಲಿ ನಡೆದ ಚುನಾವಣೆ ತೀರಾ ಭಿನ್ನವಾಗಿ ಸಿ.ಪಿ.ಐ(ಎಂ)ನ ಹೋರಾಟಕ್ಕೆ ಜಯ ಸಂದಿತು. ಐದು ವರ್ಷ ಕಳೆದಿದೆ, ಕಾಂಗ್ರೆಸ್‌ನ ಭದ್ರಕೋಟೆ ಬಾಗೇಪಲ್ಲಿ ಕ್ಷೇತ್ರ ಎಂಬುದನ್ನು ಸಂಪೂರ್ಣ ಬದಲಾಯಿಸಿ ಕೊಂಡಿದೆ. ಹಣಕ್ಕಾಗಿ ಪರದಾಡುವ ಕಾಂಗ್ರೆಸ್ ಕಾರ್ಯಕರ್ತರಿಗೆ ಕ್ಷೇತ್ರದ ಬಗ್ಗೆ ಕಳಕಳಿಯಾಗಲಿ ಅಭಿವೃದ್ಧಿಯ ಕಣ್ಣೋಟವಾಗಲಿ ಇಲ್ಲ. ಈ ಕ್ಷೇತ್ರದ ಅರಿವಿಲ್ಲದವರೇ ಕಾಂಗ್ರೆಸಿನ ಅಭ್ಯರ್ಥಿಗಳಾಗಿ ಬರುತ್ತಾರೆ. ಕ್ಷೇತ್ರದ ಆಚೆ ಇರುವವರೇ ಹೆಚ್ಚಿನ ಸಲ ಅಭ್ಯರ್ಥಿಯಾಗಿ ಬಂದಿದ್ದಾರೆ. ಸ್ಥಳೀಯ ಕಾರ್ಯ ಕರ್ತರು ಒಂದೆರಡು ದಿನ ಪ್ರತಿಭಟಿಸುತ್ತಾರೆ. ಮೂರನೇ ದಿನ ದುಡ್ಡಿಗಾಗಿ ಅಭ್ಯರ್ಥಿ ಯಾರೇ ಆಗಲಿ ಆತನ ಜೊತೆ ಜೊಲ್ಲು ಸುರಿಸಿಕೊಂಡು ಭಟ್ಟಂಗಿಗಳ ಹಾಗೆ ಹಿಂದೆ ಬಿದ್ದಿರುತ್ತಾರೆ. ಎಂಬುದು ಕ್ಷೇತ್ರದ ಜನತೆಯ ಅಭಿಪ್ರಾಯವಾಗಿದೆ. ಅತ್ಯಂತ ಸಕಾರಾತ್ಮಕ ಬೆಳವಣಿಗೆಯೆಂದರೆ, ಇಂದು ನಾಯಕರ ಜೊತೆಯಲ್ಲಿ ಜನರಿಲ್ಲ, ಸ್ವತಂತ್ರವಾಗಿ ಆಲೋಚನೆ ಮಾಡುವ ಪ್ರವೃತ್ತಿಯನ್ನು ಮೈಗೂಡಿಸಿಕೊಂಡಿದ್ದಾರೆ. ಐದು ವರ್ಷದ ಅಬಿವೃದ್ಧಿಯನ್ನು 45 ವರ್ಷದ ಕಾಂಗ್ರೆಸ್‌ನ ಅಭಿವೃದ್ಧಿಯೊಂದಿಗೆ ತುಲನೆ ಮಾಡಿ ನೋಡುತ್ತಿದ್ದಾರೆ. ಕಾಂಗ್ರೆಸ್‌ನ ಅಭ್ಯರ್ಥಿಯಾಗಲು ಈ ಹಿಂದೆ ಇದ್ದಂತಹ ನೂಕು ನುಗ್ಗಲು ಬಾಗೇಪಲ್ಲಿ ಕ್ಷೇತ್ರದಲ್ಲಿ ಇಂದು ಇಲ್ಲವಾಗಿದೆ. ಕಾಂಗ್ರೆಸ್ ಅಭ್ಯರ್ಥಿಯಾಗಲು ಹಪಹಪಿಸುತ್ತಿರುವ ಪ್ರಮುಖ ಕಾಂಗ್ರೆಸ್ ನಾಯಕ ರೊಬ್ಬರು ನಮ್ಮ ಸ್ನೇಹಿತರೊಬ್ಬರ ಜೊತೆ ಮಾತನಾಡುತ್ತಾ ಟಿಕೆಟ್‌ಗಾಗಿ ಪೈಪೋಟಿ ನಡೆಯುವ ಕಾಲ ಮುಗಿದಿದೆ. ಐದು ವರ್ಷದ ಸಿ.ಪಿ.ಐ(ಎಂ) ಪಕ್ಷದ ಸಾಧನೆ ನಮ್ಮನ್ನು ಮೂಕರನ್ನಾಗಿಸಿದೆ. ಜನರ ಮುಂದೋಗಿ ಸಿ.ಪಿ.ಐ.(ಎಂ)ಗೆ ಮತ ಕೊಡಬೇಡಿ ಕಾಂಗ್ರೆಸ್‌ಗೆ ಕೊಡಿ ಎಂದು ತಿಳಿಸಬೇಕಾಗುತ್ತೆ. ಆದರೆ ಏಕೆ ಕೊಡಬಾರದು ಎಂದು ಜನ ಕೇಳಿದರೆ ನಮ್ಮಲ್ಲಿ ಉತ್ತರವಿಲ್ಲ. ಅದರಿಂದಲೇ ಟಿಕೆಟ್‌ಗಾಗಿ ಪರದಾಟ ನಿಂತು ಹೋಗಿದೆ ಎಂದು ತಿಳಿಸಿದರಂತೆ.

ಈ ಬಾರಿ ಯಾರೇ ಕಾಂಗ್ರೆಸ್ ಅಭ್ಯರ್ಥಿಯಾಗಲಿ ಅವರಿಗಾಗಿ ಹಲವು ಪ್ರಶ್ನೆಗಳು ಕಾದಿವೆ. ಅವಕ್ಕೆ ಅವರು ಉತ್ತರ ಕೊಡಬಲ್ಲರಾ?

- ಬಾಗೇಪಲ್ಲಿ ಕ್ಷೇತ್ರ ಅತ್ಯಂತ ಹಿಂದುಳಿದ ಕ್ಷೇತ್ರಗಳಲ್ಲಿ ಒಂದು. ಶಾಶ್ವತ ನೀರು ಹರಿಯುವ ನದಿ ನಾಲೆಗಳಿಲ್ಲದ ಪ್ರದೇಶ ಆದರೂ ಇರುವ ನದಿಗಳನ್ನು ಉಪಯೋಗಿಸಿಕೊಂಡು ಸಿ.ಪಿ.ಐ(ಎಂ) ಶಾಸಕರು ವಂಡಮಾನ್ ನದಿಗೆ ಮತ್ತು ಚಿತ್ರಾವತಿ ನದಿಗೆ ಅಡ್ಡಲಾಗಿ 5 ಮತ್ತು 8 ಕೋಟಿ ವೆಚ್ಚದಲ್ಲಿ ಹೊಸ ಕೆರೆಗಳನ್ನು ಮಂಜೂರು ಮಾಡಿಸಿದ್ದಾರೆ.
- ನೀವೆಂದಾದರೂ 45 ವರ್ಷಗಳ ಅವಧಿಯಲ್ಲಿ ಒಂದೇ ಒಂದು ಹೊಸ ಯೋಜನೆ ಮಂಜೂರು ಮಾಡಿಸಿದ್ದೀರಾ? ತಿಳಿಸಿ ಇಲ್ಲವಾದರೆ ಏಕೆ? ಕಾರಣ ಕೊಡಿ.
- ಪ್ರಾಕೃತಿಕ ಸಂಪತ್ತು ಇಲ್ಲದ ಕ್ಷೇತ್ರ ಇದು. ಆದ್ದರಿಂದಲೇ ಇಲ್ಲಿ ಉದ್ಯೋಗವಕಾಶ ಕೊಡುವಂತಹ ಶಿಕ್ಷಣ ಸಂಸ್ಥೆಗಳ ಸ್ಥಾಪಿಸಬೇಕೆಂಬ ಸಂಕಲ್ಪನೆಯಿಂದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಮತ್ತು ಐಟಿಐ ಕಾಲೇಜುಗಳನ್ನು ಸಿಪಿಐ(ಎಂ) ಶಾಸಕರು ಸ್ಥಾಪಿಸಿದ್ದಾರೆ. 45 ವರ್ಷಗಳ ಅವಧಿಯಲ್ಲಿ ನಿಮ್ಮದೇ ಸರ್ಕಾರಗಳಿದ್ದಾಗ್ಯೂ ನೀವ್ಯಾಕೆ ಮಾಡಲಿಲ್ಲ?
- 1991 ರ ಚುನಾವಣೆಯಲ್ಲಿ ನಿಮ್ಮ ಶಾಸಕರೇ ಗೆದ್ದು ಬಂದು 1995 ರ ಹೊತ್ತಿಗೆ ಬಗರ್ ಹುಕುಂ ಜಮೀನು ಹಂಚಿಕೆಯ 2000 ಅರ್ಜಿಗಳು ವಿಲೇವಾರಿ ಆಗದೇ ಉಳಿದಿದ್ದವು ಏಕೆ? ಉಳುವವನಿಗೆ ಭೂಮಿ ಕೊಡುವುದು ನಿಮಗಿಷ್ಟವಿಲ್ಲವೇ?
- 45 ವರ್ಷಗಳ ಕಾಂಗ್ರೆಸ್‌ನ ಶಾಸಕರೇ ಇದ್ದು ನಿಮ್ಮದೇ ಸರ್ಕಾರಗಳಿದ್ದು ಒಂದೇ ಒಂದು ಶಾಶ್ವತ ಅಭಿವೃದ್ಧಿ ಕಾರ್ಯ ಮಾಡಿರುವಿರಾ ತಿಳಿಸಿ.
- ಬಾಗೇಪಲ್ಲಿಯ [illegible] ಶಿಕ್ಷಣ [illegible] ಕೇಂದ್ರವಾದ ಗುಮ್ಮನಾಯ್ಕನ ಪಾಳ್ಯದ ಅಭಿವೃದ್ಧಿಗಾಗಿ ನಿಮ್ಮ ಕೈಯಲ್ಲೇ ಇರುವ ತಾಲ್ಲೂಕು ಪಂಚಾಯ್ತಿಯಿಂದ ನೀವೇ ಹೆಚ್ಚಾಗಿರುವ ಜಿಲ್ಲಾ ಪಂಚಾಯ್ತಿ ಸದಸ್ಯರ ಗ್ರಾಂಟಿನಿಂದ ಏನಾದರೂ ಅಭಿವೃದ್ಧಿ ಕಾರ್ಯ ಮಾಡಿರುವಿರಾ?
- ರೈತರು ಬಳಸುವ ವಿದ್ಯುತ್ ಬಗ್ಗೆ ತಮಗೇನಾದರೂ ಅರಿವಿದೆಯೇ? ಅರಿವಿದ್ದರೆ 30 ವರ್ಷಗಳ ಹಿಂದಿನ ಬೇಡಿಕೆಗೆ ಅನುಗುಣವಾಗಿದ್ದ ತಂತಿ ಮತ್ತು ಟ್ರಾನ್ಸ್‌ಫಾರಂಗಳನ್ನು ಅವಲಂಬಿಸಬೇಕಾಗಿ ಏಕೆ ಬಂತು? ಗೌರಿಬಿದನೂರಿನಿಂದ ಬರುವ ಲೈನು ಬದಲಾವಣೆ ಮಾಡಬೇಕೆನ್ನುವ ಆಲೋಚನೆ ನಿಮ್ಮ ಶಾಸಕರಿಗೆ ಬರಲಿಲ್ಲ ಏಕೆ?
- ಅಲ್ಪಸಂಖ್ಯಾತರ ಬಗ್ಗೆ ಚುನಾವಣೆಯ ಸಂದರ್ಭದಲ್ಲಿ ತುಂಬಾ ಕರುಣೆ ತೋರುವ ತಾವುಗಳು ಕೋಮುವಾದದ ವಿರುದ್ಧ ಒಂದೇ ಒಂದು ಸೆಣಸಾಟ ಮಾಡಿದ್ದೀರಾ ತಿಳಿಸಿ.
- 45 ವರ್ಷಗಳ ನಿಮ್ಮ ಶಾಸಕರುಗಳ ಸಾಧನೆಯನ್ನು ಪಟ್ಟಿ ಮಾಡಿಕೊಡುವಿರಾ?
- ಬಾಗಪಲ್ಲಿ ಕ್ಷೇತ್ರದಲ್ಲಿ ಸಿಪಿಐ(ಎಂ) ಪಕ್ಷಕ್ಕೆ ಏಕೆ ಮತ ಕೊಡಬಾರದು? ನಿಮಗೆ ಏಕೆ ಕೊಡಬೇಕು ಎಂದು ಹೇಳುವಿರಾ?
- ವಿಧಾನಸಭೆಯಲ್ಲಿ ನಿಮ್ಮ ಶಾಸಕರುಗಳು ಎಂದಾದರೊಮ್ಮೆ ಬಾಗೇಪಲ್ಲಿ ಕ್ಷೇತ್ರದ ಜನತೆಯ ಪರವಾಗಿ ಬಾಯಿ ಬಿಚ್ಚಿದ್ದೀರಾ? ಇದ್ದರೆ ಆಧಾರ ಸಹಿತ ಕೊಡುವಿರಾ?
- ಬಾಗೇಪಲ್ಲಿ ಕ್ಷೇತ್ರದಲ್ಲಿ ಸ್ಪರ್ಧಿಸುವ ನಿಮ್ಮ ಅಭ್ಯರ್ಥಿಗೆ ಕ್ಷೇತ್ರದ ಎಲ್ಲಾ ಹಳ್ಳಿಗಳ ಪರಿಚಯವಿದೆಯೇ? ಯಾವ ಹಳ್ಳಿ ಯಾವ ಗ್ರಾಮ ಪಂಚಾಯ್ತಿಗೆ ಸೇರುತ್ತೆ ಎಂಬುದೇನಾದರೂ ಗೊತ್ತಿದೆಯೇ?
- ಬಾಗೇಪಲ್ಲಿ ಪಟ್ಟಣದಲ್ಲಿ ರಸ್ತೆ ಅಗಲಗೊಳಿಸುವುದು ನಿಮಗಿಷ್ಟವಿದೆಯೇ? ಇದ್ದರೆ ಕೋರ್ಟಿನಲ್ಲಿ ಹಾಕಿರುವ ದಾವೆಗಳನ್ನು ಹಿಂದಕ್ಕೆ ಪಡೆಯುವಿರಾ?

ಇನ್ನೂ ಹಲವಾರು ಪ್ರಶ್ನೆಗಳನ್ನು ಬಾಗೇಪಲ್ಲಿ ಕ್ಷೇತ್ರದ ಮತದಾರರು ಕಾಂಗ್ರೆಸ್ ನಾಯಕರ ಮುಂದಿಡುವ ಕಾತರದಲ್ಲಿದ್ದಾರೆ. ಇನ್ನೂ ಹಲವಾರು ಪ್ರಶ್ನೆಗಳಿಗೆ ಕಾಂಗ್ರೆಸ್ ನಾಯಕರು ಪ್ರಾಮಾಣಿಕವಾಗಿ ಉತ್ತರಿಸಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ಸಿಪಿಐ(ಎಂ) ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿಯವರು ಕಲ್ಪಿಸಿದ್ದಾರೆ.

ಭಾಸ್ಕರ ರೆಡ್ಡಿ

ಕರ್ನಾಟಕದ ಎಂ.ಪಿ.ಗಳು

ಈ ಅಂಕಣದಲ್ಲಿ ಧಾರವಾಡ ಉತ್ತರ ಕ್ಷೇತ್ರದ ಕೋಟ್ಯಾಧಿಶ ಎಂ.ಪಿ. ಹಾಗೂ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಆರಿಸಿ ಹೋದ ಎಂ.ಪಿ.ಯ ಒಂದು "ಸಾಧನೆ"ಯ ಬಗ್ಗೆ ಓದಿರುವಿರಿ. ಈ ವಾರ ಓದಿ - ರಾಯಚೂರು ಎಂ.ಪಿ.ಯ ಬಗ್ಗೆ

ಮೂರನೇ ಬಾರಿಗೆ ಸ್ಪರ್ಧೆ

ರಾಯಚೂರಿನ ಸಂಸದ ಶ್ರೀ ವೆಂಕಟೇಶ ನಾಯಕರು ದೇವದುರ್ಗ ತಾಲೂಕಾದ ಅರಕೇರಾ ಗ್ರಾಮದವರು, ನಾಯಕ ಜನಾಂಗಕ್ಕೆ ಸೇರಿದ ಸಂಸದರು ಸೌಮ್ಯ ಸ್ವಭಾವದವರು, ಅಪ್ಪಟ ಪಾಳೇಗಾರಿ, ಪ್ರಗತಿ ವಿರೋಧಿ ಮನೋಭಾವನೆಯಿಂದ ಕೂಡಿದ್ದಾರೆ. ಇದಕ್ಕೆ ಜೀವಂತ ಸಾಕ್ಷಿಯೆಂದರೆ ಮೊದಲಬಾರಿಗೆ ಲೋಕಸಭೆಗೆ ಆಯ್ಕೆಯಾದಾಗ, ದೇವದುರ್ಗ, ಲಿಂಗಸೂಗೂರ, ರಾಯಚೂರ ತಾಲೂಕಿಗೆ ಶಾಶ್ವತ ಬರಗಾಲ ಪರಿಹಾರ ಯೊಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆ ನಾರಾಯಣಪುರ ಬಲದಂಡೆಗಾಗಿ ನಡೆದ ಹೋರಾಟವನ್ನು ವಿರೋಧಿಸಿದರು. ಜೊತೆಗೆ ಹೋರಾಟದಿಂದ ಜನರ ಗಮನವನ್ನು ತಿರುಚಲು ಬಲದಂಡೆ ನಾಲೆಯ ಬದಲು ಬೇಬಿ ಕಾಲುವೆಯನ್ನು ಉದ್ಘಾಟಿಸಿ ಜನರಿಗೆ ಅದೇ ಬಲದಂಡೆಯೆಂದು ತಪ್ಪು ದಾರಿಗೆಳೆಯಲು ಪ್ರಯತ್ನಿಸಿದವರು.

ರಾಯಚೂರು ಲೋಕಸಭಾ ಕ್ಷೇತ್ರದಲ್ಲಿ ತುಂಗಭದ್ರಾ ಎಡದಂಡೆ ಕಾಲುವೆಯೇ ಇಲ್ಲಿಯವರೆಗೆ ಜಿಲ್ಲೆಯ ಆರ್ಥಿಕ ಜೀವಾಳವಾಗಿದೆಯಾದರೂ ಕಾಲುವೆ ನೂರಾರು ಅನಾಹುತಗಳನ್ನು ಕಂಡು ಬೆಳೆಬರುವವರೆಗೆ ನೀರು ಕಾಲುವೆಯಲ್ಲಿ ಹರಿಯುತ್ತಾ ಇಲ್ಲವೋ ಎಂಬ ಅತಂತ್ರ ಸ್ಥಿತಿ ಬಂದು ಕಾಲುವೆ ಮೇಲಿಂದ ಮೇಲೆ ಒಡೆದು ನೂರಾರು ಕೋಟಿ ರೂಪಾಯಿ ಬೆಳೆ ನಾಶವಾಗಿ ಅದರ ಪರಿಣಾಮ ವ್ಯಾಪಾರ ಹಾಗೂ ಕಾರ್ಖಾನೆಗಳ ಮೇಲೆ ಕೂಡ ಬಿದ್ದಿದೆ. ಇಷ್ಟೆಲ್ಲಾ ಆದರೂ ಸಂಸದರು ತುಂಗಭದ್ರಾ ಎಡದಂಡೆ ಕಾಲುವೆಯ ಸಮಸ್ಯೆಗಳು ಅವರಿಗೆ ಸಂಬಂಧಿಸಿಲ್ಲವೆಂಬಂತೆ ಇದ್ದಾರೆ.

ಕೃಷ್ಣಾ ಮೇಲ್ದಂಡೆ ಯೋಜನೆ ಎಡದಂಡೆ ಕಾಲುವೆಯಿಂದ ಶೋರಾಪುರ, ಶಹಾಪುರ ಭಾಗಕ್ಕೆ ನೀರೊದಗಿಸಲಾಗಿದ್ದು, ಗುತ್ತೇದಾರರು ಒಂದಕ್ಕೆ ನಾಲ್ಕರ ದರದಲ್ಲಿ ಲೂಟಿ ಮಾಡಿದ್ದು, ಕೊನೆಗೆ ಇಷ್ಟೆಲ್ಲಾ ಅನಾಹುತದ ನಂತರ ರೈತರ ಭೂಮಿಗೆ ನೀರೊದಗಿಸಲು ತೊಂದರೆಯಾಗಿದ್ದು ಮಾತ್ರವಲ್ಲ ಮುಖ್ಯ ಕಾಲುವೆ ಕೂಡ ಬ್ರೀಚ್ ಆಗುವ ಪರಿಸ್ಥಿತಿಗೆ ಬಂದು ಎರಡು ಸಲ ಬ್ರೀಚ್ ಆಗಿದೆ, ಹಾಗೆಯೇ ಡ್ಯಾಮಿನ ಸ್ಪಟರ್‌ಗಳು ಕೂಡ ಮುರಿದು ಹೋಗಿದ್ದರು ಸಂಸದರು ಆ ಪ್ರದೇಶಕ್ಕೆ ಭೇಟಿ ನೀಡುವಂತೆ ಕೂಡ ಪ್ರಯತ್ನ ಮಾಡಿಲ್ಲವೆಂದರೆ ಆಶ್ಚರ್ಯ ಪಡಬೇಕಾಗಿದೆ.

ಹೈದ್ರಾಬಾದ ಕರ್ನಾಟಕದ ಅಭಿವೃದ್ಧಿ ಮಂಡಳಿಯಿಂದ ಇಲ್ಲಿಯವರೆಗೆ ಹತ್ತಾರು ಕೋಟಿ ಬಂದಿದೆಯಾದರೂ ಅದು ಎಲ್ಲಿ ಬಳಕೆಯಾಗಿದೆಯೆಂದು ಹುಡುಕಿದರೂ ಸಿಗಲಿಕ್ಕಿಲ್ಲ. ಇದಕ್ಕೆ ಅಪ್ಪಟ ಉದಾಹರಣೆಯೆಂದರೆ ದೇವದುರ್ಗದ ಸಿರವಾರ ಕ್ರಾಸ್ ನಿಂದ ಸಿರವಾರದವರೆಗೆ ಸಂಸದರ ಆಪ್ತರೇ ರಸ್ತೆ ಮಾಡಿದ್ದು, ಇಂದು ಅದು ರಸ್ತೆಯಾಗಿ ಉಳಿದಿಲ್ಲವಾಗಿದೆ. ಇಡೀ ಲೋಕಸಭಾ ಕ್ಷೇತ್ರ ಗುತ್ತೆದಾರರು ಹಾಗೂ ಇಂಜಿನಿಯರ್‌ಗಳ ಕೈವಶವಾಗಿದೆ. ಚುನಾಯಿತ ಪ್ರತಿನಿಧಿಗಳ ಅಭಿವೃದ್ಧಿ, ಗುತ್ತೇದಾರ, ಇಂಜನಿಯರ್‌ಗಳ ಅಭಿವೃದ್ಧಿ ಮಾತ್ರ ಕಾಣಬಹುದು, ವೆಂಕಟೇಶ ನಾಯಕರ ಮಗ ಸೇರಿದಂತೆ ಚುನಾಯಿತ ಪ್ರತಿನಿಧಿಗಳ ಕುಟುಂಬದ ಸದಸ್ಯರಲ್ಲಿ ಒಬ್ಬರಾದರೂ ಗುತ್ತೇದಾರರಾಗಿದ್ದು, ಸರಕಾರದ ಹಣದಿಂದಲೇ ರಾಜಕೀಯ ಮಾಡುವುದೇ ಒಂದು ಸಂಸತಿಯಾಗಿ ಬೆಳೆದು ನಿಂತಿದೆ.

ಸಂಸದರ ಸ್ವಂತ ತಾಲೂಕಾ ದೇವದುರ್ಗ ಒಂದು ಕೊಳಚಿ ನಗರವಾಗಿದೆ, ಮನುಷ್ಯರು ವಾಸಿಸಲು ಯೋಗ್ಯವಲ್ಲದ ಹಂದಿಗಳ ರಾಜ್ಯವಾಗಿದೆ, ನಗರದಲ್ಲಿ ಇಂದಿಗೂ ಒಂದು ಕೈಗಾರಿಕೆಯಿಲ್ಲ. ಶಿಕ್ಷಣ ಸಂಸ್ಥೆಗಳು ಹೆಸರಿಗೆ ಒಂದೆರಡಿದ್ದರೂ ಅಗತ್ಯ ಶಿಕ್ಷಕರು ಕೂಡ ಇಲ್ಲವಾಗಿದೆ.

ಸಂಸದರ ನಿಧಿಯನ್ನು ಕೂಡ ಪೂರ್ಣವಾಗಿ ಬಳಕೆ ಮಾಡಿ ಕೊಂಡಿಲ್ಲವಾಗಿದೆಯೆಂಬುದನ್ನು ನೋಡುವಾಗ ತಮ್ಮ ರಾಜಕೀಯ ಹಿಡಿತ ಜನರಲ್ಲಿ ಉಳಿಸಿ ಕೊಳ್ಳಬೇಕಾದರೆ ಜನರಿಗೆ ಹೆಚ್ಚಿನ ನಾಗರೀಕ ಸೌಲಭ್ಯಗಳನ್ನು ಕೊಡಬಾರದೆಂಬ ಮನೋಭಾವನೆ ಮೇಲು ನೋಟಕ್ಕೆ ಕಾಣುತ್ತದೆ.

ದುರಂತವೆಂದರೆ ಲೋಕಸಭೆಯಲ್ಲಿ ತಮ್ಮ ಕ್ಷೇತ್ರ ಸಮಸ್ಯೆಗಳ ಬಗ್ಗೆ ಪ್ರಶ್ನೆಯನ್ನು ಹಾಕಲಾಗದಂತಹ ವೆಂಕಟೇಶ್ ನಾಯಕರು ಈಗ ಮೂರನೇ ಬಾರಿಗೆ ಲೋಕಸಭೆ ಪ್ರವೇಶಿಸಿ ಸ್ಪರ್ಧೆಗಿಳಿದಿದ್ದಾರೆ, ಪರ್ಯಾಯ ಪ್ರಗತಿಪರ ಶಕ್ತಿಗಳು ಜನರ ಒಲವನ್ನು ಪಡೆಯುವಷ್ಟು ಬೆಳೆಯದ ಕಾರಣ ಹಿಂದುಳಿದ ಜಾತಿಗಳ ಮತ ಮತ್ತೊಮ್ಮೆ ಪಡೆದು ಚುನಾಯಿತರಾಗುವ ಪ್ರಯತ್ನ ನಡೆಸಿರುವುದನ್ನು ಕಾಣಬಹುದು

ಬಿಜೆಪಿ ಕಳೆದ ಮೂರು ಚುನಾವಣೆಗಳಲ್ಲಿ ಸ್ಪರ್ಧೆ ಮಾಡುತ್ತಿದ್ದು, ಜನರ ವಿಶ್ವಾಸವನ್ನು ಪಡೆಯದೆ ತಿರಸ್ಕರಿಸಲ್ಪಟ್ಟಿದೆ. ಈ ಬಾರಿ ಲೋಕಶಕ್ತಿ, ಪಟೇಲ ಜನತಾದಳ ದೊಂದಿಗೆ ಹೊಂದಾಣಿಕೆ ಮಾಡಿಕೊಂಡು ಪ್ರತಿಗಾಮಿ ಪ್ರಭಾವಿ ರಾಜಕಾರಣೀ ಎಮ್. ಎಸ್. ಪಾಟಿಲರನ್ನು ಸ್ಪರ್ಧೆಗಿಳಿಸಲು ಚರ್ಚಿಸುತ್ತಿದೆ. ದೇವೇಗೌಡ ಜನತಾದಳ ಇತರ ಅಭ್ಯರ್ಥಿಗಳನ್ನು ನೋಡಿ ತನ್ನ ಅಭ್ಯರ್ಥಿಯನ್ನು ಘೋಷಿಸಲು ವಿಚಾರಿಸುತ್ತಿದೆ

ರಾಯಚೂರ ಲೋಕಸಭಾ ಕ್ಷೇತ್ರದ ಹಿನ್ನೆಲೆ

ರಾಯಚೂರ ಲೋಕಸಭಾ ಕ್ಷೇತ್ರ ಗುಲ್ಬರ್ಗಾ ಹಾಗೂ ರಾಯಚೂರ ಜಿಲ್ಲೆಯ ಏಳು ತಾಲೂಕುಗಳನ್ನೊಳಗೊಂಡಿದೆ. ಗುಲ್ಬರ್ಗಾ ಜಿಲ್ಲೆಯ ಸೋರಾಪುರ, ಶಹಾಪುರ, ಹಾಗೂ ಯೂತಗೀರ ಜಿಲ್ಲೆಯ ದೇವದುರ್ಗ, ರಾಯಚೂರ ಮಾನ್ವಿ, ಲಿಂಗಸುಗೂರ ತಾಲೂಕಾಗಳಾಗಿವೆ.

ಹೈದ್ರಾಬಾದ ನಿಜಾಮ ಶಾಹಿಯಲ್ಲಿದ್ದ ಈ ಪ್ರದೇಶ ಸ್ವಾತಂತ್ರ ಚಳುವಳಿಯನ್ನು ಕಂಡಿಲ್ಲ. ಸ್ವಾತಂತ್ರ್ಯ ನಂತರ ನಿಜಾಮ ವಿರೋಧಿ ಕೆಲವು ಪ್ರತಿಭಟನೆಗಳು ಮಾತ್ರ ನಡೆದಿವೆ. ನಿಜಾಮಶಾಹಿ ಪಾಳೇಗಾರಿ ಪದ್ಧತಿ ಹೋಗಿ ಸ್ವತಂತ್ರ ಭಾರತದ ಅಧಿಕಾರದಲ್ಲಿಯೂ ಪಾಳೇಗಾರಿ ಪದ್ಧತಿ ಲಂಗುಲಗಾಮಿಲ್ಲದೆ ಮುಂದುವರಿಯಿತು. ಸ್ವತಂತ್ರ ಭಾರತದಲ್ಲಿ ಹತ್ತಿಪತ್ತು ಹಳ್ಳಿಗಳಿಂದ ಹಿಡಿದುಕೊಂಡು ಬಂದಿದ್ದರು. ದೇವರಾಜ ಅರಸರ ಕಾಲದಲ್ಲಿ ಹಿಂದುಳಿದ ಜನಾಂಗಕ್ಕೆ ಸೇರಿದ ಭೂಮಾಲೀಕರು ರಾಜಕೀಯದಲ್ಲಿ ತಲೆ ಎತ್ತಿ ಮತಗಳನ್ನು ಕ್ರೋಢೀಕರಿಸಲು ಸಹಕಾರಿಯಾಯಿತು. ಅಂದಿನಿಂದ ಕಾಂಗ್ರೆಸ್ಸಿನ ರಾಯಚೂರು ಲೋಕಸಭೆ ಕಾಂಗ್ರೆಸ್ಸಿನ ಹಿಡಿತದಲ್ಲಿಯೇ ಇದೆ. ಲಿಂಗಾಯಿತ, ನಾಯಕ, ಕುರುಬ, ಹರಿಜನರು, ಮುಸ್ಲಿಮರು ಬಹುಸಂಖ್ಯಾತರಾದ ಈ ಕ್ಷೇತ್ರದಲ್ಲಿ, ಲಿಂಗಾಯಿತ ವಿಭಾಗ ಹೊರತು ಪಡಿಸಿ ಉಳಿದವರ ಬೆಂಬಲ ಕಾಂಗ್ರೆಸ್ ಪಡೆಯುತ್ತಾ ಬಂದಿದೆ. ಜನತಾ ಪಕ್ಷ, ಜನತಾದಳದ ಅಲೆ ಬಂದಾಗಲೂ ಲೋಕಸಭಾ ಕೇತ್ರದಲ್ಲಿ ಕಾಂಗ್ರೆಸ್ ಹಿಡಿತ ಸಡಿಲಗೊಂಡಿಲ್ಲವಾಗಿದೆ

> ದುರಂತವೆಂದರೆ ಲೋಕಸಭೆಯಲ್ಲಿ ತಮ್ಮ ಕ್ಷೇತ್ರ ಸಮಸ್ಯೆಗಳ ಬಗ್ಗೆ ಪ್ರಶ್ನೆಯನ್ನು ಹಾಕಲಾಗದಂತಹ ವೆಂಕಟೇಶ್ ನಾಯಕರು ಈಗ ಮೂರನೇ ಬಾರಿಗೆ ಲೋಕಸಭೆ ಪ್ರವೇಶಿಸಿ ಸ್ಪರ್ಧೆಗಿಳಿದಿದ್ದಾರೆ, ಪರ್ಯಾಯ ಪ್ರಗತಿಪರ ಶಕ್ತಿಗಳು ಜನರ ಒಲವನ್ನು ಪಡೆಯುವಷ್ಟು ಬೆಳೆಯದ ಕಾರಣ ಹಿಂದುಳಿದ ಜಾತಿಗಳ ಮತ ಮತ್ತೊಮ್ಮೆ ಪಡೆದು ಚುನಾಯಿತರಾಗುವ ಪ್ರಯತ್ನ ನಡೆಸಿರುವುದನ್ನು ಕಾಣಬಹುದು

ಚಂದ್ರಶೇಖರ ಬಾಳೆ

ನೂರಾರು ಹಳ್ಳಿ ಜಾಗೀರ್‌ದಾರರಾದ ಒಕ್ಕಲಿಗ, ಲಿಂಗಾಯತರು, ನಾಯಕರು, (ಬೇಡ ಜನಾಂಗ) ಕೆಲವಡೆ ದೇಸಾಯಿಗಳು ತಮ್ಮ ಅಧಿಕಾರ ಪಾರಂಪರ್ಯವಾಗಿ ಪಾಳೇಗಾರಿ ಅಸ್ತಿತ್ವವನ್ನು ಒಪ್ಪಿಕೊಂಡು ಅದಕ್ಕೆ ತಲೆಬಾಗಿ ಬಂದಿದ್ದಾರೆ, ಸ್ವಾತಂತ್ರ್ಯ ಪೂರ್ವದಲ್ಲಿಯಾಗಲಿ, ಸ್ವಾತಂತ್ರ್ಯ ನಂತರದಲ್ಲಾಗಲ್ಲಿ ಪಾಳೇಗಾರಿ ಪ್ರಜಾಪ್ರಭುತ್ವ ಚಳುವಳಿಯನ್ನು ಈ ಪ್ರದೇಶ ಕಾಣಲೇ ಇಲ್ಲವಾಗಿದೆ.

ರಾಷ್ಟ್ರವ್ಯಾಪಿ ಎಡಪಂಥೀಯ ಚಳುವಳಿಯಿಂದಾಗಿ ಭೂಸುದಾರಣೆ ಅನಿವಾರ್ಯವಾದಾಗ ಕೆಲವು ಸುಧಾರಣೆಗಳನ್ನು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಕಾಂಗ್ರೇಸ್ಸೇ ತರಲು ಮುಂದಾದಾಗ, ಕರ್ನಾಟಕದಲ್ಲಿ ದೇವರಾಜು ಅರಸು ತಂದ ಭೂಸುಧಾರಣೆಗಳಿಂದ, ಭೂಸಂಬಂಧಗಳಲ್ಲಿ ಕೆಲವು ಬದಲಾವಣೆಗಳು ಬಂದವೇ ಹೊರತು, ಉಳುವವರಿಗೆ ಭೂಮಿ ಸಿಗಲಿಲ್ಲ. ಆದರೆ ಹಿಂದುಳಿದ ಜನ ವಿಭಾಗದಲ್ಲಿ ಎಚ್ಚರಿಕೆಯನ್ನು ಮೂಡಿಸುವಲ್ಲಿ ಇದು ಸಹಕಾರಿಯಾಗಿ, ಸ್ವಾತಂತ್ರ್ಯ ನಂತರದಲ್ಲಿ ಈ ಭಾಗದ ಲಿಂಗಾಯಿತ ಭೂಮಾಲೀಕರು ಕಾಂಗ್ರೆಸ್ಸಿಗರಾಗಿ ಒಂದು ಸ್ವತಂತ್ರ ಪಕ್ಷವಾಗಿಯೇ ಅಧಿಕಾರವನ್ನು ಪ್ರಜಾಪ್ರಭುತ್ವ ಚಳುವಳಿಯ ಕೊರತೆಯಿಂದಾಗಿ ದುಡಿಯುವ ಜನತೆ ಪಾಳೇಗಾರಿಕೆಯ ಪ್ರತೀಕವಾಗಿ ಕೈಬೆರಳಲ್ಲಿ ಎಣಿಸುವ ಭೂಮಾಲಿಕರ ರಾಜಕೀಯಕ್ಕೆ ಬೆಂಬಲಿಸುತ್ತಾ ಬಂದಿದ್ದಾರೆ.

1978 ರಿಂದ ವಿದ್ಯಾರ್ಥಿ ಚಳುವಳಿಯಿಂದ ಹಿಡಿದು ಕಾರ್ಮಿಕ, ರೈತರ ಚಳುವಳಿಗೆ ಸಿಪಿಐ(ಎಂ) ನಿರಂತರ ಪ್ರಯತ್ನ ಮಾಡುವಾಗಲೇ ಹಲವಾರು ಬದಲಾವಣೆ ಗಳು ಕಂಡು ಬಂದಿವೆ. ಅದರಲ್ಲೂ ವಿಶೇಷವಾಗಿ ತುಂಗಭದ್ರ ಎಡದಂಡೆಕಾಲುವೆಯ ನೀರಾವರಿ ಯಿಂದಾಗಿ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆ ನಾರಾಯಣಪರ ಬಲದಂಡೆ ಕಾಲುವೆಯ ಬೃಹತ್ ಹೋರಾಟದಿದಾಗಿ ಜೊತೆಗೆ ಬರಗಾಲದಿಂದಾಗಿ ದುಡಿಯುವ ಜನತೆ ನಗರ ಪ್ರದೇಶಗಳಲ್ಲಿ ವಲಸೆ ಹೋಗುವ ಮುಖಾಂತರ ತಮ್ಮ ಶ್ರಮದ ಬೆಲೆಯ ಬಗ್ಗ ಅರಿಯುವಾಗಲೇ ರಾಜಕೀಯ ಅರಿವನ್ನು ಪಡೆಯುತ್ತಿದ್ದಾರೆ. ಈ ಚಳುವಳಿಯ ಬೆಳವಣಿಗೆ ಮಾತ್ರ ಪಾಳೇಗಾರಿ ಜನವಿರೋಧಿ ರಾಜಕೀಯಕ್ಕೆ ಪರ್ಯಾಯವಾಗಿ ಬೆಳೆಯಬಲ್ಲದಾಗಿದೆ.

○

ಮಾಲೀಕರ ಮುಷ್ಕರದಿಂದ ಕಾರ್ಮಿಕರಿಗೆ ವಿಜಯ

ಕುರುಗೋಡು ಕಲ್ಲು ಗುಡ್ಡಗಳಿಂದ ಸುತ್ತುವರೆದ ಹೋಬಳಿ. ಆಗಾಗ ಗ್ರಾಮ ವಿಸ್ತಾರವಾಗಲು ಒದ್ದಾಡುತ್ತದೆ. ಆದರೆ ಗುಡ್ಡಗಳು ಅಡ್ಡವಾಗುತ್ತವೆ. ಇಲ್ಲಿನ ದುಡಿಯುವ ಜನ ದೂರ ನೋಡಲು ಬಯಸುತ್ತಾರೆ. ಎಷ್ಟೇ ಕಣ್ಣಗಲಿಸಿದರೂ ಈ ಗುಡ್ಡಗಳು ಅವರ ನೋಟವನ್ನು ತಡೆಯುತ್ತವೆ. ಈ ಭಾಗದ ಪಾಳೇಗಾರ ದೊರೆಗಳಂತೆ ಅವುಗಳಿಗೂ ಸಿಟ್ಟು. ಏಕೆಂದರೆ, 14 ಲಾರಿಗಳು, 150 ಕಲ್ಲು ಕುಟಕಿಗಳು, 400 ಹಮಾಲರು,ಕೃಷಿ ಕೂಲಿಕಾರರು ಸಣ್ಣಗೆ ಈ ಗುಡ್ಡವನ್ನು ಸವೆಸುತ್ತಿದ್ದಾರೆ. ಹೀಗೆ ಈ ಗುಡ್ಡಗಳು ಸಣ್ಣಗೆ ಶರಣಾಗುತ್ತಾ- ಕುರುಗೋಡು, ಆಸುಪಾಸಿನ ಹಳ್ಳಿಗಳಲ್ಲಿ, ಸಿರುಗುಪ್ಪಾ ಹೊಸಪೇಟೆ ತಾಲ್ಲೂಕಿನ ಗ್ರಾಮಗಳ ಮನೆಗಳಾಗಿ ರೂಪಾಂತರ ಗೊಳ್ಳುತ್ತವೆ.

ಕುರುಗೋಡು ಕಲ್ಲು ಗುಡ್ಡ ಗಳಲ್ಲಿ ಸಿಗುವ ಕಲ್ಲುಗಳಿಗೆ ಈ ಪ್ರದೇಶದಲ್ಲಿ ಭಾರೀ ಬೇಡಿಕೆ. ಮನೆ, ಸರಕಾರಿ ಕಟ್ಟಡಗಳಿಗೆ ಇಲ್ಲಿಂದಲೇ ಕಲ್ಲುಗಳು ರವಾನೆಯಾಗುತ್ತವೆ. 400 ಜನ ಹಮಾಲರು citu ನೇತೃತ್ವದ ಹಮಾಲಿ ಸಂಘದಡಿಯಲ್ಲಿ ಸಂಘಟಿತರಾಗಿದ್ದಾರೆ. ಜುಲೈ 26 ರಂದು ಮಾಲಕರ ದೌರ್ಜನ್ಯಕ್ಕೆ ಕೆಂಬಾವುಟ ಹಿಡಿದು ಉತ್ತರವನ್ನು ಕೊಟ್ಟರು. ಕಾರ್ಮಿಕರ ವಿರುದ್ಧ ಅದು ಬೆಲೆ ಏರಿಕೆಯ ಬಿಸಿ ವಾತಾವರಣದಲ್ಲಿ ಅವರ ಸಂಬಳದ ವಿರುದ್ಧ

> ಕುರುಗೋಡಿನ ಮಾಲಕರು ಹಮಾಲರ ರೇಟು ಇಳಿಸಲು ಮಾರಮ್ಮನನ್ನು ಮುಂದೆ ಮಾಡಿ 'ಲಾಕೌಟ್' ಮಾಡಿದರು. ಆದರೆ ಕೊನೆಗೆ ಹಾಲಿ ರೇಟಿಗಿಂತ ೫೦ ರೂ. ಹೆಚ್ಚಳ ಕೊಡಬೇಕಾಯಿತು. ಬೀದಿಯಲ್ಲಿ ಹೋಗುತ್ತಿದ್ದ ಮಾರಮ್ಮನನ್ನು ಮನೆಗೆ ಕರೆದಂತಾಯಿತು ಎಂದು ಮಾಲಕರು ಒದ್ದಾಡುತ್ತಿದ್ದಾರೆ.

ವಿ. ಆರ್. ವೆಂಕಟೇಶ್

ಮಾಲಕರೇ ಮುಷ್ಕರ ಮಾಡುವುದುಂಟೆ? ಇದನ್ನು ಯಾರಾದರೂ ಮೆಚ್ಚುವರುಂಟೆ? ಎರಡು ವರ್ಷಗಳ ಹಿಂದೆ ಹಮಾಲಿಗಳು ಸಂಘಟಿತರಾಗಿ ಹೋರಾಡಿ ಹೆಚ್ಚಿಸಿಕೊಂಡ ರೇಟುಗಳನ್ನು 2 ವರ್ಷದ ತನಕ ಮಾಲಕರು ಹೆಚ್ಚಿಸಿದ ರೇಟುಗಳನ್ನೇ ಕೊಟ್ಟು ಈಗ ಇದ್ದಕ್ಕಿದ್ದಂತೇ ಹಮಾಲರ ರೇಟು ಹೆಚ್ಚಾಗಿದೆ ಎಂದು ಮಾಲಕರೆಲ್ಲರೂ ಗುಟ್ಟಾಗಿ ಒಟ್ಟಾಗಿ ಕೆಲಸ ನಿರಾಕರಿಸಿದ್ದರ ತಂತ್ರ ಏನಿರಬಹುದು?

ಮಾಲಕರು ಹಮಾಲರಿಗೆ ಹೇಳಿದ್ದು ಇಷ್ಟೆ "ನೋಡಿ ಮಾರೆಮ್ಮ ಊರಿಗೆ ಬಂದಿದ್ದಾಳೆ. ನೀವೆಲ್ಲರೂ ಮಾರೆಮ್ಮನ್ನು ಕಳಿಸಲು ಹೋಗಿರಿ" ಎಂದು ಕೆಲಸ ನಿರತ ಹಮಾಲರನ್ನು ಲಾರಿಯಿಂದ ಕೆಳಗಿಳಿಸಿ ಕಳಿಸಿದ ನಂತರ ಮುಷ್ಕರ ಹೂಡಿದರು. ಕೂಲಿಕಾರರಿಗೆ ಕೆಲಸ ನಿರಾಕರಿಸಲು ಮಾರೆಮ್ಮನನ್ನು ಬಳಸಿಕೊಂಡರು, ಇದು ದುಡಿಯುವ ಜನತೆಗೆ ತಿಳಿಯದ ರಾಜಕೀಯವೇನಲ್ಲ. ರಾಮನನ್ನು ಬಳಸಿ ದಿಲ್ಲಿ ಗದ್ದುಗೆ ಏರಿದ ಜನ ಮಾಡಿದ ಮೋಸಗಳು ಒಂದೇ ಎರಡೇ. ಅದರ ಪ್ರತಿರೂಪವೇ ಇದು. ಮಾರಮ್ಮನನ್ನು ಮುಂದಿಟ್ಟು ಮುಷ್ಕರ ನಡೆಸುವ ಮಂದಿ ಮುಂದೇನು ಮಾಡುವರು ಎಂಬುದನ್ನು ತಿಳಿಯಲಾರದಷ್ಟು ದಡ್ಡರಲ್ಲ ಹಮಾಲಿಗಳು.

ಮಾಲಕರಿಂದ ಕೆಲಸ ನಿರಾಕರಣೆ (ಲಾಕೌಟ್) 3 ದಿನ ನಡೆಯಿತು. ಲಾರಿಗಳ ಸಂಚಾರ ಸ್ಥಗಿತಗೊಂಡಿತ್ತು. ಮುಷ್ಕರ ನಡೆಸುವ ಮೊದಲು ಕಾರ್ಮಿಕರ ಸಂಘಕ್ಕೆ ನೋಟೀಸನ್ನು ಕೊಡುವ ಸೌಜನ್ಯವನ್ನು ತೋರಲಿಲ್ಲ. ಈ ಮುಷ್ಕರದ ಉದ್ದೇಶವಾದರೂ ಏನು? ಎಂಬುದನ್ನು ಯಾರಿಗೂ ತಿಳಿಸಲಿಲ್ಲ. ಕಾರ್ಮಿಕ ಅಧಿಕಾರಿಗಳ ಹತ್ತಿರ ಮಾಲಕರ ದೂರು "ಹಮಾಲರ ರೇಟನ್ನು ಕಡಿಮೆ ಮಾಡಿರಿ" ಎಂಬುದು. "ಅಧಿಕಾರಿಗಳೇ, ಮೊನ್ನೆ ತಾನೇ ನೀವೂ ಚಳುವಳಿ ಮಾಡಿದಿರಿ ಐದನೇ ವೇತನ ಆಯೋಗ ಜಾರಿ ಮಾಡಿ ಎಂದು ಏಕೆ? ಸಂಬಳ ನಿಮಗೆ ಸಾಲದೆ, ಅಕ್ಕಿ, ಬೇಳೆ, ಎಣ್ಣೆ, ಎಲ್ಲಾ ವಸ್ತುಗಳ ರೇಟು ಗಗನಕ್ಕೇರಿದ್ದಕ್ಕೆ ಅಲ್ಲವೆ?" ಎಂಬುದ ಹಮಾಲರ ಸವಾಲು. ಅಧಿಕಾರಿಗಳು ಕುರುಗೋಡಿಗೆ ಹಾಯಲೇ ಇಲ್ಲ.

ಕುರುಗೋಡು ಮುಖ್ಯ ರಸ್ತೆಯಲ್ಲಿರುವ ಸಣ್ಣ-ಪುಟ್ಟ ಕೆಲವು ದೊಡ್ಡ ಹೊಟೇಲ್ ಗಳಿಗೂ ತಲೆನೋವು ಪ್ರಾರಂಭ. ಲಾರಿ ಸಂಚಾರವಿದ್ದರೆ ಬಿಡುವಿಲ್ಲದ ಗಿರಾಕಿಗಳು, ಈಗ ಈ ಮಾಲಕರ ಮುಷ್ಕರದಿಂದ ಬಿಕೋ ಎನ್ನುವ ಸ್ಥಿತಿ. ಒಳಗೊಳಗೇ ಕುದಿತ. ಆದರೆ ಯಾರಿಗೂ ಹೇಳುವ ಧೈರ್ಯ ವಿಲ್ಲ. ಮೂರನೆಯ ದಿನವೂ ಮೌನವಾಗಿ ದುಡಿಯುವ ಜನತೆಯ ಬದುಕನ್ನು ಅಣಕಿಸುತ್ತಿದ್ದ

ಪುಟ 11 ಕ್ಕೆ

ಪುಟ 10 ರಿಂದ

ಮಾಲಕರ ಮೌನವನ್ನು ಹಮಾಲರ ಸಂಘವೇ ಮುರಿಯಲು ಪ್ರಯತ್ನಿಸಿತು. ಸಂಘದ ಕಛೇರಿಯಲ್ಲಿ ಸಭೆ ಸೇರಿತ್ತು.

"ಮಾಲಕರ ಕೆಲಸದ ನಿರಾಕರಣೆ ಯಾತಕ್ಕೆ, ನೀವು ಲಾಕೌಟ್ ನಿಲ್ಲಿಸಿ ನಮ್ಮ ಸಂಘದ ಮುಖಂಡರ ಜೊತೆಗೆ ಮಾತುಕತೆ ನಡೆಸಿರಿ" ಎಂಬ ಸೂಚನೆಯನ್ನು ಹೊತ್ತ ನೋಟೀಸನ್ನು ಸಂಘದವತಿಯಿಂದ ಎಲ್ಲಾ ಲಾರಿಗಳ ಮಾಲಿಕರಿಗೂ ಕೊಡಲು ತಿರ್ಮಾನಿಸಲಾಯ್ತು. ಇದನ್ನು ಒಪ್ಪದೇ ಹೋದಲ್ಲಿ ಅನಿರ್ದಿಷ್ಠಗಳ ಕಾಲ ಲಾರಿ ಸಂಚಾರ ಸ್ಥಗಿತಗೊಳಿಸಲು ಸಂಘವು ತೀರ್ಮಾನಿಸಿತು.

ಕೆಲವು ಲಾರಿ ಮಾಲಕರು ಈ ಹಮಾಲರು ಬರದಿದ್ದಲ್ಲಿ ಕೃಷಿ ಕೂಲಿಕಾರರನ್ನು ಪರ್ಯಾಯವಾಗಿ ಲಾರಿಯಲ್ಲಿ ತುಂಬಿಕೊಂಡು ತಮ್ಮ ವ್ಯವಹಾರ ನಡೆಸಲು ತೀರ್ಮಾನಿಸಿ ಪ್ರಯತ್ನ ನಡೆಸಿದ್ದರು. ಪ್ರಾಂತ ಕೃಷಿ ಕೂಲಿಕಾರರ ಸಂಘ ಸಭೆಗಳನ್ನು ನಡೆಸಿ ಯಾರೂ ಹಮಾಲಿ ಕೆಲಸಕ್ಕೆ ಹೋಗಬಾರದೆಂಬ ತೀರ್ಮಾನವನ್ನು ತೆಗೆದು ಕೊಳ್ಳಲಾಯಿತು. ಹೀಗಾಗಿ ಮಾಲಕರ ಪ್ರಯತ್ನಗಳೆಲ್ಲ ವಿಫಲಗೊಂಡವು. ಅವರಿಗೆ ಬಂದ ಸಿಟ್ಟು ಕೆಂಡಮಂಡಲವಾಗಿತ್ತು. ಕೊನೆಗೆ ಅಲ್ಲಿಯಪಾಳೆಗಾರಿಕೆ ಧಣಿ ರಾಜಶೇಖರಗೌಡರ ಪುತ್ರ ರವಿಗೌಡ ಎಂಬುವವರು (ಎರಡು ಲಾರಿಗಳ ಮಾಲಿಕರು) ಹಮಾಲರ ಸಂಘದ ಅಧ್ಯಕ್ಷರಾದ ಕಾಂ. ಹನುಮಂತಪ್ಪನನ್ನು ಕರೆದು"ನನಗೆ ನೋಟಿಸ್ ಕೊಡ್ತಿಯೇನೋ ಸೂಳೆ ಮಗನೇ" ಎಂದು ರಪ್ಪನೆ ಕೆನ್ನೆಗೆ ಬಾರಿಸಿ ಕತ್ತು ಹಿಡಿದು ನೂಕಿದರು. ಈ ಸುದ್ದಿ ಮಿಂಚಿನಂತೆ ಎಲ್ಲಾ ಹಮಾಲರಿಗೂ ಹರಡಿತು. ಇನ್ನುಳಿದ ಮುಖಂಡರನ್ನು ಕೈಕಾಲು ಮುರಿಯುವುದಾಗಿ ಬೆದರಿಸಿದ ಸುದ್ದಿಯೂ ತಿಳಿಯಿತು. ಎಲ್ಲರೂ ಸೇರಿ ರವಿಗೌಡನ ಹತ್ತಿರವೇ ಹೋದರು. ಜನತೆ ಉದ್ರಿಕ್ತಗೊಂಡಿತ್ತು. ಎಲ್ಲಿಯವರೆಗೂ ಈ ದೌರ್ಜನ್ಯ! ಎಂಬುದೇ ಎಲ್ಲರ ಮಾತಾಗಿತ್ತು. ಅಷ್ಟರಲ್ಲಿ ಜಯಣ್ಣಗೌಡರು ಬಂದು ಸೌಜನ್ಯದಿಂದ ಮಾತನಾಡಿ 'ಆತನಿಗೆ ನಾವು ಹೇಳುತ್ತೇನೆ ತಪ್ಪು ಮಾಡಿದ್ದಾನೆ ತಾವೆಲ್ಲರೂ ಸುಧಾರಿಸಿಕೊಳ್ಳಿ' ಎಂದು ನಾಗರೀಕತೆಯಿಂದ ನಡೆದು ಕೊಂಡು ಜನರನ್ನು ಸಮಾಧಾನಗೊಳಿಸಿದರು.

ಜುಲೈ 26 ರಂದು 300 ಜನ ಹಮಾಲರು ಕೆಂಬಾವುಟಗಳನ್ನು ಹಿಡಿದು ಮಾಲಕರ ದೌರ್ಜನ್ಯಕ್ಕೆ ಧಿಕ್ಕಾರ ಎಂಬ ಘೋಷಣೆಗಳೊಂದಿಗೆ ಕುರುಗೋಡಿನ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಮುಖ್ಯರಸ್ತೆಯಲ್ಲಿ ಕೂತರು. ನಂತರ ಸಭೆಯನ್ನು ನಡೆಸಲಾಯಿತು. ಸಭೆಯನ್ನು ಉದ್ದೇಶಿಸಿ ಕಾಂ. ಎ.ಎಸ್. ಶಿವಶಂಕರ್, ಕಾಂ.ಪಿ.ಆರ್. ವೆಂಕಟೇಶ್, ಕಾಂ.ಕೆ.ಗಾದಿಲಿಂಗಪ್ಪ ಮಾತಾಡಿದರು. dyfi ನ ಕಾಂ. ಮಹಮದ್ ಹಮಾಲರ ಹೋರಾಟಕ್ಕೆ dyfi ಬೆಂಬಲ ವ್ಯಕ್ತಪಡಿಸಿದರು, ಕಾಂ. ಹೆಚ್.ಎಂ. ವಿಶ್ವನಾಥ ಸ್ವಾಮಿ ಕೃಷಿಕೂಲಿಕಾರರ ಸಂಘದ ಬೆಂಬಲ ವ್ಯಕ್ತಪಡಿಸಿದರೆ, ಕಾಂ. ಎನ್.ಟಿ. ರಾಮಣ್ಣ ಪ್ರಾಂತರೈತ ಸಂಘದ ಬೆಂಬಲ ವ್ಯಕ್ತಪಡಿಸಿದರು. ಹೋರಾಟ ಮುಂದುವರೆಯುತ್ತಿದ್ದಂತೆ ಲಾರಿಗಳ ಮಾಲಕರು ಸೌಹಾರ್ದ ಚರ್ಚೆಗೆ ಆಹ್ವಾನಿಸಿದರು. ಈ ಚರ್ಚೆಯಲ್ಲಿ ಹಮಾಲರ ಸಂಘದ ಮುಖಂಡರುಗಳಾದ ಕಾಂ. ಹನುಮಂತಪ್ಪ, ಕಾಂ.ಸೋಮಪ್ಪ, ಕಾಂ. ತಾಯಪ್ಪ, ಕಾಂ. ಪರಶುರಾಮ, ಕಾಂ. ನಂದೇಶ್ ರವರು ಭಾಗವಹಿಸಿದರು. ಲಾರಿಗಳ ಮಾಲಕರು ಹಮಾಲಿಗಳು ನಡೆಸುವ ಸಣ್ಣ ಪುಟ್ಟ ತಪ್ಪುಗಳನ್ನು ಎತ್ತಿತೋರಿಸಲು ಪ್ರಾರಂಭಿಸಿದರು. ಹಮಾಲರ ಸಂಘದವರು ತಮ್ಮ ಮುಷ್ಕರದ ಉದ್ದೇಶದ ಬಗ್ಗೆ ಗಮನ ಹರಿಸುವಂತೇ ಚರ್ಚಿಸಿದರು. ಚರ್ಚೆಯಲ್ಲಿ ಕೊನೆಗೆ ಹಮಾಲರಿಗೆ ಜಯಸಿಕ್ಕು ಹಾಲಿರೇಟ್ ಗಿಂತ 50 ರೂ ಹೆಚ್ಚಳ ದೊರಕಿತು.

ಬೀದಿಯಲ್ಲಿ ಹೋಗುತ್ತಿದ್ದ ಮಾರಮ್ಮನನ್ನು ಮನೆಗೆ ಕರೆದಂತಾಯಿತು. ಎಂದು ಮಾಲಕರು ಒದ್ದಾಡುತ್ತಿದ್ದಾರೆ. ○

ಬೀಡಿಕಾರ್ಮಿಕ ಮಹಿಳೆಯರ ಮೇಲೆ ಹಲ್ಲೆ

ಕಂಟ್ರಾಕ್ಟರ್ ಗೂಂಡಾಗಿರಿಯ ವಿರುದ್ಧ ವಿಜಯ

ಕಾರ್ಮಿಕರ ಸಂಘಟಿತ ಹೋರಾಟದ ಮುಂದೆ ಮಾಲೀಕರ ಗೂಂಡಾಶಕ್ತಿ ಏನೂ ಮಾಡಲಾರದು ಎಂಬುದನ್ನು ಬೆಳ್ತಂಗಡಿ ತಾಲೂಕಿನ ಕೊಕ್ಕಡದ ಬೀಡಿ ಕಾರ್ಮಿಕರ ಸಂಘಟನೆ ತೋರಿಸಿಕೊಟ್ಟಿದೆ. ತಮ್ಮ ಮೇಲೆ ಮಾಲೀಕರ ಗೂಂಡಾಗಳು ಅಮಾನುಷವಾಗಿ ಹಲ್ಲೆ ಮಾಡಿದರೂ ಕೊನೆಗೆ ಕಾರ್ಮಿಕರ ಸಂಘಟಿತ ಶಕ್ತಿಗೆ ಗೆಲುವು ಎಂಬುದಕ್ಕೆ ಕೊಕ್ಕಡ ಘಟನೆ ಉದಾಹರಣೆ

ಪಿ.ಆರ್.ವೆಂಕಟೇಶ್

ಬೆಳ್ತಂಗಡಿ ತಾಲೂಕು ಈಗ ಚಳುವಳಿಯಲ್ಲಿ ಬೆಳವಣಿಗೆಗೊಂಡು ಸಿಪಿಐ(ಎಂ) ಪಕ್ಷ ತನ್ನ ರಾಜಕೀಯ ಅಸ್ತಿತ್ವವನ್ನು ತೋರಿಸಿ ಕೊಟ್ಟಿದೆ ಹಾಗೂ ರಾಜಕೀಯ ತೀರ್ಮಾನಗಳಿಗೆ ಬಲವಾದ ಶಕ್ತಿಯಾಗಿ ಬೆಳೆದಿದೆ.

ಇಲ್ಲಿ ಡಿವೈಎಫ್ಐ, ಬೀಡಿ ಕಾರ್ಮಿಕರ ಸಂಘಟನೆ, ರೈತ ಸಂಘ ಅಂಗನವಾಡಿ ನೌಕರರ ಸಂಘಟನೆ, ಜನವಾದಿ ಮಹಿಳಾ ಸಂಘಟನೆ, ಎಸ್.ಎಫ್.ಐ ಹೀಗೆ ಎಡ ಸಾಮೂಹಿಕ ಸಂಘಟನೆಯ ಬೆಳವಣಿಗೆ ಇತರ ರಾಜಕೀಯ ಪಕ್ಷಗಳಿಗೆ ಕಣ್ಣು ಕೆಂಪೇರುವಂತೆ ಮಾಡಿದ್ದವು. ಸಿಪಿಐ(ಎಂ) ಪಕ್ಷದವರು ನಾವು ಎಂದು ತಾಲೂಕಿನ ಎಲ್ಲಾ ಗ್ರಾಮಗಳಲ್ಲೂ ನಿರ್ಭೀತಿಯಿಂದ ಹೇಳುವ ಕಾರ್ಮಿಕರು ತಯಾರಾಗಿದ್ದಾರೆ.

ತಾಲೂಕಿನಲ್ಲಿ ಈ ಚಳುವಳಿ ಬೆಳವಣಿಗೆಗೆ ಕಾರಣಕರ್ತರಾಗಿ ನಮ್ಮ ಯುವ ಸಂಗಾತಿಗಳ ಪರಿಶ್ರಮವಿದೆ. ನ್ಯಾಯವಾದಿಗಳಾದ ಶಿವಕುಮಾರ್, ಜೆ.ಎಂ.ಭಟ್ ಹರಿದಾಸ್, ಎಲ್.ಮಂಜುನಾಥ ಮೊದಲಾದ ಯುವ ಸಂಗಾತಿಗಳ ಸತತ ಹೋರಾಟ ಪಕ್ಷದ ಬೆಳವಣಿಗೆಗೆ ಕಾರಣಗಳಾದವು.ಕಾಂ.ಕೆ.ವಿ.ರಾವ್ (ಎಳ್ಚಿತ್ತಾಯರು) ಅವರ ಶಿಷ್ಯರಾಗಿ ಪಳಗಿದ ಇವರಿಗೆ ಜಿಲ್ಲಾ ಸಮಿತಿಯ ಮುಂದಾಳುಗಳು ದಾರಿ ದೀಪಕರಾದರು. ತಾಲೂಕಿನಲ್ಲಿ ಬೀಡಿ ಕೆಲಸಗಾರ ಸಂಘದ ಸಂಘಟನೆಗೆ ಸಂಜೀವ ಬಂಗೇರ, ಸುಕುಮಾರ್, ಜಿ. ಬಾಲಕೃಷ್ಣ ಶೆಟ್ಟಿ ಅವರ ಸಲಹೆ, ಸಹಾಯಗಳು ಕಾರಣವಾಗಿವೆ. ರೈತ ಸಂಘದ ಬೆಳವಣಿಗೆಗೆ ದಿವಗಂತರುಗಳಾದ ಕಾಂ. ರಾಮಚಂದ್ರರಾವ್, ಜನಾರ್ಧನ ನಾಯಕ ಅಲ್ಲದೇ ಅಬ್ರಾಹಂ ಕರ್ಕಡ, ಶ್ರೀಯಾನ್ ಕಾರಣವಾದರು.

ಹಲವು ಗ್ರಾಮ ಪಂಚಾಯ್ತು ಸದಸ್ಯರುಗಳು ಕಾರ್ಮಿಕ ಸಂಘಟನೆಗಳ ಮೂಲಕ ಕೆಂಬಾವುಟದ ಅಡಿಯಲ್ಲಿ ದುಡಿಯಲು ತಯಾರಾದರೆ ಕೊಕ್ಕಡದ ಸಹಕಾರಿ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಿ ಸಿಪಿಐ(ಎಂ) ಬೆಂಬಲಿತ ಇಬ್ಬರು ಅಭ್ಯರ್ಥಿಗಳು ಗೆದ್ದು ಬಂದಿರುವುದು ಬಿಜೆಪಿ ಯಂತ ಬಲಪಂಥೀಯರಿಗೆ ಕಾಲು ನಡುಗಲು ಕಾರಣವಾಯಿತು. ಕೊಕ್ಕಡ ನಗರದಲ್ಲಿ ರೈತಸಂಘದ ಕಾರ್ಯಕರ್ತರು ಕೆಂಬಾವುಟ ಹಿಡಿದು ನಡೆಸಿದ ಮೆರವಣಿಗೆ ರೈತರ ಸಮಸ್ಯೆ ಪರಿಹರಿಸಲು ನಾಡ ಕಛೇರಿಯಲ್ಲಿ ಧರಣಿ ಕುಳಿತ ರೈತರ ಹೋರಾಟ ಗ್ರಾಮದ ಜನರಿಗೆ ಅಚ್ಚರಿ ತಂದಿತ್ತು.

ಕೊಕ್ಕಡ ಪೇಟೆ ಹಾಗೂ ಅಸುಪಾಸಿನಲ್ಲಿ 10 ಕ್ಕೂ ಹೆಚ್ಚು ಬೀಡಿ ಬ್ರಾಂಚುಗಳಿವೆ. ಸಣ್ಣ ರೈತರು ಕೃಷಿ ಕೂಲಿಕಾರರೇ ಹೆಚ್ಚಾಗಿರುವ ಇಲ್ಲಿ ಮಹಿಳಾ ಕಾರ್ಮಿಕರು ಬೀಡಿಯನ್ನೇ ಅವಲಂಬಿಸಿ ಬಹಳ ಕಷ್ಟದಿಂದ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಇಲ್ಲಿ ಅಸಂಘಟಿತರಾಗಿದ್ದ ಬೀಡಿ ಕಾರ್ಮಿಕರು ಇತ್ತೀಚೆಗೆ ಬೆಳ್ತಂಗಡಿ ತಾಲೂಕು ಬೀಡಿ ಕೆಲಸಗಾರರ ಸಂಘಕ್ಕೆ ಸೇರಿ ಸಂಘಟಿತರಾದರು. ಇದರೊಂದಿಗೆ ಕೊಕ್ಕಡದಲ್ಲೂ ಬೀಡಿ ಕಾರ್ಮಿಕರ ಮೀಟಿಂಗ್ ಗಳು ನಡೆದವು. ಹಾಗೂ ಇದರ ಪರಿಣಾಮವಾಗಿ ಕಂಟ್ರಾಕ್ಟುದಾರರು ಕೂಲಿಯಲ್ಲಿ ಕಡಿಮೆ ಕೊಡುವುದು, ಪಾಸು ಪುಸ್ತಕ (ಲಾಗ್ ಪುಸ್ತಕ) ಕೈಯಲ್ಲಿ ಕೊಡದಿರುವುದು, ಐಡೆಂಟಿಟಿ ಕಾರ್ಡ್ ಕೊಡದಿರುವುದು, ಬೋನಸ್, ರಜಾ ಸಂಬಳ, ಹಬ್ಬದ ರಜೆ ಹಾಗೂ ಪ್ರಾವಿಡೆಂಟ್ ಫಂಡಿನಲ್ಲಿ ಬೀಡಿ ಕಾರ್ಮಿಕರಿಗೆ ಮಾಡುವ ಅನ್ಯಾಯದ ಬಗ್ಗೆ ತಿಳುವಳಿಕೆ ಮೂಡಲು ಪ್ರಾರಂಭವಾಯಿತು. ಈ ಎಲ್ಲಾ ಕಾನೂನು ಬದ್ಧ ಸವಲತ್ತು ಮತ್ತು ಕಾನೂನು ನಿಯಮಗಳನ್ನು ಜಾರಿಗೊಳಿಸಲು ಕಾರ್ಮಿಕರು ಒತ್ತಾಯಿಸಲಾರಂಭಿಸಿದರು. ತಮ್ಮ ಅಕ್ರಮ ಗಳಿಕೆಯ ಮೂಲ ಬೇರಿಗೆ ಪೆಟ್ಟು ಬೀಳುವುದನ್ನು ಅರಿತ ಬೀಡಿ ಕಂಟ್ರಾಕ್ಟುದಾರರ ನಿದ್ದೆ ಹಾರಿ ಹೋಯಿತು. ಇವರ ಕೆಂಗಣ್ಣಿಗೆ ಬೀಡಿ ಯೂನಿಯಾನ್ ನ ಅಧ್ಯಕ್ಷರು, ಕಾರ್ಯದರ್ಶಿಗಳು ಗುರಿಯಾದರು. ಇವರನ್ನೇ ಮುಗಿಸಲು ಮಾಸ್ಟರ್ ಪ್ಲಾನ್ ಹಾಕಿದರು. ಹಾಗೂ ತಾ: 12-7-99 ರಂದು ಈ ಮಾಸ್ಟರ್ ಪ್ಲಾನ್ ಅಚ್ಚುಕಟ್ಟಾಗಿ ಕಾರ್ಯಗತವಾಯಿತು.

ಕೊಕ್ಕಡ ಘಟನೆಯ ಹಿನ್ನಲೆ:

ಸುಂದರಗೌಡ ಯಾನೆ ಲಕ್ಷ್ಮಣಗೌಡರಿಗೆ ಕೊಕ್ಕಡದಲ್ಲಿ ಟೆಲಿಫೋನ್ ಬೀಡಿಯ ಬ್ರಾಂಚ್ ಇದೆ. ಈ ಬ್ರಾಂಚಿನ ಕಾರ್ಮಿಕರು ಯೂನಿಯನ್ನಿಗೆ ಸೇರಿದರು. ಇದರೊಂದಿಗೆ ಕೂಲಿ ಕಡಿಮೆ ಪ್ರಶ್ನೆ ಎತ್ತಿದರು. ಸಾವಿರ ಬೀಡಿಗೆ ಪ್ರಾವಿಡೆಂಟ್ ಫಂಡ್ ಕಡಿತ ಮಾಡಿ ರೂ.43-13 ಮಜೂರಿ ಕೊಡಬೇಕು ಆದರೆ ಸುಂದರ ಗೌಡರು ಕೊಡುವುದು 41-80 ರೂ. ಮಾತ್ರ. ಕಾರ್ಮಿಕರು ರೂ. 42-00 ಕೊಟ್ಟರೂ ಸಾಕು ಎಂದು ಕೇಳತೊಡಗಿದ್ದರು. ಈ ಮಧ್ಯೆ ಯೂನಿಯನ್ನಿನ ಅಧ್ಯಕ್ಷರಾದ ಬಿ.ಎಂ.ಭಟ್ ಮಧ್ಯ ಪ್ರವೇಶ ಮಾಡಿ ಕಾರ್ಮಿಕರು ಕೇಳಿದ ಕೂಲಿ ಕೊಡಲು ವಿನಂತಿಸಿದರು. ಆದರೆ ಬಿ.ಎಂ.ಭಟ್‌ರಲ್ಲಿ ಮಾತುಕತೆಯ ವೇಳೆ ಒಪ್ಪಿಕೊಂಡ ಸುಂದರ ಗೌಡರು ಬೀಡಿ ಬ್ರಾಂಚ್‌ನ್ನು ಒಪನ್ ಮಾಡಲೇ ಇಲ್ಲ ಬ್ರಾಂಚಿನ ಬಾಗಿಲಲ್ಲಿ ಕಾದು ಕುಳಿತು ನಿರಾಶರಾದ ಕಾರ್ಮಿಕರು ಪಾಣೆ ಮಂಗಳೂರಿನ ಡಿಪೋಗೆ ಹೋದರು. ಅಲ್ಲಿ ಮ್ಯಾನೇಜರ್ ಸಮ್ಮುಖದಲ್ಲಿ ಯೂನಿಯನ್‌ನ ಅಧ್ಯಕ್ಷರು ಮತ್ತು ಬೀಡಿ ಕಾರ್ಮಿಕರ ಎದುರು ರೂ. 42-00 ಕೂಲಿ ಕೊಡಲು ಒಪ್ಪಿ ಬಂದ ಸುಂದರ ಗೌಡರು ಪುನಃ ಹಳೇರಾಗ ಹಾಡಿದರು. 41-80ಕ್ಕಿಂತ ಹೆಚ್ಚು ಕೊಡಲು ಸಾಧ್ಯವೇ ಇಲ್ಲ ಎಂದರು ಮಾತ್ರವಲ್ಲ ಕಾರ್ಮಿಕರ ಮೇಲೆ ಬೆದರಿಕೆ ತಂತ್ರ ಪ್ರಯೋಗಿಸಲು ಪ್ರಾರಂಭಿಸಿದರು. ಬ್ರಾಂಚಿನ ಎದುರು ಪೋಕರಿಗಳನ್ನು ಸೇರಿಸಿ ಮಹಿಳಾ ಕಾರ್ಮಿಕರಿಗೆ ಅವಾಚ್ಯ ಶಬ್ದಗಳಿಂದ ಬೈಯಿಸುವುದು, ಯೂನಿಯನ್ನಿಗೆ ಧಿಕ್ಕಾರ ಘೋಷಣೆ ಹಾಕಿಸುವುದು ಮಾಡಲು ಪ್ರಾರಂಭಿಸಿದರು. ಈ ಬಗ್ಗೆ ಉಪ್ಪಿನಂಗಡಿ ಪೋಲೀಸು ಠಾಣೆಗೆ ಯೂನಿಯನ್ ವತಿಯಿಂದ 300 ಜನ ಕಾರ್ಮಿಕರು ಮೆರವಣಿಗೆಯಲ್ಲಿ ತೆರಳಿ ದೂರು ಕೊಡಲಾಯಿತು. ಪೋಲಿಸರು ಸ್ಟೇಶನಿಗೆ ಕರೆಸಿದರೂ ಕಂಟ್ರಾಕ್ಟುದಾರರು ಬರಲಿಲ್ಲ.

ಈ ಮಧ್ಯೆ ತಾ: 12-7-99 ರಂದು ಮಂಗಳೂರಿನ ಬೀಡಿ ಕಂಟ್ರಾಕ್ಟದಾರರ ಮುಂದಾಳುಗಳು ಕೊಕ್ಕಡಕ್ಕೆ ಬಂದು ಪಂಚಾತಿಯತಿ ಮಾಡಿ ಸರಿಮಾಡುವುದಾಗಿ ಭರವಸೆ ನೀಡಿದರು ಹಾಗೂ ಪೋಲೀಸರು ಠಾಣೆಯಲ್ಲೂ ಹೇಳಿದರು. ಕಂಟ್ರಾಕ್ಟದಾರರ ಮುಂದಾಳು ಗಳ ಭರವಸೆ ಮೇರೆಗೆ ಯೂನಿಯನ್ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ 15 ಜನ ಕಾರ್ಮಿಕರ ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಷನ್ ಕಾರ್ಯದರ್ಶಿ ಕಾಂ. ಜಿ. ಬಾಲಕೃಷ್ಣ ಶೆಟ್ಟಿ ನೇತೃತ್ವದಲ್ಲಿ ಸದ್ರಿ ಸುಂದರ ಗೌಡರ ಬ್ರಾಂಚಿಗೆ ಪಂಚಾಯತಿಗೆ ಹೋದರು. ಆದರೆ ಅಲ್ಲಿ ನಡೆದದ್ದೇ ಬೇರೆ. ಕಂಟ್ರಾಕ್ಟುದಾರರು ಅಮಲು ಕೋರರ ಒಂದು ತಂಡವನ್ನೇ ರಚಿಸಿದ್ದರು. ಅವರು ಬಿ.ಎಂ.ಭಟ್ ಹೆಗಲ ಮೇಲಿದ್ದ ಕೆಂಪು ಶಾಲನ್ನು ಎಳೆದು ಹೊಡೆಯಲು ಪ್ರಾರಂಭಿಸಿದರು. ಅದನ್ನು ಕಂಡು ತಡೆಯಲು ಬಂದ ಮಹಿಳಾ ಕಾರ್ಮಿಕರ ಮೇಲೂ ಕೈ ಮಾಡಿದರು. ನೆಲಕ್ಕೆ ಬಿದ್ದ ಮಹಿಳಾ ಕಾರ್ಮಿಕರನ್ನು ತುಳಿದರು. ಕಾರ್ಯದರ್ಶಿ ಮಂಜುನಾಥರ ತಲೆ ಒಡೆದರು. ಹಲ್ಲು ಮುರಿದರು. ಅಸಾಹಯಕರಾದ ಇವರನ್ನು ಕೆಲವು ಸ್ಥಳೀಯರು ರಕ್ಷಿಸದೇ ಹೋದರೆ ಇವರೆಲ್ಲರ ಕತೆ ಮುಗಿಯುತ್ತಿತ್ತು. 15 ಜನರಿಗೆ ಪೆಟ್ಟಾಯಿತು. ಇವರಲ್ಲಿ ತೀವ್ರ ಗಾಯಗೊಂಡ 7 ಜನರನ್ನು ಬೆಳ್ತಂಗಡಿ ಸರಕಾರಿ ಆಸ್ಪತ್ರೆಯಲ್ಲಿ ಒಳ ರೋಗಿಗಳಾಗಿ ದಾಖಲಿಸಲಾಯಿತು. ಆಸ್ಪತ್ರೆಗೆ ದಾಖಲಾದವರು ನ್ಯಾಯವಾದಿ ಬಿ.ಎಂ.ಭಟ್, ಮಂಜುನಾಥ, ಶ್ರೀಮತಿ ಗೀತ ಕೊಕ್ಕಡ, ಶ್ರೀಮತಿ ಕಲಾವತಿ ಕೊಕ್ಕಡ, ಶ್ರೀಮತಿ ಚಂದ್ರಾವತಿ ಕೊಕ್ಕಡ, ಬಾಬು ಗೌಡ ಹಾಗೂ ಚಂದ್ರಶೇಖರ ಮತ್ತು ರೈತ ಸಂಘದ ಕಾರ್ಯದರ್ಶಿ ಹರಿದಾಸರಿಗೆ ಕೂಡಾ ಹೊಡೆತ ಬಿದ್ದಿತು.

ಕೊಕ್ಕಡ ಬೀಡಿ ಕಂಟ್ರಾಕ್ಟುದಾರರು ಮತ್ತದರ ಗೂಂಡಾಗಳಿಂದ ಬೆಳ್ತಂಗಡಿ ತಾಲೂಕು ಬೀಡಿ ಕೆಲಸ ಗಾರರ ಸಂಘದ ಅಧ್ಯಕ್ಷ ಬಿ.ಎಂ. ಭಟ್ ಕಾರ್ಯದರ್ಶಿ ಮಂಜುನಾಥ, ರೈತ ಸಂಘದ ಕಾರ್ಯದರ್ಶಿ ಹರಿದಾಸ ಹಾಗೂ ಕೊಕ್ಕಡ ಮಹಿಳಾ ಕಾರ್ಮಿಕರ ಮೇಲೆ ನಡೆದ ಹಲ್ಲೆಯನ್ನು ಪ್ರತಿಭಟಿಸಿ ದಿನಾಂಕ: 19-7-99 ರಂದು ಪ್ರತಿಭಟನಾ ಮೆರವಣಿಗೆ ಹಾಗೂ ಪ್ರತಿಭಟನಾ ಸಭೆಯು ಬೆಳ್ತಂಗಡಿಯಲ್ಲಿ ಜರುಗಿತು. ಈ ಸುರಿಯುವ ಮಳೆಯಲ್ಲಿ ಎರಡು ಎರಡೂವರೆ ಸಾವಿರ ಮಹಿಳೆಯರು, ರೈತರು, ಯುವಕರು, ವಿದ್ಯಾರ್ಥಿಗಳು ಸಂಪೂರ್ಣ ಒದ್ದೆಯಾಗಿ ಗೂಂಡಾ ಕಂಟ್ರಾಕ್ಟರ್‌ಗಳ ವಿರುದ್ಧ ಘೋಷಣೆ ಕೂಗಿ ಹೆಣ್ಣನ್ನು ಮಾತೆ ದೇವತೆ ಎನ್ನುವ ನೀವು ಮಹಿಳೆಯರನ್ನೇ ತುಳಿಯುವಿರೇನು ಎನ್ನುತ್ತ ನೀತಿಗೆಟ್ಟ ಕಂಟ್ರಾಕ್ಟರುಗಳಿಗೆ ದಿಕ್ಕಾರ ಕೂಗುತ್ತ ಮೆರವಣಿಗೆ ನಡೆಸಿ ಬೆಳ್ತಂಗಡಿಯ ಪೋಲೀಸ್ ಮೈದಾನದಲ್ಲಿ ಬಹಿರಂಗ ಸಭೆ ನಡೆಸಿದರು.

ಮೊದಲಿಗೆ ಸ್ವಾಗತಿಸಿದ ಹರಿದಾಸ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಸೇರಿದ ಜಮಸ್ತೋಮದ ಬಗ್ಗೆ ಕಣ್ಣು ತುಂಬಿ ಮಾತಾಡಿದರು. ಬೆಳ್ತಂಗಡಿಯ ಜನರೇ ಅಚ್ಚರಿ ಪಡುವಂತೆ ಮಾಡಿದ ಈ ಪ್ರತಿಭಟನಾ ಸಭೆಯಲ್ಲಿ ಮೊದಲಿಗೆ ಕೊಕ್ಕಡ ಬೀಡಿ ಕೆಲಸಗಾರರ ಸಂಘದ ಅಧ್ಯಕ್ಷ ಶ್ರೀಮತಿ. ಗೀತ ಘಟನೆಯ ವಿವರ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ತಾಲೂಕು ಸಮಿತಿ ಅಧ್ಯಕ್ಷರಾದ ಬಿ.ಎಂ. ಭಟ್ ವಹಿಸಿ ಕಾರ್ಮಿಕರ ಪರವಾಗಿ ಜೀವ ಇರುವ ತನಕ ಹೋರಾಡಲು ತಯಾರಾದ ನಮ್ಮನ್ನು ಈ ಹೊಡೆತ, ಹಲ್ಲೆಗಳಿಂದ ತಡೆಯಲು ಸಾಧ್ಯವಿಲ್ಲ. ನ್ಯಾಯಕ್ಕಾಗಿ ಹೋರಾಡಿಯೇ ಸಿದ್ಧ ಎಂದರು.

ಸಿಐಟಿಯು ಜಿಲ್ಲಾ ಅಧ್ಯಕ್ಷ ಸಿ. ನಂಜುಂಡಪ್ಪ, ಜಿಲ್ಲಾ ಫೆಡರೇಶನ್ನಿನ ಬಾಲಕೃಷ್ಣ ಶೆಟ್ಟಿ, ಸುಕುಮಾರ್, ಮೋಟಾರ್ ಯೂನಿಯನ್‌ನ್ನಿನ ವಸಂತ ಆಚಾರಿ, ಜಿಲ್ಲಾ ರೈತಸಂಘದ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್, ಬಂಟ್ವಾಳ ಬೀಡಿ ಕೆಲಸಗಾರರ ಸಂಘದ ಸಂಜೀವ ಬಂಗೇರ, ಪದವು ಬೀಡಿ ಯೂನಿಯನ್ ನ ಬಾಬು ದೇವಾಡಿಜ ಡಿವೈಎಫ್ಐ ನ ಬಾಲಕೃಷ್ಣ ಆಡೆಂಜ. ಸಿಪಿಐ(ಎಂ) ತಾಲೂಕು ಕಾರ್ಯದರ್ಶಿ ಶಿವಕುಮಾರ್ ಮಾತನಾಡಿದರು.

ಹಲ್ಲೆಯ ಹಿಂದೆ ಬಿಜೆಪಿ ಸಂಘ ಪರಿವಾರದ ಕೈವಾಡ ಇದ್ದರೂ ಕಂಟ್ರಾಕ್ಟರರನ್ನು ಎದುರು ಮಾಡಿದ ಇವರ ತಂತ್ರವನ್ನು ಮುರಿಯಲು ಕಾರ್ಮಿಕರು ಉತ್ಸುಕರಾಗಿದ್ದಾರೆ. ಸದ್ರಿ ಕಂಟ್ರಾಕ್ಟದಾರರ ಬ್ರಾಂಚ್‌ನು ಬದಲಾಯಿಸಲು ಮಾಲಕರಿಗೆ ತಿಳಿಸಿ ಬೇರೆ ಕಂಟ್ರಾಕ್ಟದಾರರ ಮೂಲಕ ಕೆಲಸ ಪಡೆಯಲಾಯಿತು. ಸಧ್ಯದಲ್ಲಿಯೇ ಕೊಕ್ಕಡದಲ್ಲಿ ವಿಜಯೋತ್ಸವ ನಡೆಸಲು ಕಾರ್ಮಿಕರು ಮುಂದಾಗುತ್ತಾರೆ. ಈ ಗಲಭೆ ಬಳಿಕ ಕಾರ್ಮಿಕರಿಗೆ ಮಜೂರಿ ಹೆಚ್ಚಳವಾಗಿದೆ. ಪಾಸು ಪುಸ್ತಕ ಕೈಗೆ ಸಿಕ್ಕಿರುವುದು ಹೆಚ್ಚಿನ ಕಾರ್ಮಿಕರು ಸಂಘಟನೆಗೆ ಸೇರಲು ಸಹಕಾರಿಯಾದವು.

ಈ ಹೊಡೆತ, ಹಲ್ಲೆಗಳಿಂದ ಹೆದರಿದ ಕಾರ್ಮಿಕ ಸಂಘಟನೆಗಳು ಹೊಸ ಹುಮ್ಮಸ್ಸಿನಿಂದ ಗರಿಕೆದರಿ ಹೋರಾಟದ ದಾರಿಯತ್ತ ಸಾಗುತ್ತಿದ್ದಾರೆ. ಸಂಘಟನೆ ಇನ್ನೂ ಹಲವು ಕಡೆ ಮಾಡಲು ಕಾರ್ಯಕರ್ತರು ಪಣತೊಟ್ಟು ದುಡಿಯತೊಡಗಿದ್ದಾರೆ. ಹಲ್ಲೆಕೋರರನ್ನು ತಕ್ಷಣ ಬಂಧಿಸಿ ನ್ಯಾಯ ಒದಗಿಸಲುಪೋಲೀಸರ ಮೇಲೆ ಕಾರ್ಮಿಕರ ಸಂಘಟಿತ ಹೋರಾಟ ಒತ್ತಡ ತಂದಿತು. ಮೊದಲಿನ ದಿನ ಬಂದ ಕಾರ್ಮಿಕರ ದಂಡು ಪೋಲೀಸರನ್ನು ದಂಗುಬಡಿಸಿತ್ತು. ಅದುವೇ ಹಲ್ಲೆಕೋರರ ಬಂಧನಕ್ಕೆ ಕಾರಣವಾಯಿತು. ○

ಕನಸುಗಾರಿಕೆಯ 'ಚಂದ್ರಮುಖಿ ಪ್ರಾಣಸಖಿ'

ಸಿನಿಮಾ

ಭಾರತದ ಚಲನಚಿತ್ರಗಳಲ್ಲಿ ಪ್ರೇಮದ ಕಥಾವಸ್ತುವಿಲ್ಲದ ಚಿತ್ರಗಳು ತೀರ ವಿರಳವೆಂದೇ ಹೇಳಬೇಕು. ಹೀಗೆ ಬರುತ್ತಿರುವ ನೂರಾರು ಚಿತ್ರಗಳಲ್ಲಿ ಹಲವಾರು ಚಿತ್ರಗಳ ವಸ್ತು ತ್ರಿಕೋನ ಪ್ರೇಮ. ಅಂತಹದೇ ಒಂದು ತ್ರಿಕೋನ ಪ್ರೇಮವನ್ನು ಸ್ವಲ್ಪ ಭಿನ್ನವಾದ ನೆಲೆಯಿಂದ ಕಾಣಬಯಸಿರುವ ಚಿತ್ರ 'ಚಂದ್ರಮುಖಿ ಪ್ರಾಣಸಖಿ'


ಚಿತ್ರದಲ್ಲಿ ಅನಿರೀಕ್ಷಿತವಾಗಿ ಸುಶೀಲ್(ರಮೇಶ್) ಇಬ್ಬರು ವಿಭಿನ್ನ ಸ್ವಭಾವದ ಅಕ್ಕ ತಂಗಿಯರನ್ನು ಭೇಟಿಯಾಗುತ್ತಾನೆ. ಮದುವೆಯಲ್ಲಿ ಕವನ ಹಾಡಿದ ಸಂಗೀತಗಾರ್ತಿ ಸಹನಾ(ಪ್ರೇಮ)ಳನ್ನು ಮೆಚ್ಚಿಕೊಂಡು ಅವಳ ಪ್ರೀತಿಗಾಗಿ ಪ್ರೇಮ ಪತ್ರಗಳನ್ನು ಬರೆದು ಒಲವನ್ನು ಕೋರುತ್ತಾನೆ. ಅಕ್ಕನಿಗಾಗಿ ಬಂದ ಪತ್ರಗಳನ್ನು ಭಾವನಾ (ಭಾವನಾ) ಒಡೆದು ಓದಿ ತಾನೇ ಹುಡುಗಾಟದಲ್ಲಿ ಅಕ್ಕನ ಹೆಸರಿನಲ್ಲೇ ಸುಶೀಲ್ ಗೆ ಪತ್ರ ಬರೆಯುತ್ತಾಳೆ. ನಂತರ ತಾನೇ ಪ್ರೇಮದಲ್ಲಿ ಸಿಲುಕುತ್ತಾಳೆ. ಹೀಗಾಗಿ ನಾಯಕನಿಂದ ಹಲವಾರು ಪತ್ರಗಳ ವ್ಯವಹಾರ, ಫೋನ್‌ನಲ್ಲಿ ಮಾತನಾಡುವುದು ಭಾವನಳ ಅಕ್ಕ ಸಹನಾಗೆ ವಿಷಯ ಗೊತ್ತಿಲ್ಲದಂತೆ ನಡೆಯುತ್ತದೆ. ಕೊನೆಗೆ ಸಹನಾಳಲ್ಲಿ ತನ್ನ ಪ್ರೇಮ ತೋಡಿಕೊಳ್ಳಲು ನಾಯಕ ಪ್ರಯತ್ನಿಸಿದಾಗ ಇದು ಬಯಲಾಗುತ್ತದೆ. ಇವನ ಪ್ರೇಮವನ್ನು ತಿಳಿಯದ ಸಹನಾಳಿಂದ ತೀಕ್ಷ್ಣ ಪ್ರತಿಕ್ರಿಯೆಗೆ, ಅವಮಾನಕ್ಕೆ ಒಳಗಾಗುವ ಪರಿಸ್ಥಿತಿ ಸುಶೀಲ್‌ಗೆ ಬರುತ್ತದೆ. ಇಂತಹ ಸನ್ನಿವೇಶದಲ್ಲಿ ಭಾವನ ತನ್ನ ಈ ಪತ್ರ ವ್ಯವಹಾರಗಳ ಮೂಲಕ ಬೆಳೆದ ಪ್ರೇಮವನ್ನು ವಿವರಿಸಿದ ನಂತರ ತಂದೆ ತಾಯಿಗಳ ಅಭಿಪ್ರಾಯಕ್ಕೆ ಮನ್ನಣೆ ನೀಡಿ ಅಕ್ಕ ಸಹನಾ ಸುಶೀಲ್‌ನನ್ನು ಮದುವೆ ಆಗಲು ಒಪ್ಪುತ್ತಾಳೆ.

ಆದರೆ ಸುಶೀಲ್, ವಿಷಯ ತಿಳಿದ ನಂತರ ತನ್ನೊಡನೆ ಪತ್ರ ವ್ಯವಹಾರ ಮಾಡಿದ, ತನ್ನ ಭಾವನೆಯನ್ನು ಹಂಚಿಕೊಂಡಿರುವ ಭಾವನಳೇ ತನ್ನ ಪ್ರೇಮಕ್ಕೆ ಸೂಕ್ತ ಎಂದು ಆಯ್ಕೆ ಮಾಡಿಕೊಳುತ್ತಾನೆ. ಮನಸ್ಸಿಲ್ಲದೇ ಮದುವೆಗೆ ಒಪ್ಪಿದ್ದ ಸಹನಾಗೆ ಸುಶೀಲ್‌ನ ತೀರ್ಮಾನದಿಂದ ಸಂತೋಷವಾಗುತ್ತದೆ. ಇಲ್ಲಿಗೆ ಸುಖಾಂತವಾಗಿ ಚಿತ್ರ ಮುಕ್ತಾಯವಾಗುತ್ತದೆ.

ಈ ಚಿತ್ರದ ವಿಶೇಷವೆಂದರೆ ಅನೇಕ ಪ್ರೇಮ ಚಿತ್ರಗಳಲ್ಲಿರುವಂತೆ ಪ್ರೇಮವನ್ನು ತುಂಡರಿಸಲು ಕಾದಿರುವ ಖಳನಾಯಕರು, ಮಾರಾಮರಿ ಹಿಂಸೆಗಳಾಗಲಿ ಅಥವಾ ಪ್ರೇಮ ಗೀತೆಗಳ ಹೆಸರಿನಲ್ಲಿ ಅಶ್ಲೀಲ ಕುಣಿತಗಳಾಗಲಿ ಇಲ್ಲದಿರುವುದು ಆರೋಗ್ಯಕರವಾಗಿದೆ. ಇಂದಿನ ಚಲನಚಿತ್ರಗಳಲ್ಲಿ ಯಥೇಚ್ಛವಾಗಿ ಅಶ್ಲೀಲತೆ, ಹಿಂಸೆ ತುಂಬಿರುವ ಸಂದರ್ಭದಲ್ಲಿ ಹಾಗೊಮ್ಮೆ ಈಗೊಮ್ಮೆ ಇಂತಹ ಚಿತ್ರಗಳು ಒಂದು ಆರೋಗ್ಯಕರ ಮನರಂಜನೆಯನ್ನು ಒದಗಿಸುತ್ತವೆ.

ಆದರೆ ಸಾಮಾನ್ಯವಾಗಿ ಚಲನಚಿತ್ರಗಳಲ್ಲಿ ಆಗುವಂತೆ ವಾಸ್ತವ ಪ್ರಪಂಚದಲ್ಲಿ ಯಾವುದೇ ನೆಲೆ ಇರದ, ಕೃತಕವಾಗಿ ಸೃಷ್ಟಿಸಿದ ಸಮಸ್ಯೆಯ ಮೇಲೆ ಚಿತ್ರಕಥೆ ರೂಪಿಸಲ್ಪಟ್ಟಿದೆ. ವಾಸ್ತವದ ಬದುಕಿನಲ್ಲಿ ನೈಜವಾದ ಪ್ರೇಮಕ್ಕೆ ಇರುವ ಅಸಂಖ್ಯ ಅಡೆತಡೆಗಳಿಗೆ ಈ ಚಿತ್ರದ ನಿರ್ಮಾಪಕರು, ನಿರ್ದೇಶಕರು ಕುರುಡಾಗಿದ್ದಾರೆಯೇ? ಎನ್ನುವ ಪ್ರಶ್ನೆ ಏಳುತ್ತದೆ. ಹೀಗೆ ವಾಸ್ತವ ಜಗತ್ತಿನಲ್ಲಿ ವಾಸ್ತವಿಕ ಸಮಸ್ಯೆಗಳ ಮೇಲೆ ಉತ್ತಮ ಚಿತ್ರ ನಿರ್ಮಾಣ ಮಾಡುವ ಮೂಲಕ ಯುವಜನರಿಗೆ ತಮ್ಮ ಜೀವನದಲ್ಲಿ ನೈಜ ಪ್ರೇಮದಲ್ಲಿ ತೊಡಗುವ ಮತ್ತು ಬರುವ ಎಡರು-ತೊಡರುಗಳನ್ನು ಎದುರಿಸುವ ಧೈರ್ಯ ನೀಡದೆ, ಕನಸುಗಾರಿಕೆ ಹಾಗೂ ಭ್ರಮೆಯನ್ನು ಬಿತ್ತುತ್ತದೆ.

ಅಸಂಖ್ಯಾತ ಪ್ರೇಮ ಕಥೆಗಳನ್ನು ಹೊಸೆಯುವ ನಿರ್ಮಾಪಕ, ನಿರ್ದೇಶಕ, ಸಾಹಿತಿಗಳು ಪ್ರೇಮವನ್ನು ಕೇವಲ ಭಾವನಾತ್ಮಕ ಪ್ರಶ್ನೆಯಾಗಿ ಚಿತ್ರಿಸುವುದು ಅಥವಾ .ಅವಾಸ್ತವಿಕ ಸಂಘರ್ಷ ಮಾರ್ಗಗಳನ್ನು



ತೋರಿಸುವುದು. ಇವುಗಳ ಮೂಲಕ ಪ್ರೇಮವನ್ನು ಕೇವಲ ತೆರೆಯ ಮೇಲೆ ನೋಡಿ ಆನಂದಿಸುವ, ಅದರಲ್ಲಿಯೇ- ಎಲ್ಲಾ ತೃಪ್ತಿಯನ್ನು ಪಡೆಯುವಂತೆ ಯುವಜನರನ್ನು ಸಮಾಜ ರೂಪಿಸುತ್ತಿದ್ದಾರೆ. ಆ ಮೂಲಕ ಚಲನಚಿತ್ರ ಮಾಧ್ಯಮವನ್ನು ನಿಜ ಜೀವನದಲ್ಲಿ ಜಾತಿ, ಮತ, ಅಂತಸ್ತುಗಳ ಬೇಧವನ್ನು ಮೀರುವ ಒಂದು ಪ್ರಗತಿಪರ ಸಾಮಾಜಿಕ ಹಾಗೂ ಭಾವನಾತ್ಮಕ ಸಂಬಂಧವಾಗಿ ಪ್ರೇಮವನ್ನು ಒಪ್ಪುವ, ಪ್ರಗತಿಪರ ಸಮಾಜದ ನಿರ್ಮಾಣದ ಒಂದು ಆಧಾರವಾದ ಪ್ರೇಮದ ಪ್ರಗತಿ ಪರತೆಯನ್ನು ನಾಶಪಡಿಸುವ ಆ ಮೂಲಕ ಸಮಾಜದ ಚಲನೆಯನ್ನು ತಡೆಯಬಯಸುವ ಪಾಳೆಗಾರಿ, ಸಂಪ್ರದಾಯವಾದಿ ಸಂಕುಚಿತ ಮನೋಭಾವದ ಹಿತಾಸಕ್ತಿಗಳ ಕೈಯ ದಾಳವನ್ನಾಗಿಸುತ್ತದೆ.

ಇನ್ನು ಈ ಚಿತ್ರದಲ್ಲಿ ಪ್ರೇಮ ಹಾಗೂ ಭಾವನಾ ಭಾವೋದ್ವೇಗದ ಸನ್ನಿವೇಶದಲ್ಲಿ ತುಂಬಾ ಎಡವಿದ್ದಾರೆ ಆದರೂ ಭಾವನಾ ಭಾವನಾತ್ಮಕವಾಗಿ ನಟಿಸಿದ್ದಾರೆ ಅಲ್ಲದೇ ಇಡೀ ಚಿತ್ರವನ್ನು ಭಾವನಾ ಪಾತ್ರವೇ. ಪ್ರೇಮ ಪಾತ್ರಕ್ಕೆ ತಕ್ಕಂತೆ ನಟಿಸಿದರೂ ಪಾತ್ರದ ಮಹತ್ವ ಕಡಿಮೆ ರಮೇಶ್ ಮಾಮೂಲು. ಮೊದಲ ಬಾರಿ ನಿರ್ದೇಶಿಸಿದ ಸೀತಾರಾಮ ಕಾರಂತ್ ಕಲ್ಪನೆಗಳ ಹುರಿಗಟ್ಟುವ ಪ್ರೇಮವನ್ನು ಚಿತ್ರೀಕರಿಸಲು ಯತ್ನಿಸಿದ್ದಾರೆ. ಎಡರು-ತೊಡರುಗಳು ಹೆಚ್ಚು ಛಾಯಾಗ್ರಹಣ ಮಾತ್ರ ಚಿತ್ರದ ಸಂದರ್ಭಕ್ಕೆ ತಕ್ಕಂತೆ ಒಡಮೂಡಿ ಆವರಿಸುತ್ತದೆ.

ರಾಜಶೇಖರ ಮೂರ್ತಿ
ಜಿ.ಎನ್.ನಾಗರಾಜ

ಪುಸ್ತಕ ಪರಿಚಯ

ಅಮರ ಸುಳ್ಯದ ಸ್ವಾತಂತ್ರ್ಯ ಸಮರ

ಲೆ: ಎನ್.ಎಸ್.ದೇವಿಪ್ರಸಾದ್‌ಸಂಪಾಜೆ
ಪು. 135, ಬೆಲೆ ರೂ. 25, ವರ್ಷ: 1999,
ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು, ದ.ಕ.

ಭಾರತದಲ್ಲಿ ಬ್ರಿಟಿಶರಿಗೆ ರಾಜರುಗಳು ಸುಲಭವಾಗಿ ತಲೆಬಾಗಿರಬಹುದು. ಆದರೆ ಜನಸಾಮಾನ್ಯರು ತಡೆಯೊಡ್ಡಿದರು. ಜನಸಾಮಾನ್ಯರೇ ಚರಿತ್ರೆಯ ನಿರ್ಮಾಪಕರು. ಇದಕ್ಕೆ 'ಅಮರ ಸುಳ್ಯದ ಸ್ವಾತಂತ್ರ್ಯ ಸಮರ' ಒಂದು ಉತ್ತಮ ಮೂಲವನ್ನು ಒದಗಿಸುತ್ತದೆ. 1857ರಲ್ಲಿ ನಡೆದ ಭಾರತ ಮಟ್ಟದ ಪ್ರಥಮ ಸ್ವಾತಂತ್ರ್ಯ ಸಮರವನ್ನೇ 'ಸಿಪಾಯಿ ಬಂಡಾಯ' ಎಂದು ಕರೆದ ಇಂಗ್ಲಿಷರು ಅದಕ್ಕೂ ಇಪ್ಪತ್ತು ವರ್ಷ ಮೊದಲೇ 1937ರಲ್ಲಿ ಕರ್ನಾಟಕದ ಒಂದು ಭಾಗದಲ್ಲಿ ನಡೆದ ರೈತ ಸಮರವನ್ನು ಸ್ವಾತಂತ್ರ್ಯ ಸಮರ ಎಂದು ಕರೆದರೇ? ಇಲ್ಲ. ಅವರು ಅದನ್ನು 'ಕಲ್ಯಾಣಪ್ಪನ ಕಾಟಕಾಯಿ' ಎಂದು ಕರೆದರು. ಕಾಟಕಾಯಿ ಎಂದರೆ 'ದರೋಡೆ' ಎಂದು. ಇದು ಜನಸಾಮಾನ್ಯರ - ರೈತ ಕಾರ್ಮಿಕರಲ್ಲಿರುವ ಕ್ರಾಂತಿಶಕ್ತಿಯನ್ನು ನಾಶಮಾಡುವ ಸಾಮ್ರಾಜ್ಯಶಾಹಿ ಮನೋ ಭಾವ ಇಂದಿನ ಆಳುವವರ್ಗದಲ್ಲೂ ಈ ಮನೋಭಾವವನ್ನು ಕಾಣಬಹುದು. ಆದರೆ 'ಅಮರ ಸುಳ್ಯದ ಸ್ವಾತಂತ್ರ್ಯ ಸಮರ' 'ಕಾಟಕಾಯಿ' ಆಗದೆ. ದೇಶದ ಮಹತ್ವದ ಕ್ರಾಂತಿ ಘಟನೆಗಳಲ್ಲೇ ಒಂದಾಗಿದೆ. ಈ ಕ್ರಾಂತಿಕಾರರು ಸುಳ್ಯದಿಂದ ಒಂದು ವಾರದಲ್ಲಿ ಮಂಗಳೂರವರೆಗೆ ತಮ್ಮ ದಾಳಿಯನ್ನು ಸಾಗಿಸಿ ಅಲ್ಲಿ ಹಾರಾಡುತ್ತಿದ್ದ ಇಂಗ್ಲೀಷ್ ಧ್ವಜವನ್ನು ಇಳಿಸಿ ತಮ್ಮ ಧ್ವಜವನ್ನು ಹಾರಿಸಿದರು. ಅಲ್ಲದೇ ಪ್ರತಿ ಸರಕಾರವನ್ನು ರಚಿಸಿ ಏಳುದಿನಗಳ ಕಾಲ ಆಡಳಿತ ನಡೆಸಿದರು. ಇದು ನಮ್ಮ ಸ್ವಾತಂತ್ರ್ಯ ಸಮರದ ಚರಿತ್ರೆಯಲ್ಲಿ ಅಪರೂಪದ ಘಟನೆ. ಶೋಲಾಪುರದ ಕಮ್ಯೂನ್, ಸ್ವತಂತ್ರ್ಯ ಸರ್ಕಾರ ಘಟನೆಗೆ ಸಾಟಿಯಾದುದು. ಇದನ್ನು 'ದರೋಡೆ' ಎಂದು ಕರೆಯಬಹುದೇ? ತಮಾಶೆ ಎಂದರೆ ಬ್ರಿಟಿಶ್ ಕಮಿಶನರ್ ಕಬ್ಬನ್ ಹೀಗೆ ಬರೆಯುತ್ತಾನೆ-

"ಅಪರಂಪಾರ ಮತ್ತು ಅವನ ಅನುಯಾಯಿಗಳು, ಅವರು ಜನರಿಗೆ ಕೊಟ್ಟ ಭರವಸೆಗಳೇ ಮೊದಲಾದ ಸನ್ನಿವೇಶಗಳಿಂದ ಅವರ ಹಂಚಿಕೆಗಳು ಚೆನ್ನಾಗಿ ಸ್ಥಾಪಿತವಾಗುತ್ತವೆ. ಪ್ರಜೆಗಳನ್ನು ಲೂಟಿ ಮಾಡುವುದು ಅವರ ಉದ್ದೇಶ್ಯವಲ್ಲ. ಬ್ರಿಟಿಷ್ ಪ್ರಭುತ್ವವನ್ನು ಬುಡಮೇಲು ಮಾಡಿ ತಮ್ಮ ಪ್ರಭುತ್ವ ಸ್ಥಾಪನೆ ಮಾಡುವುದೇ ಉದ್ದೇಶವಾಗಿತ್ತು. ನಗರಗಳು, ಹಳ್ಳಿಗಳ ಲೂಟಿ ಮಾಡುವುದು ಅವರ ಇಚ್ಛೆಯಲ್ಲ; ಸರಕಾರದ ಖಜಾನೆಗಳನ್ನು ಲೂಟಿ ಮಾಡುವು ದೊಂದೇ ಅವರ ಉದ್ದೀಶ್ಯ. ಮತ್ತೂರು ಅಮರ ಸುಳ್ಯಗಳ ಉದಾಹರಣೆಗಳಿಂದಿದು ಸ್ಪಷ್ಟವಾಗದಿರದು. ಬಂಡಾಯ ಬೆಳೆಸಿದವರಾದರೂ ಇಲ್ಲಿನ ನಿವಾಸಿಗಳೇ. ಜಿಲ್ಲೆಯ ಇತರ ಕಡೆಗಳಲ್ಲೂ ಬಂಡಾಯ ತಲೆಹಾಕಿತಷ್ಟೆ, ಎಲ್ಲಾ ಊರುಕೇರಿಗಳಲ್ಲಿ ಲೂಟಿಯಾಗಲಿಲ್ಲ. ಬಂಡಾಯಗಾರರು ದೇಶದಲ್ಲೆಲ್ಲ ಲೂಟಿ ನಡೆಸಿದ್ದರೆ ಅದರ ಫಲವನ್ನು ಅವರೇ ಉಣ್ಣಬೇಕಾಗುತ್ತಿತ್ತು.

ಅಂದಿನ ರೈತರಿಗೆ ಇಂದಿನ ಪ್ರಜಾಪ್ರಭುತ್ವದ ಪರಿಕಲ್ಪನೆ ಇದ್ದಿರಲಿಲ್ಲ. ಆದರೆ ಪರರ ಆಡಳಿತವನ್ನು ನಿಶ್ಚಯವಾಗಿ ಕಿತ್ತೊಗೆಯಬೇಕೆಂದಿತ್ತು. ರಾಜಭಕ್ತಿ ಒಂದೆಡೆಯಿದ್ದಿರಬಹುದಾದರೂ ಬ್ರಿಟಿಶರು ಉಪ್ಪಿನ ಮೇಲೆ, ಹೊಗೆಸೊಪ್ಪಿನ ಮೇಲೆ ಏರಿಸಿದ ದರವೂ ರೈವಾರಿ ಪದ್ಧತಿಯ ಚಲಾವಣೆಯೂ ರೈತರನ್ನೇ ಬಡಿದೆಬ್ಬಿಸಿದೆ. ಸುಳ್ಯದ ವ್ಯಾಪ್ತಿಗೆ ಸೇರಿದ ಸುಳ್ಯ, ಹಾಸನದ ಪಶ್ಚಿಮಭಾಗ, ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಭಾಗ, ಸಂಪೂರ್ಣ ಕೊಡಗು ಮತ್ತು ಕೇರಳದ ಉತ್ತರಭಾಗದಲ್ಲಿ ಕಲ್ಯಾಣಸ್ವಾಮಿ, ಅಪರಂಪಾರಸ್ವಾಮಿಗಳ ಮುಂದಾಳ್ತನದಲ್ಲಿ ಹುಲಿಕಡಿದ ನಂಜಯ್ಯ, ಕಾಮಯ್ಯಗೌಡ, ಲಕ್ಷಣ ಖಂಗ, ಗೋಡೆತಮ್ಮಯ್ಯ, ಗೋಡೆ ಅಪ್ಪಯ್ಯ ಮೊದಲಾದವರು ಸೇರಿ ಬ್ರಿಟಿಶರನ್ನು ಹೊರದಬ್ಬಲು ಬಂಡಾಯ ನಡೆಸಿದರು. ಅದು ಅನೇಕ ಕಾರಣಗಳಿಂದ ವಿಫಲವಾಯಿತು. ಹಾಗೆಂದ ಮಾತ್ರಕ್ಕೆ ಅವರ ವೀರತ್ವಕೆ ಚ್ಯುತಿಯಿಲ್ಲ. ಆ ಸ್ವಾತಂತ್ರ್ಯದ ಹಂಬಲ, ಅದಕ್ಕೆ ಅವರು ಮಾಡಿದ ಬಲಿದಾನ ಮತ್ತು ಸಭ್ಯತೆ ಎಂದೆಂದಿಗೂ ಗೌರವಾರ್ಹವಾದವು. ಅದು ನಮ್ಮ ಯುವಪೀಳಿಗೆಗೆ ತಿಳಿಯಬೇಕು. ಅದರಂತೆ ಚರಿತ್ರೆಯ ದಾಖಲೆ ಸರಿಯಾಗಿರಬೇಕು. ಹಾಗೆ ಚರಿತ್ರೆಯ ನಿಜದಾಖಲೆ ಮುಂದೆ ಬಂದಾಗ ಸುಳ್ಯದಂಥ ದಂಗೆಗಳು 'ಅಮರ'ವಾಗುತ್ತವೆ ಅದಕ್ಕೆ ಈ ಪುಸ್ತಕ ಒಂದು ಉದಾಹರಣೆ.

ಈ ಸ್ವಾತಂತ್ರ್ಯ ವೀರರ ಗೌರವಾರ್ಥ ಒಂದು 'ಅಮರಕ್ರಾಂತಿ' ಕಾಲ್ನಡಿಗೆ ಜಾಥಾ ತೆಗೆಯಲಾಗಿತ್ತು. ಇದು ಮಾರ್ಚ್ 30 ರಿಂದ ಏಪ್ರಿಲ್ 5ರ ತನಕ ನಡೆದಿದೆ. ಸುಳ್ಯದಿಂದ ಹೊರಟು ಮಂಗಳೂರಿಗೆ ತಲುಪಿ ಅಲ್ಲಿ ಧ್ವಜಾರೋಹಣದೊಂದಿಗೆ ಮುಗಿಯಿತು. ಮಧ್ಯದ ಊರುಗಳಲ್ಲಿ ತಂಗಿದಾಗ ಪ್ರತಿಕಡೆ ಜಾಥಾಕ್ಕೆ ಸಂಬಂದಿಸಿ ಬೀದಿನಾಟಕ ನಡೆಸಲಾಯಿತು. ಈ 'ಅಮರಕ್ರಾಂತಿ' ಬೀದಿನಾಟಕ ರಚಿಸಿದವರು ಡಾ. ಪ್ರಭಾಕರ್‌ಶಿಶಿಲ. ಇದರಲ್ಲಿ ಟಿಪ್ಪೂಪತನ, ವೆಂಕಟಾದ್ರಿಪತನ, ಮಡಿಕೇರಿಪತನ, ಅಪರಂಪಾರನ ವಿಚಾರಣೆ, ಮಾಮತಿ ತಪ್ಪಲಲ್ಲಿ ಸಂಘಟನೆ, ಬೆಳ್ಳಾರೆಯ ಪತನ ಎಂಬ ಭಾಗಗಳಿವೆ. ಅಲ್ಲಿಯ ಒಂದು ಸಂಭಾಷಣೆ ಹೀಗೆ ಬರುತ್ತದೆ.

ಅಬ್ದುಲ್ಲಾ : ಯಾ ಅಲ್ಲಾಹು! ನಮ್ಮ ಸ್ಥಿತಿ ನೋಡು, ನಾಯಕರೇ ಇಲ್ಲದೆ ನಾವು ಹೋರಾಟ ಬೇಕಾಗಿದೆ.

ಊಕಣ್ಣ : ಸ್ವಾತಂತ್ರ್ಯಕ್ಕಾಗಿ ಹೋರಾಡುವವರು ನಾಯಕರನ್ನು ಸೃಷ್ಟಿಸಲೇಬಾರದು. ಏಕೆಂದರೆ ಆ ನಾಯಕರೇ ಕೊನೆಗೆ ನಮ್ಮ ಸ್ವಾತಂತ್ರ್ಯವನ್ನು ಅಪಹರಿಸಿ ಬಿಡುತ್ತಾರೆ. ಪ್ರಜಾಂದೋಲನ ಪ್ರಜಾಸತ್ತೆಯ ನಿರ್ಮಾಣಕ್ಕೆ ನೆರವಾಗಬೇಕು.

ಈ ಮಾತು ಕಾಲದ ದೃಷ್ಟಿಯಿಂದ ಅಸಂಗತ ಎನಿಸಿದರೂ ಇದೇ ನಾಟಕದ ಪ್ರಕ್ರಿಯೆಗೆ ಪೋಷಕವಾಗೆ ಇದೆ. ಅಲ್ಲದೆ ವರ್ತಮಾನದ ಮುಖಾಂತರ ಚರಿತ್ರೆಯನ್ನೂ ಕಂಡಿರಿಸುವ ಕ್ರಿಯೆಯಲ್ಲಿ ಕಲಾತ್ಮಕತೆಯೊಂದಿಗೆ ನಾಟಕ ಯಶಸ್ವಿಯಾಗಿದೆ. ಇಂಥ ಒಂದು ಉತ್ತಮ ಕಾರ್ಯಕ್ರಮ ಹಾಕಿಕೊಂಡ ಸಮಿತಿ ಅಭಿನಂದನಾರ್ಹ.

- ಡಾ. ಆರ್. ವಿ. ಭಂಡಾರಿ.

ಶತಮಾನದ ಹಗರಣ

ಪುಟ 8 ರಿಂದ

ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನ ಹಾಕಿತು. ಜುಲೈ 30 ರಂದು ಇದು ವಿಚಾರಣೆಗೆ ಬಂತು ಪೋರಂನ ವಕೀಲರು ಈ ಪ್ಯಾಕೇಜ್ ಸಾರ್ವಜನಿ ಹಣವನ್ನು ಖಾಸಗಿ ಟೆಲಿಕಾಂ ಕಂಪನಿಗಳ ಕೊಡಮಾಡಿದೆ, ಸಾರ್ವಜನಿಕ ಹಿತಾಸಕ್ತಿಗೆ ಭಂ ತಂದಿದೆ ಎಂದು ವಾದಿಸಿದರು. ಹೊಸ ವ್ಯವಸ್ಥೆಯಿಂ ಹಳೆಯ ಶುಲ್ಕ ವ್ಯವಸ್ಥೆಯಷ್ಟೇ ಆದಾಯ ಸರಕಾರ ಬರುತ್ತದೆಯೇ ಎಂದು ನ್ಯಾಯಾಲಯ ಸರಕಾರವ ಪ್ರಶ್ನಿಸಿತು. ಆದರೆ ಇವೆರಡನ್ನು ಹೋಲಿಸಲು ಸಾಧ್ಯವಿ ಎಂದು ಈ ಹಿಂದೆಯೇ ದೂರಸಂಪರ್ಕ ಇಲಾಖೆಯ ಟಿಪ್ಪಣಿಯೊಂದು ಹೇಳಿತ್ತು ಎಂಬುದು ಈ ಮೊದಲ ಬಯಲಿಗೆ ಬಂದಿತ್ತು. ಅಂತೂ ಆಗಸ್ಟ್ 1 ರಿಂದ ಹೊ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದಿದ್ದ ಸರಕಾರ ಹುನ್ನಾರ ಸದ್ಯಕ್ಕಂತೂ ಈಡೇರಲಿಲ್ಲ.

ಆಗಸ್ಟ್ 3 ರಂದು ಮುಂದುವರೆದ ವಿಚಾರಣೆಯ ಸಂದರ್ಭದಲ್ಲಿ ಹೈಕೋರ್ಟಿನ ಟಿಪ್ಪಣಿ ಸರಕಾರಕ್ಕೆ ಇನ ಮರ್ಮಭೇದಕವಾಗಿತ್ತು. ದೇಶ ಚುನಾವಣ ಪ್ರಕ್ರಿಯೆಯನ್ನು ಪ್ರವೇಶಿಸಿದ್ದಾಗ ಉಸ್ತುವಾರಿ ಸರಕಾ ಇಂತಹ ಪ್ರಮುಖ ನಿರ್ಣಯ ಕೈಗೊಳ್ಳು ತುರ್ತಾದರೂ ಏನಿತ್ತು - ಇದು ದಿಲ್ಲಿ ಹೈಕೋರ್ಟ್‌ಗ ಅಚ್ಚರಿ ತಂದ ವಿಷಯ ಎಂದು ನ್ಯಾಯಾಧೀಶ ಟಿಪ್ಪಣೆಗಳಿಂದ ಸ್ಪಷ್ಟವಾಗಿತ್ತು.

ಇಷ್ಟೇ ಅಲ್ಲ ಟೆಲಿಕಾಂ ನೀತಿಗೆ ಯಾವುದ ಬದಲಾವಣೆಯನ್ನು ನಿರ್ಧರಿಸಬೇಕಾದ್ದು ಸಂಸ ಎಂದು ಹೈಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಈ ಮೂಲ ಟೆಲಿಕಾಂ ನೀತಿಯಲ್ಲಿ ಇತ್ತೀಚೆಗೆ ಮಾಡಿದ ಬದಲಾವ ನೀತಿಯಲ್ಲಿನ ಬದಲಾವಣೆಯಲ್ಲ, ಹಿಂದಿನ ನೀತಿ ಜಾರಿಯಷ್ಟೇ ಎಂಬ ಬಿಜೆಪಿಯ ಸುಳ್ಳು ಸಾಬೀತಾಗಿ

ದಿಲ್ಲಿ ಹೈಕೋರ್ಟಿನ ವಿಚಾರಣೆ ಈಗ ಆಗಸ 10 ಕ್ಕೆ ಮುಂದೂಡಲ್ಪಟ್ಟಿದೆ, ಚುನಾವಣಾ ಆಯೋಗ ವಿಚಾರಣೆಯೂ ಮುಂದೂಡಲ್ಪಟ್ಟಿದೆ. ಆದರೂ ಪ್ಯಾಕೇಜನ್ನು ಜಾರಿಗೆ ತಂದೇ ತೀರಬೇಕು ಎಂ ಈಗಲೂ ಈ ಸರಕಾರ ಶತಪ್ರಯತ್ನ ನಡೆಸಿ ಇಂದರಿಂದಾಗಿ ವಾಜಪೇಯಿ ಸರಕಾರದ ಜುಲೈ 6 ಈ ಕಾನೂನುಬಾಹಿರ, ಸಂಸತ್ತನ್ನು ನಿರ್ಲಕ್ಷಿ ಸಂವಿಧಾನ ಬಾಹಿರ ಹಾಗೂ ತನ್ನ ಮಂತ್ರಿಗ ಇಲಾಖೆಗಳ ಅಭಿಪ್ರಾಯಗಳನ್ನೇ ಮೂಲೆಗೊತ್ತಿ ನಿರ್ಣಯದ ಹಿಂದೆ ಒಂದು ದೊಡ್ಡ ಹಗರಣವೇ ಇ ಎಂಬ ಬಗ್ಗೆ ಯಾವ ಸಂದೇಹವೂ ಈಗ ಉಳಿದಿ

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ